ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಸೆಪ್ಟಂಬರ್-೨೦೧೨ ಸಂಚಿಕೆ-೨



ಭಾರತವನ್ನು ಪ್ರಪಾತದಿಂದ ಉಳಿಸೋಣ ಬನ್ನಿ !

ಜನಪದ ವಿಚಾರದಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ – ೨೦೧೨
ಸಂಪುಟ – ೧೩
ಸಂಚಿಕೆ – ೨

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ 08236 316344
☎ 08236 299854
e-mail : janapada@yahoo.com
web: janapada.net

ನಾವೆಲ್ಲರು ಒಂದೆ ಜಾತಿ

ನಾವೆಲ್ಲರು ಒಂದೆ ಜಾತಿ, ಒಂದೆ ಮತ,
ಒಂದೆ ಕುಲ;
ನಾವು ಮನುಜರು;
ನರರ ನಡುವಿನಡ್ಡ ಗೋಡೆಗಳನು ಕುಟ್ಟಿ
ಕೆಡಹುವೆವು.
ನಾವು ವಿಲಯರುದ್ರರು!
ಹೊಸ ಬಾಳಿನ ಹೊಸ ಸಮತೆಯ
ಸಮರಸವನು ಸಮವೆವು,
ನಾವು ನವ ವಿಧಾತರು!

ಕ್ರಾಪುತಲೆಯು ಈ ನವೀನ ಯುಗದ
ಜಗದ ಕೇತನ;
ಅದರ ಕೆಳಗೆ ತಂತಿಣಿಸಿದೆ ಯೋದ್ಧೃಗಣ
ವಿನೂತನ:
ಎಲ್ಲೆಕಟ್ಟನೆಲ್ಲ ಮೆಟ್ಟಿ ಮುಂದೋಡುವ
ಯುವಜನ.
'ಎಲ್ಲ ಒಂದೆ' ಎಂಬುದೊಂದೆ ನಮ್ಮ
ಯುದ್ಧಘೋಷಣ!
ಹಳೆಯ ಕೊಳೆಯ ಕಳೆವೆವು,
ನವವ ಶುಭವ ಬೆಳೆವೆವು.
ದವವನಿಲ್ಲಿ ಈ ನೆಲಕೇ ಎಳೆದು ಸೆಳೆದು
ತರುವೆವು,
ನಾವು ಸದಾ ತರುಣರು!

ತೆರೆಬಾಗಿಲು ಹೊರನೋಟದ
ಹೊರೆಹಸುರಿನ ಹಂದರ.
ನಮ್ಮ ಹೃದಯ ಮಂದಿರ;
ಅಲ್ಲಿ ಎಲ್ಲ ಜನಕು ಇದೆ
ಸ್ವಾಗತವು ನಿರಂತರ,
ಚಿರ ಉದಾರ ಸುಂದರ!

– *ಗೋಪಾಲಕೃಷ್ಣ ಅಡಿಗ*

ವಿಚಾರ ದೀಪ್ತಿ

ವಿಧಾನಸಭೆಯ ಅಜ್ಞಾನ

ರಾಜ್ಯದ ಪಶ್ಚಿಮಘಟ್ಟ ವ್ಯಾಪ್ತಿಯ ಹತ್ತು ಪ್ರದೇಶಗಳನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಿರುವ ಯುನೆಸ್ಕೋ ನಿರ್ಧಾರದ ವಿರುದ್ಧ ರಾಜ್ಯ ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಿರುವುದು ದುರದೃಷ್ಟಕರ ಬೆಳವಣಿಗೆ. ಹೆಮ್ಮೆ ಪಡಬೇಕಾದ ವಿಷಯದ ಬಗ್ಗೆ ಆತಂಕ ವ್ಯಕ್ತಪಡಿಸುವಂತಹ ಅಜ್ಞಾನ ವ್ಯಕ್ತವಾಗಿರುವುದು ಬಾಲಿಶವಾಗಿದೆ. ೨೦೦೩ ರಿಂದಲೇ ರಾಜ್ಯ ಸರ್ಕಾರ ಈ ಪ್ರಯತ್ನವನ್ನು ವಿರೋಧಿಸುತ್ತಿದೆ. ಈ ಬಗ್ಗೆ ಕೇಂದ್ರ ಪರಿಸರ ಸಚಿವಾಲಯಕ್ಕೂ ಎರಡು ಬಾರಿ ಪತ್ರ ಬರೆದಿದೆ. ನಮ್ಮ ಪರಿಸರವನ್ನು ಉಳಿಸಿಕೊಳ್ಳಲು ನಮ್ಮ ಜನರೇ ಸಾಕು, ಯುನೆಸ್ಕೋ ನೆರವು ಬೇಡ ಎಂದು ಎಲ್ಲ ಶಾಸಕರು ಅಸಂಗತವಾಗಿ ವಾದಿಸಿದ್ದಾರೆ. 'ಯುನೆಸ್ಕೊ ಘೋಷಣೆ ಬಗ್ಗೆ ರಾಜ್ಯಸರ್ಕಾರಕ್ಕೆ ಅಧಿಕೃತವಾದ ಪತ್ರ ಬಂದಿಲ್ಲ' ಎಂದು ಅರಣ್ಯ ಸಚಿವರು ಹೇಳಿರುವುದು ಅವರ ತಿಳಿವಳಿಕೆಯ ಕೊರತೆಯನ್ನು ಹೇಳುತ್ತದೆ. ಕೇಂದ್ರದಲ್ಲಿ ಎನ್‌ಡಿಎ ಅಧಿಕಾರದಲ್ಲಿದ್ದಾಗ ಈ ಪ್ರಸ್ತಾವವನ್ನು ಯುನೆಸ್ಕೊಗೆ ಕಳುಹಿಸಿಕೊಡಲಾಗಿತ್ತು. ಯುನೆಸ್ಕೊ ಘೋಷಣೆಗೆ ಪಶ್ಚಿಮ ಘಟ್ಟ ಹಾದುಹೋಗುವ ಬೇರೆ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ಕೇರಳ ಮತ್ತು ಗುಜರಾತ್‌ಗಳಲ್ಲಿ ವ್ಯಕ್ತವಾಗದ ವಿರೋಧ ಕರ್ನಾಟಕದಲ್ಲಿ ಏಕೆ ವ್ಯಕ್ತವಾಗುತ್ತಿದೆ? ಅದರಲ್ಲೂ ಕೊಡಗು ಜಿಲ್ಲೆಯಲ್ಲಿಯೇ ಯಾಕೆ ಜೋರಾಗಿ ಕೇಳಿಬರುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳದಷ್ಟು ರಾಜ್ಯದ ಜನ ಮೂರ್ಖರಲ್ಲ. ಅರಣ್ಯ ಸಂಪತ್ತಿನಿಂದ ಶ್ರೀಮಂತವಾಗಿರುವ ಕೊಡಗು ಜಿಲ್ಲೆಯಲ್ಲಿ ಅರಣ್ಯ ಒತ್ತುವರಿ ಮಾಡಿಕೊಂಡಿರುವ ನೆಲಗಳ್ಳರು ಮತ್ತು ಮರಗಳ್ಳರ ಹಾವಳಿ ಮೊದಲಿನಿಂದಲೂ ಇದೆ. ಇಂತಹವರು ತಪ್ಪುಮಾಹಿತಿಗಳ ಮೂಲಕ ಅಮಾಯಕ ಜನರನ್ನು ಯುನೆಸ್ಕೊ ಘೋಷಣೆಯ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ಇಂತಹದ್ದೊಂದು ಸಂಚಿಗೆ ಗೌರವಾನ್ವಿತ ವಿಧಾನಸಭಾ ಅಧ್ಯಕ್ಷರು ಕೂಡಾ ಬೆಂಬಲ ನೀಡುತ್ತಿರುವುದು ಖಂಡನೀಯ. "ನನಗೆ ಜಿಲ್ಲೆಯ ಜನರ ಹಿತ ಮುಖ್ಯ. ಜಿಲ್ಲೆಯ ಅಸ್ತಿತ್ವವನ್ನೇ ಯುನೆಸ್ಕೋ ಕಳೆಯುತ್ತದೆ ಎಂದಾದರೆ ನನಗೆ ಈ ಪೀಠವೇ ಬೇಡ, ಸ್ಪೀಕರ್ ಸ್ಥಾನವನ್ನು ಈಗಲೇ ಬಿಟ್ಟುಕೊಡಲು ಸಿದ್ಧ" ಎಂದು ವಿಧಾನಸಭಾಧ್ಯಕ್ಷರು ಹೇಳಿರುವುದು ಪ್ರಚೋದನಕಾರಿ ಹೇಳಿಕೆಯಾಗಿಯೇ ಕಾಣುತ್ತದೆ. ಪಕ್ಷಭೇದ ಮರೆತು ಎಲ್ಲ ಶಾಸಕರೂ ಇದನ್ನು ವಿರೋಧಿಸುತ್ತಿರುವುದು ಕೂಡ ಮೂರ್ಖತನದ ಪರಮಾವಧಿ.

ಕೇಂದ್ರ ಸರ್ಕಾರಕ್ಕೆ ನಿಯೋಗದಲ್ಲಿ ತೆರಳಿ ವಿಶ್ವಪರಂಪರೆ ಪಟ್ಟಿಗೆ ಸೇರ್ಪಡೆ ಬೇಡ ಎಂದು ವಾದಿಸಲೂ ನಿರ್ಣಯ ಕೈಗೊಂಡಿದ್ದಾರೆ. ಆತಂಕದಿಂದ ವಾದಿಸುತ್ತಿರುವವರೆಲ್ಲಾ, ಯುನೆಸ್ಕೋ ಹಣೆಪಟ್ಟಿಯಿಂದ ಎತ್ತಿನಹೊಳೆ, ಭದ್ರಾ ಮೇಲ್ದಂಡೆಯಂತಹ ನೀರಾವರಿ ಯೋಜನೆಗಳಿಗೆ ಅಡ್ಡಿಯಾಗಲಿದೆ, ಆನೆಗೊಂದಿ ಸೇತುವೆ ನಿರ್ಮಾಣಕ್ಕೆ ಅಡ್ಡಿಯಾಗಿದೆ ಎನ್ನುವ ಎರಡು ಸವಕಲು ಉದಾಹರಣೆಗಳನ್ನು ಕೊಡುತ್ತಾರೆಯೇ ಹೊರತು, ಸಮರ್ಥನೀಯ ವಾದ ಮಂಡಿಸಲು ತೊದಲುತ್ತಿದ್ದಾರೆ. ಈ ವಾದ ನಮ್ಮ ಹಸಿರು ಪರಿಸರವನ್ನು ರಾಜಾರೋಷವಾಗಿ ಲೂಟಿ ಹೊಡೆಯುತ್ತಿರುವವರನ್ನು ಸಮರ್ಥಿಸಿಕೊಳ್ಳುವಂತಿದೆ. ಪರಿಸರವಾದಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಬಗ್ಗೆಯೂ ಆಕ್ರೋಶ ವ್ಯಕ್ತವಾಗಿರುವುದು ಕೂಡ ಅವರ ಮಟ್ಟವನ್ನು ಹೇಳುತ್ತದೆ. ನಮ್ಮ ಪರಿಸರವನ್ನು ಕಾಪಾಡುವ, ಪಶ್ಚಿಮಘಟ್ಟಗಳಲ್ಲಿ ಅಳಿವಿನಂಚಿನಲ್ಲಿರುವ ಅಪರೂಪದ ಜೀವಿಗಳನ್ನು, ತಳಿಗಳನ್ನು ಸಂರಕ್ಷಿಸುವ ಮಾತುಗಳನ್ನಾಡುವುದೇ ಸಂಸ್ಕೃತಿ. ಲೂಟಿಗೆ ಆಸ್ಪದವಾಗುವಂತೆ ಮಾತನಾಡುವುದು ವಿಕೃತಿ. *(ಸಾಭಾರ : ಪ್ರಜಾವಾಣಿ)*

ಭಾರತವನ್ನು ಪ್ರಪಾತದಿಂದ ಉಳಿಸೋಣ ಬನ್ನಿ!

– ಸುರೇಂದ್ರ ಕೌಲಗಿ

ತನ್ನ ಪಾಡಿಗೆ ಬಾಳುವವರ ಬದುಕನ್ನೂ ನರಕವಾಗಿಸುವ ವಿಕೃತ ಪ್ರತಿಭೆ ಸರ್ಕಾರಕ್ಕಿದೆ. - ***ಕೆ.ಪಿ.ಸುರೇಶ್- ಲೇಖಕ, ಚಿಂತಕ***

"**ಭಾ**ರತೀಯರು ನಾವು ಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರರು, ಭಾರತ ವಿಘಟನೆಯಾಗುವುದರಲ್ಲಿ ಸಂದೇಹವಿಲ್ಲ" ಎಂಬ ಮಾತನ್ನು ಅಂದಿನ ಬ್ರಿಟಿಷ್ ಪ್ರಧಾನಿ ವಿನ್ಸೆಂಟ್ ಚರ್ಚಿಲ್ ಹೇಳಿದ್ದರು. ಭಾರತ ದೇಶದಲ್ಲಿಯ ಈಗಿನ ಆಂತರಿಕ ಪರಿಸ್ಥಿತಿಯನ್ನು ಗಮನಿಸಿದಾಗ ವಿನ್ಸೆಂಟ್ ಚರ್ಚಿಲ್‌ರ ಆ ಮಾತು ಎಲ್ಲಿ ಸಾಕಾರಗೊಳ್ಳವುದೊ ಎಂಬ ಭೀತಿ ತಲೆದೋರುತ್ತದೆ. ಅಂತೆಯೇ ಅಮೇರಿಕಾದ ಗುಪ್ತಚರ ವಿಭಾಗವು ತನ್ನ ಗೌಪ್ಯವರದಿಯನ್ನು ಅಲ್ಲಿಯ ಸೆನೆಟ್‌ಗೆ ಕೊಟ್ಟಿದೆ. ಇನ್ನು ಹತ್ತು ವರ್ಷಗಳಲ್ಲಿ ಭಾರತ ವಿಘಟನೆಯಾಗುವುದು ಎಂದು ಅದರಲ್ಲಿ ಹೇಳಲಾಗಿದೆ. ಈ ಮಾತನ್ನು ಕಳೆದ ವರ್ಷ ಮಹಾಚುನಾವಣೆಗೆ ಮುಂಚೆ ಇಂಗ್ಲೆಂಡಿನ ಪಾರ್ಲಿಮೆಂಟಿನ ಇಬ್ಬರು ಪ್ರತಿನಿಧಿಗಳು ಇದರ ಸಮರ್ಥನೆಯನ್ನು ಮಾಡಿದ್ದರು. ಅಲ್ಲದೆ ದೇಶದ ಪ್ರಸಿದ್ಧ ಸಂವಿಧಾನ ತಜ್ಞ ಹಾಗೂ ಪ್ರಖರ ರಾಷ್ಟ್ರವಾದಿ ನಾನೀ ಪಾಲ್ಖೀವಾಲಾರಿಗೆ ಒಂದು ಸಂದರ್ಶನದಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿತ್ತು. "ಭಾರತದ ವಿಘಟನೆ ಆಗುವುದೇ?" ಅದಕ್ಕೆ ಅವರು ದುಃಖ ತುಂಬಿದ ಶಬ್ದಗಳಲ್ಲಿ "ಹಾಂ, ಹಾಗೆಯೇ ಅನಿಸುತ್ತದೆ" ಎಂದು ಉತ್ತರಿಸಿದ್ದರು. ಭಾರತಕ್ಕೆ ಹೊರಗಿನ ಅಪಾಯವೆಷ್ಟಿದೆಯೋ ಅದಕ್ಕಿಂತ ಹೆಚ್ಚು ಅಪಾಯ ಒಳಗಿದೆ. ಆ ಒಳಗಿನ ಅಪಾಯಗಳನ್ನು ಭಾರತೀಯರು ತಿಳಿದುಕೊಂಡು ಅವುಗಳನ್ನು ನಿವಾರಿಸಬೇಕಿದೆ. ಒಂದರ್ಥದಲ್ಲಿ ಭಾರತ ಒಂದು ಭೀಕರ ಪ್ರಪಾತದ ಅಂಚಿನಲ್ಲಿ ನಿಂತಿದೆ. ಆದ್ದರಿಂದ ಭಾರತವನ್ನು ಉಳಿಸಿಕೊಳ್ಳಲು ಭಾರತೀಯರೆಲ್ಲ ಜೊತೆಗೂಡಬೇಕಿದೆ.

ಈಗ ತಾನೆ ಹೊಸ ರಾಷ್ಟ್ರಪತಿ ಆಯ್ಕೆಯಾಯಿತು. ಆಯ್ಕೆಯಾದ ರಾಷ್ಟ್ರಪತಿ ರಾಜಕೀಯ ಮತ್ಸದ್ದಿ, ಚಾಣಾಕ್ಷ ರಾಜಕಾರಣಿ, ಅರ್ಥತಜ್ಞ ಇತ್ಯಾದಿ ಎಲ್ಲವೂ ಆಗಿದ್ದಾರೆ. ಆದರೆ ಮೂಲತಃ ಅವರು ರಾಜಕೀಯ ಜೀವಿ. ತಾವು ಇಂದಿರಾಗಾಂಧೀಯವರ ಕೃಪಾಕಟಾಕ್ಷದಿಂದ ಸಾಮಾಜಿಕ ಜೀವನದಲ್ಲಿ ಬೆಳೆದು ಇಂದು ರಾಷ್ಟ್ರಪತಿಯಾಗಲು ಸಾಧ್ಯವಾಯಿತೆಂದು ಹೇಳಿದ್ದಾರೆ. ಸದಾಕಾಲ ಇಂದಿರಾಗಾಂಧಿಗೆ ಚಿರಋಣಿಯಾಗಿರುವುದಾಗಿ ಹೇಳಿದ್ದಾರೆ. ಅಂದರೆ ಹಿಂದೂ, ಮುಂದೂ ಅವರು ಗಾಂಧೀ ಕುಟುಂಬಕ್ಕೆ ಕೃತಜ್ಞತೆಯಿಂದ ಇರುವಂಥವರಾಗಿದ್ದಾರೆ. ಒಂದು ಮನೆತನದ

ರಾಜಕಾರಣಕ್ಕೆ ಕೃತಜ್ಞತೆಯಿಂದ ಇರುವ ವ್ಯಕ್ತಿ ೨೦೧೪ರಲ್ಲಿ ನಡೆಯಲಿರುವ ಚುನಾವಣಾ ನಂತರದ ರಾಜಕಾರಣದಲ್ಲಿ ಸಂಪೂರ್ಣ ತಟಸ್ಥ ಭಾವನೆಯಿಂದ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆಯೇ? ಭಾರತದಂಥ ಪುರಾತನ, ಸನಾತನ, ವೈವಿಧ್ಯಮಯ ಸಂಸ್ಕೃತಿಯುಳ್ಳ ದೇಶಕ್ಕೆ ತಕ್ಕ ರಾಷ್ಟ್ರಪತಿಯನ್ನು ಆಯ್ಕೆ ಮಾಡಲು ವಿಫಲರಾದುದು ಮೊದಲನೆ ಆತಂಕಕಾರಿ ವಿಷಯವಾಗಿದೆ. ಭಾರತಕ್ಕೆ ಬೇಕಾದುದು ರಾಜಕೀಯ ಹಿನ್ನೆಲೆಯ ರಾಷ್ಟ್ರಪತಿಗಿಂತಲೂ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ರಾಷ್ಟ್ರಪತಿ. ಅಧಿಕಾರದದಲ್ಲಿರುವ ಪ್ರತಿಯೊಂದು ಪಕ್ಷವೂ ತನಗೆ ಅನುಕೂಲವಾಗುವಂಥ ರಾಷ್ಟ್ರಪತಿಯನ್ನು ಬಯಸಿದರೆ ವಿರೋಧಪಕ್ಷಗಳು ಕ್ರಿಯಾನ್ವಿತ ರಾಷ್ಟ್ರಪತಿಯನ್ನು ಬಯಸುತ್ತವೆ. ಸಮಾಜವಾದಿ ಮೀನೂ ಮಸಾನಿ ತಮಗೆ ಪ್ರಧಾನಮಂತ್ರಿಯನ್ನು ತೆಗೆದುಹಾಕುವ ಸಮರ್ಥ ಅಧ್ಯಕ್ಷನು ಬೇಕೆಂದು ಹೇಳಿದ್ದರು. ನಮ್ಮ ಸಂವಿಧಾನದ ಪ್ರಕಾರ ರಾಷ್ಟ್ರಪತಿಯು ದೇಶದ ಮೊದಲನೇ ಪ್ರಜೆಯೂ ಆಗಿರುತ್ತಾನೆ. ದೇಶದ ಮೊದಲನೇ ಪ್ರಜೆ ಇಡೀ ದೇಶದ ಸಂಸ್ಕೃತಿಯನ್ನು ಬಿಂಬಿಸುವ ರೀತಿಯಲ್ಲಿ ಇರಬೇಕೆಂದು ಭಾರತೀಯರು ಬಯಸುತ್ತಾರೆ.

ಭಾರತದ ಈಶಾನ್ಯ ರಾಜ್ಯಗಳಲ್ಲಿಯ ಮುಖ್ಯವಾಗಿ ಅಸ್ಸಾಂ ರಾಜ್ಯದಲ್ಲಿಯ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯನ್ನು ಗಮನಿಸಿದರೆ ದೇಶದ ಐಕ್ಯತೆಯ ಉಳಿಯುವಿಕೆಯ ಬಗ್ಗೆ ಭಯವಾಗುತ್ತದೆ. ಅಸ್ಸಾಂ ಗಲಭೆ ಜನಾಂಗೀಯ ಗಲಭೆಯೆ, ಆರ್ಥಿಕ ಸಮಸ್ಯೆಯಿಂದ ಉಂಟಾಗಿರುವ ಗಲಭೆಯೆ ಅಥವಾ ಸಾಮಾಜಿಕ ಅನ್ಯಾಯದಿಂದ ಉಂಟಾದ ಗಲಭೆಯೆ ಎಂಬುದು ತಿಳಿಯಲಾರದಷ್ಟು ಕ್ಲಿಷ್ಟವಾಗಿದೆ. ಕೇಂದ್ರ ಸರ್ಕಾರವಂತೂ ಈಶಾನ್ಯ ರಾಜ್ಯಗಳ ಸಮಸ್ಯೆಗಳನ್ನು ಪರಿಹರಿಸಲು ಮಿಲಿಟರಿಯನ್ನು ಉಪಯೋಗಿಸುತ್ತಿದೆ. ಅಲ್ಲಿರುವುದು ಮಾನವೀಯ ಸಮಸ್ಯೆಗಳು. ಮಾನವೀಯ ಸಮಸ್ಯೆಗಳನ್ನು ಮಾನವೀಯತೆಯಿಂದ ಬಗೆಹರಿಸಬೇಕೇ ಹೊರತು ಮಿಲಿಟರಿ ಶಕ್ತಿಯಿಂದಲ್ಲ. ಇಂದು ಆ ಪ್ರದೇಶದಲ್ಲಿ ಕೇಂದ್ರ ಸರ್ಕಾರ ಶಿಸ್ತು ಮತ್ತು ಶಾಂತಿಪಾಲನೆಯ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳಿಂದ ಅಲ್ಲಿಯ ಜನ ಬೇಸತ್ತು ಅವರು ಭಾರತ ವಿರೋಧಿಗಳಾಗುತ್ತಿದ್ದಾರೆ. ಅಷ್ಟೇ ಅಲ್ಲ ಅದಕ್ಕೆ ಪ್ರತಿಕ್ರಿಯೆಯಾಗಿ ದೇಶದ ಇತರ ಭಾಗಗಳಲ್ಲಿ ಪ್ರತಿಭಟನೆ ಇತ್ಯಾದಿಗಳು ನಡೆಯುತ್ತಿವೆ. ತುಂಬ ಇತ್ತೀಚಿಗೆ ಮುಂಬಯಿಯ ಆಜ಼ಾದ್ ಮೈದಾನದ ಬಳಿ ನಡೆದ ಗಲಭೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಗಾಯದ ಮೇಲೆ ಬರೆ ಹಾಕುವಂತೆ ಮಹಿಳೆಯರ ಮೇಲೆ ಪೋಲೀಸ್ ಮತ್ತು ಮಿಲಿಟರಿಯವರಿಂದಲೇ ಅತ್ಯಾಚಾರ ನಡೆಯುತ್ತಿದೆ.

ಬಾಂಗ್ಲಾ ದೇಶದಿಂದ ಅವ್ಯಾಹತವಾಗಿ ನಡೆಯುತ್ತಿರುವ ವಲಸೆ ಕೇವಲ ಸ್ಥಾನೀಯ ಸಮಸ್ಯೆಯಾಗಿರದೆ ಬಹು ದೊಡ್ಡ ರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿದೆ. ೨೦೧೦ರ ಮತದಾರರ ಪಟ್ಟಿಯ ಪ್ರಕಾರ ಮತದಾರರ ಏರಿಕೆ ರಾಷ್ಟ್ರ ಮಟ್ಟದಲ್ಲಿ ಶೇ ೧.೬ ರಷ್ಟಾಗಿದ್ದರೆ, ಅಸ್ಸಾಂನಲ್ಲಿ ೧೬ ರಷ್ಟಾಗಿದೆ. ಒಂದು ವರದಿಯ ಪ್ರಕಾರ ಇದುವರೆಗೆ ೧.೫ ಕೋಟಿಯಷ್ಟು ಬಾಂಗ್ಲಾದೇಶಿಗಳು ಅಸ್ಸಾಂಗೆ ಅಕ್ರಮವಾಗಿ ಪ್ರವೇಶ ಪಡೆದಿದ್ದಾರೆ. ಇಂಥದೇ ಸಮಸ್ಯೆ ಗಡಿಯಂಚಿನಲ್ಲಿರುವ ಇತರ ರಾಜ್ಯಗಳಲ್ಲಿಯೂ ಆಗಿದೆ. ಲೇಖಕ ಎಸ್.ಎನ್.ಚಾರಿಯವರ ಪ್ರಕಾರ ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತೆಯ

ಚಟುವಟಿಕೆ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಅಸ್ಸಾಂ ಉಲ್ಫಾ ಎಂಬ ಸಂಘಟನೆ ಹೊಂದಿದ್ದರೆ ನಾಗಾಲ್ಯಾಂಡ್ ರಾಷ್ಟ್ರೀಯ ಸಮಾಜವಾದಿ ಕೌನ್ಸಿಲನ್ನು ಹೊಂದಿದೆ. ಇದು ಸ್ವಾಯುತ್ತ ನಾಗಾಲಸ್ಯಾಂಡನ್ನು ಬಯಸುತ್ತದೆ. ಎಸ್.ಎನ್.ಚಾರಿಯವರ ಪ್ರಕಾರ ಬಹು ಜನಾಂಗೀಯ ಸಂಸ್ಕೃತಿಯ ದೇಶವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುವ ಪ್ರಬುದ್ಧ ರಾಜಕೀಯ ನಾಯಕತ್ವ ಕೇಂದ್ರದಲ್ಲಿ ಇಲ್ಲವಾಗಿದೆ. ದೀರ್ಘಕಾಲದಿಂದ ಈಶಾನ್ಯ ರಾಜ್ಯಗಳು ದೇಶದ ಮುಖ್ಯವಾಹಿನಿಯಿಂದ ದೂರ ಇರುವಿಕೆಯ ಅನುಭವ ಹೊಂದಿವೆ. ಇಂಥ ಸ್ಥಿತಿಯಲ್ಲಿ ದೇಶದ ಉಳಿದೆಡೆಯ ಭಾರತೀಯರ ಕರ್ತವ್ಯವೇನು? ಪುನಃ ದೇಶ ಇಬ್ಭಾಗವಾಗುವುದನ್ನು ಮೂಕ ಪ್ರೇಕ್ಷಕರಾಗಿ ನೋಡುವುದೇ ಅಥವಾ ಸಕಾರಾತ್ಮಕವಾಗಿ, ರಚನಾತ್ಮಕವಾಗಿ ದೇಶದ ಒಗ್ಗಟ್ಟನ್ನು ಉಳಿಸಲು ಕ್ರಿಯಾಶೀಲರಾಗುವುದೆ? ಇದು ರಾಜಕೀಯ ಸಮಸ್ಯೆಯಲ್ಲ ಇದು ಸಾಮಾಜಿಕ ಅಸ್ಮಿತೆಯ ಸಮಸ್ಯೆ. ಈ ಸಮಸ್ಯೆಯನ್ನು ಕೇವಲ ಕೇಂದ್ರ ಸರ್ಕಾರ ಒಂದೇ ತನ್ನ ಮಿಲಿಟರಿ ಬಲದಿಂದ ಬಗೆಹರಿಸಬೇಕೆಂಬ ಭ್ರಮೆಯಿಂದ ಭಾರತೀಯರು ಹೊರಬರಬೇಕಾಗಿದೆ. ದೇಶದ ಉಳಿದೆಲ್ಲ ೨೫ ರಾಜ್ಯಸರ್ಕಾರಗಳು ಮತ್ತು ಅಲ್ಲಿಯ ಜನತೆಯು ಸಕ್ರಿಯವಾಗಿ ಈ ನಿಟ್ಟಿನಲ್ಲಿ ಕೆಲಸಮಾಡಬೇಕಿದೆ. ಆದರೆ ಜಾತಿಯ ರಾಜಕಾರಣದಲ್ಲಿ ಸ್ವಾರ್ಥ ಪೂರ್ತ ರಾಜಕಾರಣದಲ್ಲಿ ತೊಡಗಿರುವ ಪ್ರಾದೇಶಿಕ ರಾಜಕಾರಣಿಗಳು ಈ ರಾಷ್ಟ್ರೀಯ ಸಮಸ್ಯೆ ಕಡೆಗೆ ಗಮನ ಕೊಡ ಬಲ್ಲರೇ? ತಮ್ಮನ್ನು ತಾವೇ ಬೀದಿನಾಯಿಗಳಿಗೆ ಹೋಲಿಸಿಕೊಳ್ಳುತ್ತಿರುವ ರಾಜಕಾರಣಿಗಳಿಂದ ದೊಡ್ಡ ರಾಷ್ಟ್ರೀಯ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಶೀಲರಾಗುವರೆಂದು ನಿರೀಕ್ಷಿಸಲು ಸಾಧ್ಯವೇ? ಇಂಥ ನಿರಾಶಾದಾಯಕ ಪರಿಸ್ಥಿತಿ ದೇಶದಲ್ಲಿರುವಾಗ ಭಾರತದ ಪ್ರಜೆಗಳು ಕೈಕಟ್ಟಿ ಕುಳಿತಿರಲು ಸಾಧ್ಯವಿಲ್ಲ. ಈ ಬಗ್ಗೆ ಏನು ಮಾಡಬೇಕೆಂಬುದನ್ನು ಕುರಿತು ಆಲೋಚಿಸಬೇಕು ಮತ್ತು ಕಾರ್ಯತತ್ಪರರಾಗಬೇಕು. ಮನೆ ಬಳಕೆ ವೆಚ್ಚ ಕುರಿತಂತೆ ೨೦೧೦–೧೨ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಡೆಸಿದ ಸಮೀಕ್ಷೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ ೧೦ರಷ್ಟು ಕಡು ಬಡವರು. ಅವರ ತಿಂಗಳ ತಲಾ ಖರ್ಚು ೫೦೩.೪೯ ರುಪಾಯಿ. ನಗರ ಪ್ರದೇಶದಲ್ಲಿ ಶೇಕಡಾ ೭೦ರಷ್ಟು ಜನರ ನಿತ್ಯದ ತಲಾ ಖರ್ಚು ೪೩.೧೬ ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಅರ್ಧದಷ್ಟು ಜನರ ನಿತ್ಯದ ತಲಾ ಖರ್ಚು ೧೭ ರುಪಾಯಿಗಳಿಗಿಂತಲೂ ಕಡಿಮೆ! ಎರಡು ದಶಕಗಳ ಆರ್ಥಿಕ ಸುಧಾರಣೆ ಮತ್ತು ಹನ್ನೆರಡು ಪಂಚವಾರ್ಷಿಕ ಯೋಜನೆಗಳ ನಂತರ ಈ ದುಸ್ಥಿತಿ ಕಂಡುಬರುವಂತಾಗಿದೆ. ಇನ್ನು ದೇಶದ ಆರ್ಥಿಕ ಸ್ಥಿತಿಯು ಸಂತೋಷಕರವಾಗಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಸರ್ಕಾರದ ಅರ್ಥವ್ಯವಸ್ಥೆಗೆ ಸರಿಸಮಾನವಾಗಿ ಕಪ್ಪು ಹಣದ ಅರ್ಥವ್ಯವಸ್ಥೆ ಕೆಲಸ ಮಾಡುತ್ತಿದೆ. ಹಣದ ಉಬ್ಬರವು ಹೆಚ್ಚಾಗಿಯೇ ಇದೆ. ಡಾಲರ್ ಎದುರಿಗೆ ರುಪಾಯಿ ಮೌಲ್ಯ ಕುಸಿಯುತ್ತಿದೆ. ಇದರಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿದೆ. ವ್ಯಸಾಯೋತ್ಪನ್ನಗಳಿಗೆ ತಕ್ಕ ಬೆಲೆ ಇಲ್ಲದಾಗಿದೆ. ಬೆಳೆವ ರೈತ ತನ್ನ ಪದಾರ್ಥಗಳಿಗೆ ತಕ್ಕ ಬೆಲೆ ಸಿಗದೆ ಕಂಗಾಲಾಗಿದ್ದಾನೆ. ದಿನೇ ದಿನೇ ದೇಶದ ಆರ್ಥಿಕ ಸ್ಥಿತಿ ಸುಧಾರಣೆಗೊಳ್ಳುವುದರ ಬದಲು ಹದಗೆಡುತ್ತಿದೆ. ವಿದೇಶಿ ಸಾಲದ ಮೊತ್ತ ವರ್ಷ ವರ್ಷ ಹಿಗ್ಗುತ್ತಿದೆ. ವಿದ್ಯುತ್

ಅಭಾವ, ಇಂಧನ ಅಭಾವಗಳಂತೂ ನಿತ್ಯ ಸಮಸ್ಯೆಗಳಾಗಿವೆ. ಕೇಂದ್ರ ಸರ್ಕಾರ ದೇಶದ ಅಭಿವೃದ್ಧಿಯನ್ನು ಕೇವಲ ಧನ ಬಲದಿಂದ ಮಾಡಲು ಹೊರಟಿದೆ. ಮಾನವ ಸಂಪನ್ಮೂಲವನ್ನು ಮರೆತಿದೆ. ಹಣದ ನೆರವಿಲ್ಲದೆಯೆ ಯಾವ ಅಭಿವೃದ್ಧಿ ಕಾಮಗಾರಿಯೂ ನಡೆಯದಂಥ ದಯನೀಯ ಸ್ಥಿತಿ ಉಂಟಾಗಿದೆ. ಮಾನವ ದೈಹಿಕ ಶಕ್ತಿ, ಮಾನವ ಬುದ್ಧಿಶಕ್ತಿ, ವಿಚಾರಶಕ್ತಿಗಳೆಲ್ಲವೂ ಶೂನ್ಯವತ್ತಾಗಿವೆ. ದೇಶದ ಪ್ರಜೆಗಳು ಸರ್ಕಾರವೆಂಬ ದೊಡ್ಡ ಯಂತ್ರದ ಬಿಡಿಭಾಗಗಳಂತೆ ಕೆಲಸ ಮಾಡುತ್ತಿದ್ದಾರೆ. ತಮ್ಮ ಅಸ್ತಿತ್ವವನ್ನು ಮರೆತಿದ್ದಾರೆ. ದೇಶ ರಾಜಕೀಯವಾಗಿ ಸ್ವತಂತ್ರವಾಗಿದ್ದರೂ ಪ್ರಜೆಗಳು ಆರ್ಥಿಕವಾಗಿ ದಾಸರಾಗುತ್ತಿದ್ದಾರೆ. ಕ್ಷಾಮದಂಥ ಸಮಸ್ಯೆಯ ನಿವಾರಣೆಗೆ ಜನತೆ ಸ್ವಯಂ ಪ್ರೇರಣೆಯಿಂದ ಪರಿಹರಿಸಿಕೊಳ್ಳಬೇಕಾದುದನ್ನು ಸರ್ಕಾರಗಳು ಹಣದ ಹೊಳೆ ಹರಿಸಿ ಪರಿಹರಿಸಲು ಪ್ರಯತ್ನ ಮಾಡುತ್ತಿವೆ. ಇದಕ್ಕಿಂತಲೂ ಮೂರ್ಖತನದ ಕೆಲಸ ಮತ್ತೊಂದಿರಲಾರದು. ಹೀಗೆ ದೇಶವು ಆರ್ಥಿಕವಾಗಿ ದುರ್ಬಲಗೊಂಡು ಪ್ರಪಾತದಲ್ಲಿ ಬೀಳುವ ಸನ್ನಿವೇಶ ಉಂಟಾಗಿದೆ. ದೇಶದ ಈ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಜನತೆಯ ಪಾತ್ರ ಇಲ್ಲವೇ? ಈ ಮೊದಲು ದೇಶದಲ್ಲಿ ಕ್ಷಾಮ ಉಂಟಾಗಿದ್ದಾಗ ಅಂದಿನ ಪ್ರಧಾನಿ ಲಾಲ ಬಹದ್ದೂರ್ ಶಾಸ್ತ್ರಿ ದೇಶಕ್ಕಾಗಿ ಪ್ರತಿಯೊಬ್ಬರೂ ಒಂದು ಹೊತ್ತಿನ ಊಟವನ್ನು ತ್ಯಾಗ ಮಾಡಬೇಕೆಂದು ಕರೆಕೊಟ್ಟು ದೇಶವಾಸಿಗಳಲ್ಲಿ ದೇಶಾಭಿಮಾನದ ಜನಶಕ್ತಿಯನ್ನು ಉಂಟುಮಾಡಲು ಪ್ರಯತ್ನಿಸಿದ್ದರು. ಅಂಥ ಒಂದು ಪ್ರಯತ್ನ ಇಂದೇಕೆ ನಡೆಯುತ್ತಿಲ್ಲ. ಇದಕ್ಕೆ ಕಾರಣ ದೇಶದ ನಾಯಕರಲ್ಲಿ ಆತ್ಮಶಕ್ತಿಯ ಕೊರತೆ. ಯಾವ ಗ್ರಾಮಗಳು ದೇಶದ ಬೆನ್ನು ಮೂಳೆ ಎಂದು ಭಾವಿಸಲಾಗಿತ್ತೋ ಆ ಗ್ರಾಮಗಳೇ ಇಂದು ಪರಾವಲಂಬಿಗಳಾಗಿವೆ. ಸರ್ಕಾರಗಳಿಂದ ಹೇಗೆ ಹೆಚ್ಚು ಹೆಚ್ಚು ಧನಸಹಾಯ ಪಡೆಯಬೇಕೆಂಬುದೇ ಗ್ರಾಮ ಪಂಚಾಯತಿಗಳ ಧ್ಯೇಯವಾಗಿದೆ. ರಾಜ್ಯ ಸರ್ಕಾರಗಳು ಸಹ ಬರಗಾಲವನ್ನು ಕೇಂದ್ರ ಸರ್ಕಾರದಿಂದ ಹೆಚ್ಚಿನ ಧನ ಸಹಾಯ ಪಡೆಯಲು ಉಪಾಯವನ್ನಾಗಿ ಮಾಡಿಕೊಂಡಿವೆ. ಯಾವ ದೇಶದ ಪ್ರಜೆಗಳು ತಮ್ಮ ಪುರುಷಾರ್ಥವನ್ನು ಕಳೆದುಕೊಂಡಿರುತ್ತಾರೋ ಆ ದೇಶವು ಕೇವಲ ಧನಶಕ್ತಿಯಿಂದ ಮುಂದೆ ಬರಲಾರದು. ಇಂಥ ಪರಿಸ್ಥಿತಿಯಲ್ಲಿ ದೇಶವನ್ನು ಕಟ್ಟುವ ಕೆಲಸ ಎಲ್ಲ ಭಾರತೀಯರದ್ದಾಗಿದೆ. ಜನತೆಯನ್ನು ಹಣಬಲದಿಂದಲೇ ಅಲ್ಲದೆ ವಿವೇಕದ ಬಲದಿಂದ ದೇಶಕಟ್ಟುವ ಸಾಮರ್ಥ್ಯವನ್ನು ಉಂಟುಮಾಡುವ ಪ್ರೇರಣೆ ದೇಶದ ನಾಯಕರಲ್ಲಿ ಇಲ್ಲವಾದರೆ, ಅಧಿಕಾರಿಗಳಲ್ಲಿ ಇಲ್ಲವಾದರೆ ಜನ ಸರ್ಕಾರಕ್ಕೆ ವಿವೇಕ ಹೇಳುವ ಕೆಲಸವನ್ನು ಮಾಡಬೇಕು. ಇತ್ತೀಚೆಗೆ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳು ಬರೆದ ಈ ಮಾತು ಭಾರತೀಯರೆಲ್ಲರ ಅಂತರಾಳದ ಧ್ವನಿಯಾಗಿದೆ. ಅವರ ಪ್ರಕಾರ ಇಂಥ ಸರ್ಕಾರದಲ್ಲಿರುವ ಎಲ್ಲ ಜನಪ್ರತಿನಿಧಿಗಳಿಗೆ ವಿವೇಕ ಉದಯವಾಗಬೇಕಿದೆ. ಅವರಲ್ಲಿ ಉದಯವಾಗದಿದ್ದಲ್ಲಿ ಐ.ಎ.ಎಸ್; ಐ.ಪಿ.ಎಸ್ ಇತ್ಯಾದಿ ಮಾಡಿ ಅವರಿಗೆ ಮಾರ್ಗದರ್ಶನ ಮಾಡುವವರು ಜನಪ್ರತಿನಿಧಿಗಳ ಕಿವಿಹಿಂಡುವ ಕಾರ್ಯ ಮಾಡಬೇಕು. ಅವರೂ ಮಾಡದಿದ್ದರೆ ಜನರೇ ಬಂಡೆದ್ದು ಅವರಿಗೆ ಬುದ್ಧಿ ಕಲಿಸುವ ಹೊಣೆಯನ್ನು ಹೊತ್ತುಕೊಳ್ಳಬೇಕು. ಇಂಥ ಚಳುವಳಿಯನ್ನು ದೇಶದ ಜನತೆ ಮಾಡಬೇಕಿದೆ. ೬೫ ವರ್ಷಗಳಲ್ಲಿ ಸರ್ಕಾರ

ಮಾಡಿರುವ ಕೆಲಸ ಸಮಾಜದಲ್ಲಿಯ ಅಂತಃಶಕ್ತಿಯನ್ನು ಕೊಲ್ಲುವುದೇ ಆಗಿದೆ. ಒಬ್ಬ ಚಿಂತಕ ಹೇಳುವಂತೆ ಈಗ ದೇಶ ಅಳವಡಿಸಿಕೊಂಡಿರುವ ಬಂಡವಾಳಶಾಹಿ ಪದ್ಧತಿಯ ಕಾರಣದಿಂದಾಗಿ ನಮ್ಮ ದೇಶದ ಜನತೆಯಲ್ಲಿ ನಾಲ್ಕು ಪ್ರಕಾರ ವಿಚ್ಛೇದನ ಉಂಟಾಗಿದೆ. ೧) ಶ್ರಮ ಮಾಡುವುದರಿಂದ ದೊರೆಯುವ ಆನಂದವನ್ನು ಶ್ರಮದಿಂದ ವಿಚ್ಛೇದಿಸಿದೆ. ೨) ಶ್ರಮಿಕರನ್ನು ಅವರ ಉತ್ಪಾದನೆಯ ಸಾಧನಗಳಿಂದ ವಿಚ್ಛೇದಿಸಿದೆ. ೩) ವ್ಯವಸ್ಥೆಯಲ್ಲಿ ಕೆಲಸ ಮಾಡುವವರ ಅಂತಃ ಚೇತನದಿಂದ ವಿಚ್ಛೇದನ ಮಾಡಿದೆ. ೪) ಪ್ರಕೃತಿಯಿಂದ ವಿಚ್ಛೇದನ ಮಾಡಿದೆ. ಈ ವಿಚ್ಛೇದನಗಳನ್ನು ದೂರ ಮಾಡುವ ಕೆಲಸವು ಜನಾಂದೋಲನದಿಂದ ಮಾತ್ರ ಸಾಧ್ಯ. ತನ್ಮೂಲಕ ಹೊಸ ಸಭ್ಯತೆ ರಚಿಸುವ ಕೆಲಸವನ್ನು ನಾವು ಭಾರತೀಯರು ಮಾಡಬೇಕಾಗಿದೆ. ಆದರೆ ನಮ್ಮ ಜನರು ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತೈದು ವರ್ಷಗಳಾದರೂ ಭಾಷೆಯ ಹೆಸರಿನಲ್ಲಿ, ನೀರಿನ ಹಂಚಿಕೆಯ ವಿಷಯದಲ್ಲಿ ಬದ್ಧ ವೈರಿಗಳಂತೆ ಕಾದಾಡುತ್ತಾರೆ. ಈ ಕಾದಾಟಕ್ಕೆ ಕುಮ್ಮಕ್ಕು ನೀಡುವಂತೆ ರಾಜ್ಯ ಸರ್ಕಾರಗಳು ಪರಸ್ಪರ ಮಾತುಕತೆಯಿಂದ ಇಂಥ ವಿವಾದಗಳನ್ನು ಬಗೆಹರಿಸಿಕೊಳ್ಳದೆ ಕೋರ್ಟಿನ ಮೆಟ್ಟಿಲನ್ನು ಏರುತ್ತೇವೆ. ಇದಕ್ಕೆ ಉದಾಹರಣೆಯಾಗಿ ಕರ್ನಾಟಕ, ಮಹರಾಷ್ಟ್ರ ಗಡಿ ವಿವಾದ ಮತ್ತು ತಮಿಳುನಾಡು ಕರ್ನಾಟಕ ಕಾವೇರಿ ನೀರಿನ ಹಂಚಿಕೆ ವಿವಾದಗಳನ್ನು ಹೇಳಬಹುದು. ವಿಶಾಲ ನಾಗಾಲ್ಯಂಡ್‌ನ ಬೇಡಿಕೆ (ನಾಗಿಂ) ಕೇಳಿಬರುತ್ತಿದೆ. ದೇಶದ ಜನ ಇಂಥ ಸಣ್ಣ ಪುಟ್ಟ ವಿವಾದಗಳಲ್ಲಿಯೇ ತಮ್ಮ ಶಕ್ತಿಯನ್ನು ಕಳೆದುಕೊಂಡರೆ ಸಮಗ್ರ ಭಾರತವನ್ನು ಕಟ್ಟುವುದಕ್ಕಾಗಿ ಶಕ್ತಿ ಎಲ್ಲಿಂದ ಬರುತ್ತದೆ? ವಿಘಟನಾತ್ಮಕ ಶಕ್ತಿಗಳು ತಲೆ ಎತ್ತುತ್ತಿವೆ. ಅವುಗಳನ್ನು ರಾಜಕೀಯ ಪಕ್ಷಗಳು ಮತದ ಆಸೆಗಾಗಿ ನೀರೆರೆದು ಪೋಷಿಸುತ್ತಿವೆ. ಒಂದರ್ಥದಲ್ಲಿ ಜನತೆ ಮತ್ತು ರಾಜಕೀಯ ಪಕ್ಷಗಳು ದೇಶವನ್ನು ಪ್ರಪಾತದ ಅಂಚಿನಲ್ಲಿ ತಂದು ನಿಲ್ಲಿಸಿವೆ. ನಮ್ಮ ದೇಶದ ಬಡವರ ಸಂಖ್ಯೆ, ಹಸಿದವರ ಸಂಖ್ಯೆ, ನಿರ್ವಸಿತರ ಸಂಖ್ಯೆ, ಅಪೌಷ್ಠಿಕತೆಯ ಮಕ್ಕಳ ಸಂಖ್ಯೆ, ಹಿಂಸಾಚಾರಗಳ ಸಂಖ್ಯೆ ಗಣನೀಯವಾಗಿ ಏರಿದೆ ಎಂಬುದು ಎಷ್ಟು ಜನರಿಗೆ ಗೊತ್ತು? ನಮ್ಮ ಕಾಡುಗಳೂ, ನದಿಗಳೂ ಖನಿಜ ಸಂಪತ್ತೂ ಅಗ್ಗದ ಬೆಲೆಯಲ್ಲಿ ಲೂಟಿಯಾಗುತ್ತಿದ್ದು ಅದರ ದೂರಗಾಮಿ ಪರಿಣಾಮಗಳನ್ನು ಊಹಿಸುವ ಶಕ್ತಿಯನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂಬುದು ಎಷ್ಟು ಜನರ ಅರಿವಿಗೆ ಬಂದಿದೆ? ಹವಾಮಾನ ವೈಪರಿತ್ಯದ ಅಪಾಯಗಳ ಭೀಕರತೆಯೇ ನಮ್ಮ ಜನರ ಮನಸ್ಸಿಗೆ ಹೋಗುತ್ತಿಲ್ಲ. ಇದೆಲ್ಲದರ ಸೂಚನೆಯಾದರೂ ಏನು? ಭಾರತ ದೇಶ ತನ್ನ ಆತ್ಮಸಾಕ್ಷಿಯನ್ನೇ ಕಳೆದುಕೊಂಡಿದೆ! ಅಥವಾ ಅದರ ತಲೆ ಸಂಪೂರ್ಣ ಕೆಟ್ಟಿದೆ ಎಂಬಂಥ ಅಭಿಪ್ರಾಯಕ್ಕೆ ಹಿರಿಯ ಸಮಾಜವಾದಿ ಚಿಂತಕ ಡಾ॥ ಲೋಹಿಯಾ ಬಂದಿದ್ದರು. ಅವರಂಥ ಅನೇಕರ ಈ ಅಭಿಪ್ರಾಯವನ್ನು ಸುಳ್ಳುಮಾಡುವ ಕೆಲಸವನ್ನು ನಾವು ಭಾರತೀಯರು ಮಾಡಬೇಕಿದೆ.

ಇಂದು ನಮ್ಮ ದೇಶದ ಸರ್ಕಾರಗಳು ಯಾವ ರೀತಿಯ ಸಮಾಜ ವ್ಯವಸ್ಥೆಯನ್ನು ದೇಶದಲ್ಲಿ ನಿರ್ಮಿಸಲು ಬಯಸಿವೆ ಎಂಬುದೇ ಗೊತ್ತಾಗುತ್ತಿಲ್ಲ. ಜನರು ಸಹ ಆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇಂದು ಅನುಭವಕ್ಕೆ ಬರುತ್ತಿರುವುದು ಪ್ರಜಾಪ್ರಭುತ್ವವಲ್ಲ. ಅಂದರೆ ಎಲ್ಲರಿಗೂ ಮುಂಬರಿಯುವ ಎಲ್ಲ ಕ್ಷೇತ್ರಗಳಲ್ಲಿ ಸಮಾನ

ಅವಕಾಶವಿರುವ ಪ್ರಭುತ್ವವಲ್ಲ. ಬದಲಿಗೆ ಯಾರ ಬಳಿ ಹಣಬಲವಿದೆಯೋ, ಜಾತಿ ಬಲವಿದೆಯೋ ಅವರೇ ಮುಂದುವರಿಯುವ ವ್ಯವಸ್ಥೆಯುಳ್ಳ ಪ್ರಭುತ್ವ ಇದಾಗಿದೆ. ಅಸಮಾನತೆಯ ಲಾಭವನ್ನು ಮಾವೋವಾದಿಗಳು ಮತ್ತು ನಕ್ಸಲೀಯರು ಪಡೆಯಲು ಹೊಂಚು ಹಾಕುತ್ತಿದ್ದಾರೆ. ಎಲ್ಲೆಲ್ಲಿಯೂ ಹಿಂಸಾಚಾರ ಉಂಟಾಗುತ್ತಿದೆ. ಅಸತ್ಯ, ಹಿಂಸೆ, ಅಸಮಾನತೆ ಇವು ದೇಶದಲ್ಲಿ ತಾಂಡವವಾಡುತ್ತಿವೆ. ಇದು ದೇಶದೊಳಗಿನ ಆತಂಕಕಾರಿ ಸ್ಥಿತಿಯಾದರೆ ಹೊರಗೆ ಚೀನಾ ಮತ್ತು ಪಾಕಿಸ್ತಾನ ದೇಶವನ್ನು ಯಾವಾಗಲೂ ಯುದ್ಧದ ಭೀತಿಯಲ್ಲಿಯೇ ಇಟ್ಟಿವೆ. ಈ ದೇಶಗಳಿಂದ ಸಂಭವಿಸಬಹುದಾದ ಯಾವುದೇ ಘಟನೆಗಳನ್ನು ಎದುರಿಸಲು ಸನ್ನದ್ಧವಾಗಿರುವುದಕ್ಕಾಗಿ ಭಾರತ ತನ್ನ ದೇಶದ ಬಹುಪಾಲು ಆದಾಯವನ್ನು ಶಸ್ತ್ರಾಸ್ತ್ರಗಳಿಗೆ ಮೀಸಲಾಗಿಡುವಂತೆ ಮಾಡಿವೆ. ಸೈನ್ಯಶಕ್ತಿ ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ದೇಶ ತನ್ನ ಅಂತಃಶಕ್ತಿಯನ್ನು ಕಳೆದುಕೊಳ್ಳುತ್ತಿದೆ. ಆಂತರಿಕ ಅಶಾಂತಿ ಮತ್ತು ಬಾಹ್ಯ ಯುದ್ಧದ ಬೀತಿ ನಮ್ಮ ದೇಶವನ್ನು ಕಡಿದಾದ ಪ್ರಪಾತದ ಮುಂದೆ ತಂದು ನಿಲ್ಲಿಸಿದೆ. ಇವೆರಡು ಪ್ರಕಾರದ ಭೀತಿಗಳಿಂದ ಪಾರಾಗುವ ಮಾರ್ಗ ಯಾವುದು? ಸುದೈವದಿಂದ ಆ ಮಾರ್ಗವನ್ನು ಹುಡುಕಿಕೊಂಡು ಹೋಗುವ ಪ್ರಮೇಯ ಭಾರತೀಯರಿಗಿಲ್ಲ. ನಮ್ಮ ದೇಶದ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಆ ಮಾರ್ಗವನ್ನು ತೋರಿಸಿ ಮತ್ತು ಹೇಳಿ ಹೋಗಿದ್ದಾರೆ. ಆ ಮಾರ್ಗಗಳು ಅಂತ್ಯೋದಯ ಹಾಗೂ ಸರ್ವೋದಯ. ಪ್ರಪಂಚ ಕಂಡ ಫಾಸಿಸಂ, ಕಮ್ಯೂನಿಸಂ, ಕ್ಯಾಪಿಟಲಿಸಂ ಇಂಥ ಹಲವಾರು ಬಗೆಯ ಇಸಂಗಳನ್ನು ಮೆಟ್ಟಿ ನಿಲ್ಲುವ ಸಿದ್ಧಾಂತ ಸರ್ವೋದಯ ಸಿದ್ಧಾಂತ. ಇಂದೆಲ್ಲ ಇಸಂಗಳು ಮಾನವ ಕುಲದ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿರುವಾಗ ಪ್ರಪಂಚವನ್ನು ಮತ್ತು ಮಾನವ ಕುಲವನ್ನು ಉಳಿಸುವ ಸಿದ್ಧಾಂತ ಸರ್ವೋದಯ ಸಿದ್ಧಾಂತ ಒಂದೇ. ಇನ್ನು ಅದಕ್ಕಿಂತ ಉತ್ತಮವಾದ ರಾಜಕೀಯ ಸಿದ್ಧಾಂತ ಬೇರೊಂದು ಬರಲಾರದು. ಅಣುಬಾಂಬ್ ಕಂಡು ಹಿಡಿದ ಐನ್‌ಸ್ಟೀನ್‌ನಂಥ ಮಹಾ ವಿಜ್ಞಾನಿಯೂ ಕೂಡ ಜಗತ್ತಿನ ಉಳಿವಿಗಾಗಿ ಗಾಂಧೀ ತೋರಿಸಿದ ಮಾರ್ಗಕ್ಕಿಂತ ಉತ್ತಮ ಮಾರ್ಗ ಇನ್ನೊಂದಿಲ್ಲ ಎಂದು ಹೇಳಿದ್ದಾರೆ. ಇಸ್ಲಾಮಿಕ್ ದೇಶಗಳಲ್ಲಿ ನಡೆಯುತ್ತಿರುವ ವಿವಿಧ ಪ್ರಕಾರದ ಆಂದೋಲನಗಳಿಗೆ ಗಾಂಧೀ ವಿಚಾರ ಪ್ರೇರಣೆ ಕೊಟ್ಟಿದೆ ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಒಂದು ಮಾತನ್ನು ಪದೇ ಪದೇ ಹೇಳಲಾಗುತ್ತದೆ. ಅದು "ಸ್ವಾತಂತ್ರ್ಯವು ಸ್ವತಂತ್ರ್ಯವಿಲ್ಲ" ಎಂಬುದು ನಿಜ. ಈ ಮಾತನ್ನು ಹೇಳಿದವರು ಪ್ರಸಿದ್ಧ ರಾಜಕೀಯ ಚಿಂತಕ ಜೆ.ನೆ.ಶಾರ್ಪ್. ಮುಂದೆ ಅವರು ಹೇಳುವುದೇನೆಂದರೆ ಹೊರಗಿನ ಯಾವ ಶಕ್ತಿಯೂ ಶೋಷಿತ ಜನಾಂಗಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲಾರದು. ಜನರು ತಾವೇ ಆ ಸ್ವಾತಂತ್ರ್ಯವನ್ನು ಪಡೆಯಲು ಕಲಿಯಬೇಕು. ಅದು ಸುಲಭವೇನಲ್ಲ.

ಜನರು ತಮ್ಮ ಬಿಡುಗಡೆಗಾಗಿ ಏನೆಲ್ಲಾ ಬೇಕಾಗಿದೆ ಎಂಬುದನ್ನು ಗ್ರಹಿಸಿದಲ್ಲಿ ಕೈಗೊಳ್ಳಬೇಕಾದ ಕೃತಿಯ ಬಗ್ಗೆ ಯೋಜನೆ ಹಾಕಿಕೊಳ್ಳಬಹುದು. ಬಹಳ ಪರಿಶ್ರಮದಿಂದ ಅಂತಿಮವಾಗಿ ಅದು ಅವರಿಗೆ ಸ್ವಾತಂತ್ರ್ಯ ತಂದು ಕೊಡಬಲ್ಲದು. ನಂತರ ಶ್ರದ್ಧೆಯಿಂದ ಅವರು ಹೊಸ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ರಚಿಸಬಹುದು

ಮತ್ತು ಅದರ ರಕ್ಷಣೆಗಾಗಿ ಸಿದ್ಧರಾಗಬಹುದು. ಈ ಮಾರ್ಗದಲ್ಲಿ ಪಡೆದ ಸ್ವಾತಂತ್ರ್ಯ ಬಹಳ ಕಾಲ ಉಳಿಯುತ್ತದೆ. ದೃಢ ಸಂಕಲ್ಪದ ಜನತೆಯಿಂದ ಅದನ್ನು ಉಳಿಸಿಕೊಂಡು ಹೋಗಬಹುದು ಮತ್ತು ಶ್ರೀಮಂತಗೊಳಿಸಬಹುದು. ಜೆ.ನೆ.ಶಾರ್ಪ್‌ರವರ ಅನುಭವದ ಈ ಮಾತು ನಮ್ಮ ದೇಶದ ಇಂದಿನ ಜನತೆಗೆ ಬಹಳವಾಗಿ ಅನ್ವಯಿಸುತ್ತದೆ. ಈ ದಾರಿಯಲ್ಲಿ ನಡದದ್ದೇ ಆದರೆ ಭಾರತವನ್ನು ಪ್ರಪಾತದಿಂದ ರಕ್ಷಿಸಬಹುದಾಗಿದೆ. ಜೆ.ನೆ.ಶಾರ್ಪ್ ಅಮೇರಿಕಾದ ಗಾಂಧೀವಾದಿಯಾಗಿದ್ದಾರೆ. ಅವರು ಈಜಿಪ್ಟ್‌ನಲ್ಲಿ ಇತ್ತೀಚೆಗೆ ನಡೆದ ಕ್ರಾಂತಿಯಲ್ಲಿ ಭಾಗವಹಿಸಿದ್ದರು. ಅಹಿಂಸೆ ಕುರಿತಾದ ಅವರ ಬರಹಗಳು ಜಗತ್ತಿನಾದ್ಯಂತ ಭದ್ರಹಿತಾಸಕ್ತಿಗಳ ವಿರುದ್ಧ ಹೋರಾಟ ಮಾಡಲು ಪ್ರೇರಣೆ ಕೊಟ್ಟಿವೆ. ಭಾರತವನ್ನು ಪ್ರಪಾತದಿಂದ ಉಳಿಸಲು ಸನ್ನದ್ಧರಾಗೋಣ. ಕಾಲ ಮಿಂಚಿ ಹೋಗುವ ಮುನ್ನ ಎಚ್ಚೆತ್ತುಕೊಳ್ಳೋಣ. ಇಲ್ಲವಾದಲ್ಲಿ ಭಾರತ ದೇಶ ೧೯೪೭ರಲ್ಲಿ ವಿಘಟಿತಗೊಂಡಾಗ ಆದ ಸಾವು ನೋವುಗಳನ್ನು ಪುನಃ ಅನುಭವಿಸಬೇಕಾಗಬಹುದು. ಪ್ರಪಂಚದಲ್ಲಿಯೇ ದೊಡ್ಡದಾದ ಮಾನವ ಉಚ್ಚಾಟನೆಯಾಗದಂತೆ ಪ್ರಯತ್ನಿಸಬೇಕಾಗಿದೆ.

ನಮ್ಮ ದೇಶ ಎಂಥ ಸುಂದರ ದೇಶ ಎಂಬುದನ್ನು ಮಹಾತ್ಮಾ ಗಾಂಧೀಯವರೇ ೧೯೪೬ರಲ್ಲಿ ಹಿಂದಿಯಿಂದ ಇಂಗ್ಲೀಷ್‌ಗೆ ಅನುವಾದಿಸಿದ ಕವನ ತಿಳಿಸುತ್ತದೆ.

ನಾವು ವಾಸವಾಗಿರುವ ಈ ದೇಶದಲ್ಲಿ ದುಃಖವಿಲ್ಲ, ಕಾರ್ಪಣ್ಯವಿಲ್ಲ,
ಭ್ರಮೆಯಾಗಲಿ, ಸಂಕಟವಾಗಲಿ ಇಲ್ಲ. ಮೋಸವಾಗಲಿ,
ದುರಾಸೆಯಾಗಲಿ ಇಲ್ಲ, ಪ್ರೇಮದ ಗಂಗೆ ಹರಿಯುತ್ತದೆ.
ಇಡೀ ಸೃಷ್ಟಿಯೇ ಸಂತೋಷಭರಿತವಾಗಿದೆ,
ಎಲ್ಲ ಮನಸ್ಸುಗಳು ಒಂದೇ ದಿಕ್ಕಿನತ್ತ ಹರಿಯುತ್ತವೆ.
ಸಮಯದ ಚಿಂತೆಗಾಗಿ ಅವಕಾಶವಿಲ್ಲ.
ಎಲ್ಲರ ಅಗತ್ಯಗಳು ನೆರವೇರುತ್ತವೆ.
ಇಲ್ಲಿಯ ವ್ಯವಹಾರವೆಲ್ಲವೂ ನ್ಯಾಯಬದ್ಧ, ಇಲ್ಲಿ ಎಲ್ಲರ ಸ್ವಭಾವವೊಂದೆ.
ಅಭಾವವಾಗಲಿ, ಆರೈಕೆ ಇಲ್ಲದಾಗಲಿ ಇಲ್ಲ.
ಯಾವುದೇ ರೂಪದಲ್ಲಿ ಅಥವಾ ಆಕಾರದಲ್ಲಿ ಸ್ವಾರ್ಥವಿಲ್ಲ.
ಮೇಲಾಗಲಿ, ಕೀಳಾಗಲಿ, ಒಡೆಯನಾಗಲಿ, ಗುಲಾಮನಾಗಲಿ ಇಲ್ಲ.
ಎಲ್ಲವೂ ಪ್ರಜ್ವಲಿತ, ಆದರೂ ಉರಿಯುವ ಧಗೆ ಇಲ್ಲ.
ಈ ದೇಶ ನಿನ್ನಲ್ಲಿದೆ. ಅದು ಸ್ವರಾಜ್ಯ, ಸ್ವದೇಶಿ.
ನಿನ್ನಲ್ಲಿಯೇ ಇರುವ ಮನೆ. ಜಯ! ಜಯ! ಜಯ!

ಯಾರು ಇದನ್ನು ಬಯಸುತ್ತಾರೋ ಅದನ್ನವರು ಪಡೆಯುತ್ತಾರೆ. ಇಂಥ ಸುಂದರ ಭಾರತವನ್ನು ಪ್ರಪಾತದಿಂದ ಉಳಿಸೋಣ ಬನ್ನಿ!

* * *

ಸನ್ಮಾನ್ಯರಿಂದ...

ಅಗಸ್ಟ್ ತಿಂಗಳ ಜನಪದ ವಿಚಾರ ತಲುಪಿದೆ. ಓದಿ ಖುಷಿ ಪಟ್ಟೆ. ಶ್ರೀ ನಾರಾಯಣ ದೇಸಾಯಿಯವರ ಮೈಸೂರು ಭೇಟಿಯ ವಿವರಗಳು ಅವರ ವಿಚಾರ ಧಾರೆ, ಶ್ರೀ ಜಿ.ವಿ. ಕುರಿತಾದ ಶ್ರೀ ಕೊರ್ಗಿ ಅವರ ಲೇಖನಗಳೆಲ್ಲ ಹೊಸ ಮಾಹಿತಿ ನೀಡಿದವು. ಅನಂತಮೂರ್ತಿಯವರ ವಿಚಾರಗಳೊಂದಿಗೆ ನನ್ನ ಸಹಮತವಿದೆ. ಮಾತೃಭಾಷೆ ಬಿಟ್ಟುಕೊಡದೇ ಇಂಗ್ಲಿಷ್ ಮೂಲಕ ಗ್ರಹಣ ಮತ್ತು ಮಾಹಿತಿ ಕೊಡಲು ಸಾಧ್ಯ. ನಾವು–ನೀವು ಉತ್ತರ ಕರ್ನಾಟಕದವರು. ಕನ್ನಡ ಮೂಲಕವೇ ಪ್ರೌಢಶಾಲಾಭ್ಯಾಸ ಮುಗಿಸಿದವರು. ಇಂಗ್ಲಿಷ್ ಮಾಧ್ಯಮದ ಕೊರತೆ ಎಂದಾದರೂ ನಮ್ಮನ್ನು ಕಾಡಿತ್ತೇ?

ನಮ್ಮ ಒಬ್ಬನೇ ಮಗ ವಿಕಾಸನನ್ನು ಕನ್ನಡ ಮಾಧ್ಯಮದ ಮೂಲಕ ಓದಿಸಿದೆವು. ಪತಿ ವಿದೇಶಿ ಡಾಕ್ಟರ್ ಹೊಂದಿದರೆ, ನಾನು ಅಖಿಲ ಭಾರತ ಸೇವೆಯಲ್ಲಿದ್ದು ಪ್ರತಿ ೨ ವರ್ಷಕ್ಕೆ ಬದಲಿ ಅನುಭವಿಸಿದವಳು. ಇನ್ನಾರೇ ಆಗಿದ್ದರೂ ಸಹಜವಾಗಿಯೇ ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸುತ್ತಿದ್ದರು.

ನನ್ನವರ ಅಭಿಪ್ರಾಯ ಬೇರೆ ಆಗಿತ್ತು. ಚಿಕ್ಕ ವಯಸ್ಸಿನಲ್ಲಿ ಮಾತೃಭಾಷೆ ಓದಲು, ಬರೆಯಲು, ಆತ್ಮೀಯವಾಗಿ ಸಂಪರ್ಕಿಸಲು ಕಲಿಯದವ, ಮುಂದೆಂದೂ ಕಲಿಯಲಾರ! ಆದರೆ ಇಂಗ್ಲಿಷ್? ಅದನ್ನು ಕಲಿಸಲು ತಂದೆ–ತಾಯಿ ಕಷ್ಟ ಪಡಬೇಕಾಗಿಲ್ಲ. ವೃತ್ತಿ, ಶಿಕ್ಷಣ, ಲೋಕವ್ಯವಹಾರದ ಪ್ರಶ್ನೆ ಎದುರಾದಾಗ ನಮ್ಮ ಮಗ ಝಕ್ಕಸ್ತ ಇಂಗ್ಲಿಷ್ ಕಲಿತಾನ! ಎನ್ನುವುದು ಅವರ ಖಚಿತ ಅಭಿಪ್ರಾಯವಾಗಿತ್ತು.

ಇಂದು ಅಮೇರಿಕೆಯಲ್ಲಿ ನೆಲೆಸಿರುವ ವಿಕಾಸ್ ೧೭ ವರ್ಷಗಳಿಂದ ನಮ್ಮ ಜನಪ್ರಿಯ ವೆಬ್‌ಸೈಟ್ ನಡೆಸುತ್ತಿದ್ದಾನೆ. ತಂದೆ–ತಾಯಿಗಳ ಇಂಗ್ಲಿಷ್ ಲೇಖನಗಳನ್ನೆಲ್ಲ ತಿದ್ದಿ–ಸಂಪಾದಿಸಿ ವೆಬ್ ಮೂಲಕ ಬಿತ್ತರಿಸುತ್ತಾನೆ. ಆದರೆ ಕನ್ನಡದ ಪ್ರೇಮ ಉಳಿಸಿ ಬೆಳಸಿಕೊಂಡು ಬಂದಿದ್ದಾನೆ. ಬಂದಾಗೆಲ್ಲ ತಪ್ಪದೇ ಸಾಧ್ಯವಿದ್ದಷ್ಟು ಕನ್ನಡ ಪುಸ್ತಕಗಳನ್ನು ತನ್ನೊಡನೆ ಅಮೇರಿಕೆಗೆ ಒಯ್ಯುತ್ತಾನೆ.

ನಿಮ್ಮ ಲೇಖನ ಬಹಳ ಇಷ್ಟವಾಯಿತು. ಆದರೆ ಹೋದ ತಿಂಗಳುಗಳ ನಿಮ್ಮ ಪರಿಶ್ರಮದ ಫಲವಾಗಿ ರಕ್ತದ ಒತ್ತಡ ಹೆಚ್ಚಾಗಿ ಆಸ್ಪತ್ರೆ ಸೇರಬೇಕಾಯಿತೆಂದು ಕೇಳಿ ಕಳವಳವಾಯಿತು. ಈಗ ಪೂರ್ಣ ಚೇತರಿಸಿಕೊಂಡಿರುವಿರೆಂದು ನಂಬಿದ್ದೇನೆ.

– ***ಡಾ. ಜ್ಯೋತ್ಸ್ನಾ ಕಾಮತ್,*** ಬೆಂಗಳೂರು

* * *

ಎಂದಿನಂತೆ ಪತ್ರಿಕೆ ಸಕಾಲಕ್ಕೆ ಬಂದು ಸಂತೋಷವಾಯಿತು. ಶ್ರೀ ನಾರಾಯಣ ದೇಸಾಯಿಯವರ ಪ್ರವಾಸದ ಲೇಖನ ಮನಸೆಳೆಯುವಂತೆ ಇದ್ದು ಜೊತೆಗೆ ನಿಮ್ಮ ಆರೋಗ್ಯದ ಸುದ್ದಿಯನ್ನು ಬಿತ್ತಿತು. ನಿಮ್ಮಂಥ ಕಾರ್ಯಕರ್ತರಿಗೆ ಹೀಗೆ ಖಾಯಿಲೆ ಬರಬಾರದು ಏಕೆಂದರೆ ನೀವು ಇರುವುದು ಸಮಾಜಕಾರ್ಯಕ್ಕಾಗಿ. ಪ್ರಾಯಶಃ ಕೆಲಸ ಹೆಚ್ಚಾಗಿ ಹೀಗಾಯಿತೇನೊ. ವಯಸ್ಸು ಬೇರೆ. ಸಾಕಷ್ಟು ವಿರಾಮ ತೆಗೆದುಕೊಳ್ಳಬೇಕು. ಇದನ್ನು ನಿಮಗೆ ಹೇಳುವುದು ಎಷ್ಟು ವಿಚಿತ್ರ! ಶೀಘ್ರವೇ ಚೇತರಿಸಿಕೊಳ್ಳಿ. ನಿಮ್ಮ ಗೈರುಹಾಜರಿಯಲ್ಲಿ ನಿಮ್ಮ ಮಕ್ಕಳು ಆಶ್ರಮದ ಕೆಲಸವನ್ನು ನಡೆಸಿದ್ದಾರೆ. ಎಲ್ಲರೂ ಅಭಿನಂದನಾರ್ಹರು. ಇದರ ಜೊತೆಗೆ ಸಾವಿರ ರುಪಾಯಿಯ ಚೆಕ್ ಇದೆ. ನಿಮ್ಮ ಆರೋಗ್ಯಕ್ಕೆ ಒದಗಲಿ ಎಂದು ನನ್ನ ಆಶಯ.

ಗಾಂಧೀಜಿಯ ಅವಹೇಳನ ಪತ್ರಿಕೆಗಳಿಗೆ ಹವ್ಯಾಸವಾಗಿದೆ. ಸಮಾಜ ಜೀವನ ರೋಗಿಷ್ಠವಾಗಿದೆ. ಚಿಂತೆಯಾಗುತ್ತದೆ.

– ***ನೀಲತ್ತಹಳ್ಳಿ ಕಸ್ತೂರಿ,*** ಬೆಂಗಳೂರು

ಆಧುನಿಕತೆಯ ಹೊಳಿನಲ್ಲಿ ಸಿಲುಕಿದ ಆದಿವಾಸಿ ಮಹಿಳೆ – ಬುಧ್ನಿ ಮೆಝಾನ್

– ಮೂಲ : ಚಿತ್ರಾ ಪದ್ಮನಾಭನ್; ಕನ್ನಡಕ್ಕೆ : ಎಮ್.ಆರ್.ರಾಮಶೇಷ

ನನ್ನ ಬಾಲ್ಯದ ಗೆಳತಿಯೊಬ್ಬಳ ತಾಯಿ ಸುರ್‌ಜಿತ್ ಕೌರ್ ಎಂಬಾಕೆಗೆ ಬರವಣಿಗೆಯ ಗೀಳು ಹತ್ತಿದೆ. ಸರಿ ಸುಮಾರು ೮೦ ವರ್ಷ ಪ್ರಾಯದ ಆಕೆ ತನ್ನ ಜೀವಮಾನದ ಅನೇಕ ಅನುಭವಗಳನ್ನು ಕಾಗದದ ಮೇಲೆ ಮಸಿಯಲ್ಲಿ ಹಿಡಿದಿಡುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾಳೆ. ೧೯೫೭ರಲ್ಲಿ ಯುವ ಶಿಕ್ಷಕಿಯಾಗಿ ಆಕೆ ಕೈಗೊಂಡ ಶೈಕ್ಷಣಿಕ ಪ್ರವಾಸ ಅವಳ ಅತ್ಯಂತ ಆಪ್ತ ಅನುಭವಗಳಲ್ಲೊಂದು. ತನ್ನ ೨೫ನೇ ವಯಸ್ಸಿನ ಹರಯದಲ್ಲಿ ಆಕೆ ಪ್ರವಾಸ ಕೈಗೊಂಡಾಗ ಸ್ವತಂತ್ರ ಭಾರತಕ್ಕಿನ್ನೂ ಕೇವಲ ೧೦ ವರ್ಷಗಳ ಬಾಲ್ಯ.

ತನ್ನ ಅಂದಿನ ಅನುಭವಗಳ ಬಗ್ಗೆ ಆಕೆ ಉತ್ಸಾಹದಿಂದ ಹೇಳುತ್ತಿದ್ದಾಗ ನನಗೆ ಆಗಿನ ನೆಹರೂ ಕಾಲದ ಭಾರತದ ಜನಸ್ತೋಮ ತನ್ನ ಭವಿಷ್ಯದ ಬಗ್ಗೆ ಕಟ್ಟಿಕೊಂಡಿದ್ದ ಕನಸುಗಳ, ಆಶೋತ್ತರಗಳ ಸ್ಪಷ್ಟ ಚಿತ್ರ ಮೂಡಹತ್ತಿತು.

ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ ಹಾಗೂ ಪಶ್ಚಿಮ ಬಂಗಾಲ ರಾಜ್ಯಗಳ ಆಕೆಯ ಪ್ರವಾಸದಲ್ಲಿ ನಾವು ಸಾಮಾನ್ಯವಾಗಿ ಸೇರಿಸುವ, ಧಾರ್ಮಿಕ, ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ವ್ಯಾವಹಾರಿಕ ತಾಣಗಳಾದ ಕಾನ್ಪುರ, ವಾರಣಾಸಿ, ಪ್ರಯಾಗ, ಲಖ್ನೋ, ಗ್ವಾಲಿಯರ್, ಕೊಲ್ಕತ್ತಾ ಇತ್ಯಾದಿಗಳ ಜೊತೆಜೊತೆಗೆ ದಾಮೋದರ್ ವ್ಯಾಲಿ ನಿಗಮದವರು ಅಂದಿನ ಬಿಹಾರ (ಇಂದಿನ ಝಾರ್ಖಂಡ್) ದಲ್ಲಿ ಕಟ್ಟತೊಡಗಿದ್ದ ಅಣೆಕಟ್ಟು, ಪಶ್ಚಿಮ ಬಂಗಾಲದ ಚಿತ್ತರಂಜನ್‌ನಲ್ಲಿ ಬರುತ್ತಿದ್ದ ರೈಲ್ವೇ ಇಂಜಿನ್ ಕಾರ್ಖಾನೆ, ಮಧ್ಯಪ್ರದೇಶದ ಕಾಟ್ನಿಯಲ್ಲಿನ ಸಿಮೆಂಟ್ ಫ್ಯಾಕ್ಟರಿಗಳೂ ಸೇರಿದ್ದವು. "ಅಧುನಿಕ ಭಾರತದ ದೇವಾಲಯಗಳೆಂದು" ನೆಹರು ಹೆಸರಿಸಿದ ಈ ತಾಣಗಳು ಹೊಸ ಭಾರತ ಕಟ್ಟ ಹೊರಟ ನವ ಜನಾಂಗದ ಆಶೋತ್ತರಗಳ ಪ್ರತಿಬಿಂಬವಾಗಿದ್ದವು.

ಅಂದಿನ ಯುವತಿ ಸುರ್ಜಿತ್ ಕೌರ್ ಹಾಗೂ ಅವರಂತಹ ಲಕ್ಷಾಂತರ ಯುವಕ-ಯುವತಿಯರನ್ನೊಳಗೊಂಡ, ಸ್ವತಂತ್ರ ಭಾರತದ ಯುವಜನಾಂಗದ ಕಣ್ಣುಗಳಲ್ಲಿ ಕಂಡುಬರುತ್ತಿದ್ದ ಹೊಳಪು, ಭವಿಷ್ಯದ ಬಗ್ಗೆ ಅವರು ಹೊಂದಿದ್ದ ವಿಶ್ವಾಸ ಹಾಗೂ ನಂಬಿಕೆ ಇವುಗಳನ್ನು ಪುಷ್ಟೀಕರಿಸುವಲ್ಲಿ ಅಂದಿನ ಬಾಲಿವುಡ್ ಸಿನಿಮಾಗಳೂ ಪೂರಕವಾಗಿದ್ದವು. ಅಂದಿನ ಸಿನಿಮಾ ಹಾಡೊಂದು ಇದಕ್ಕೆ ಉತ್ತಮ ಉದಾಹರಣೆ "ಛೋಡೋ ಕಲ್ ಕೀ ಬಾತೇ, ಕಲ್ ಕೀ ಬಾತ್ ಪುರಾನಿ, ನಯೆ ದೌರ್ ಸೆ ಲಿಖೇಂಗೆ, ಮಿಲ್ ಕರ್ ನಯೀ ಕಹಾನೀ ಹಮ್ ಹಿಂದೂಸ್ತಾನಿ, ಹಮ್

ಹಿಂದೂಸ್ತಾನಿ" ("ಬಿಡಿ ನೆನ್ನೆಯ ಸಂಗತಿಗಳನ್ನು, ಅವಾಗಲೇ ಹಳತು ಹಳಸು, ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು")

ಹೊಸದಾಗಿ ಕಟ್ಟುತ್ತಿದ್ದ ಅಣೆಕಟ್ಟೊಂದರ ಬಳಿ ಸುನಿಲ್‌ದತ್ ಅವರನ್ನೊಳಗೊಂಡು ಚಿತ್ರಿತವಾದ "ಹಮ್ ಹಿಂದೂಸ್ತಾನಿ" ಚಿತ್ರದ ಈ ಜನಪ್ರಿಯ ಹಾಡು ಅಂದಿನ ಜನಾಂಗದ ಕನಸುಗಳಿಗೆ ಹಿಡಿದ ಕನ್ನಡಿಯಂತಿತ್ತು. ಅಧುನಿಕ ವಿಜ್ಞಾನ – ತಂತ್ರಜ್ಞಾನದ ಬಗೆಗೆ ಅಚಲ ಶ್ರದ್ಧೆ, ಅದರ ಶಕ್ತಿಯನ್ನು ವೈಜ್ಞಾನಿಕ ಯೋಜನಾಕ್ರಮದಲ್ಲಿ ಬಳಸಿ ಸಾಧಿಸಬಹುದಾದ ಪ್ರಗತಿ ಹಾಗು ತತ್ಫಲವಾಗಿ ಮೂಡಲಿರುವ ಸಮೃದ್ಧಿ – ಇವುಗಳೇ ಆ ನೆಹರೂ ಪ್ರಣೀತ ನವಭಾರತದ ಕನಸುಗಳೆಂಬ ಹೆಮ್ಮರದ ಮೂಲಬೀಜಗಳು.

ಭಾರತದ ಇಭ್ಭಾಗವೆಂಬ ಘೋರಯಾತನೆಯಿಂದ ಆಗಷ್ಟೇ ಚೇತರಿಸಿಕೊಳ್ಳುತ್ತಿದ್ದ ಸುರ್‌ಜಿತ್ ಕೌರ್ ಪೀಳಿಗೆಗೆ "ಪ್ರಗತಿಶೀಲ ಆಧುನಿಕ ಭಾರತ"ದ ಈ ಹೊಸಕನಸು ಅಪ್ಯಾಯಮಾನವಾಗಿ ಕಂಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಅದು ಸ್ವಾಭಾವಿಕವೇ ಸರಿ. ನಿವೃತ್ತಿ ಹೊಂದಿ, ವಿಶ್ರಾಂತ ಜೀವನ ನಡೆಸುತ್ತಿರುವ ಸುರ್‌ಜಿತ್ ಕೌರ್, ಇತ್ತಿಚೆಗೆ ತನ್ನ ಕಾಲದ "ಆಧುನಿಕ ದೇವಾಲಯ"ಗಳ ಬಗ್ಗೆ ನನ್ನನ್ನು ವಿಚಾರಿಸಿದಾಗ, ಆ ಬಗ್ಗೆ ಆಕೆ ತೋರಿದ ಕಳಕಳಿ, ನನ್ನನ್ನು ಬಡಿದೆಬ್ಬಿಸಿತು. ನಮ್ಮ ಹಿರಿಯರ ಶ್ರದ್ಧಾಕೇಂದ್ರಗಳಾಗಿದ್ದ, ಅಂದಿನ ತಲೆಮಾರಿನ ಕನಸಿನ ಪ್ರತೀಕಗಳಾಗಿದ್ದ "ಈ ಪವಿತ್ರ ತಾಣಗಳ" ಸ್ಥಿತಿಗತಿಗಳ ಬಗ್ಗೆ ಇತ್ತೀಚಿನ ಮಾಹಿತಿ ಸಂಗ್ರಹಣೆಯ ಕಾರ್ಯಕ್ಕೆ ನನ್ನನ್ನು ದೂಡಿತು. ಅಷ್ಟೇ ಅಲ್ಲ, ಬುಧ್ನಿ ಮೆಝೂನ್ ಎಂಬ ಸಂತಾಲ ಆದಿವಾಸಿ ಹೆಂಗಸಿನ ಕ(ವ್ಯ)ಥೆಗೂ ಮುಖಾಮುಖಿಯಾಗಿಸಿತು. ಬಂಡೆಯೊಡೆದು ಕಟ್ಟಿದ ಹೆದ್ದಾರಿಯ ಪಕ್ಕದಲ್ಲಿ ಬಿದ್ದಿರುವ ಬಂಡೆಯ ಅನಾಥ ತುಂಡಂತೆ ಇರುವ ಬುಧ್ನಿಯ ಬದುಕು ನಮ್ಮ ೫೪ ವರ್ಷದ ಯಶೋಗಾಥೆಯ ಆಳದಲ್ಲಡಗಿರುವ ಘನೀಭೂತ ನೋವಿನ ಕಥೆಯೆಂಬುದು, ನಮ್ಮ ಸತಂತ್ರ ಭಾರತ ಇಟ್ಟ ಭಾರಿಹೆಜ್ಜೆಗಳ, ಆ ಭಾರದ ಹಿಂಸೆಯ ನೋವುಗಳ ರೂಪಕವಾದೀತೆಂದು ನನಗಾಗಲೀ, ಸುರ್‌ಜಿತ್ ಕೌರ್ ಜನಾಂಗಕ್ಕಾಗಲೀ ಕಲ್ಪನೆಗೂ ದಕ್ಕದ ಸಂಗತಿ.

ಬುಧ್ನಿ ಮೆಝೂನ್ ಎಂಬ ಸಂತಾಲ ಆದಿವಾಸಿ ಹೆಣ್ಣುಮಗಳು ಅಕಸ್ಮಾತ್ ನನ್ನ ಕಣ್ಣಿಗೆ ಬಿದ್ದದ್ದು, ಸುರ್‌ಜಿತ್ ಕೌರ್ ಅವರ ಪ್ರವಾಸದ ಒಂದು ಮುಖ್ಯ ಅಂಗವಾಗಿದ್ದ ಮೈಥಾನ್ ಆಣೆಕಟ್ಟಿನ ಬಗ್ಗೆ ಮಾಹಿತಿ ಸಂಗ್ರಹ ಮಾಡುತ್ತಿದ್ದಾಗ. ಝೂರ್ಖಂಡ್ ರಾಜ್ಯದ ಧನಬಾದ್ ಜಿಲ್ಲೆಯಂಚಿನಲ್ಲಿ ಪಶ್ಚಿಮ ಬಂಗಾಲರಾಜ್ಯಕ್ಕೆ ಹೊಂದಿಕೊಂಡಂತಿರುವ ಈ ಆಣೆಕಟ್ಟು ದಾಮೋದರ್ ನದಿ ಕಣಿವೆಯಲ್ಲಿ ಕಟ್ಟಿದ ಮೂರನೆಯ ಅಣೆಕಟ್ಟು. ಅಮೇರಿಕದ ಟೆನೆಸ್ಸಿ ಕಣಿವೆ ಪ್ರಾಧಿಕಾರದ ಮಾದರಿಯಲ್ಲಿ ೧೯೪೮ರಲ್ಲಿ ರೂಪುಗೊಂಡ ದಾಮೋದರ್ ಕಣಿವೆ ಪ್ರಾಧಿಕಾರ (Damodar Valley Corporation – DVC) ಕಟ್ಟಿದ ಈ ಮಹತ್ವಾಕಾಂಕ್ಷಿ ವಿವಿಧೋದ್ದೇಶ ಅಣೆಕಟ್ಟು ಸರಿಸುಮಾರು, ಸುರ್‌ಜಿತ್ ಕೌರ್ ಅವರು ಅಲ್ಲಿ ಪ್ರವಾಸ ನಡೆಸಿದ ಕಾಲದಲ್ಲೇ ರಾಷ್ಟ್ರಕ್ಕೆ "ಅರ್ಪಿತ"ವಾಗಿತ್ತು. ಈ ಆಣೆಕಟ್ಟಿನ ಬಗ್ಗೆ ವಿಷಯ ಸಂಗ್ರಹಿಸುತ್ತಿದ್ದಾಗ ನನ್ನ ಗಮನ ಅಲ್ಲೇ ಪಕ್ಕದಲ್ಲೇ, ಪಶ್ಚಿಮ ಬಂಗಾಲ ರಾಜ್ಯದ

ಪುರೂಲಿಯಾ ಜಿಲ್ಲೆಗೆ ಹೊಂದಿಕೊಂಡಂತಿರುವ ಧನಬಾದ್ ಜಿಲ್ಲೆಯ ಪಾಂಚೆತ್ ಎಂಬಲ್ಲಿ ಕಟ್ಟಲಾದ ನಾಲ್ಕನೆಯ ಅಣೆಕಟ್ಟಿನ ಕಡೆಗೆ ಹರಿಯಿತು. "ಬಂಗಾಲದ ವ್ಯಥೆ"ಯೆಂದೇ ಪ್ರಖ್ಯಾತವಾಗಿದ್ದ ದಾಮೋದರ್ ನದಿಗೆ ಅಡ್ಡವಾಗಿ ಕಟ್ಟಲಾಗಿರುವ ಈ ಅಣೆಕಟ್ಟು ಅಂದಿನ ಕಾಲಕ್ಕೆ ಅತಿ ದೊಡ್ಡ ಅಣೆಕಟ್ಟಾಗಿತ್ತು; ಅಷ್ಟೇ ಅಲ್ಲ, ಅಂದಿನ ಕಾಲದ ೧೯ ಕೋಟಿ ರೂ ವೆಚ್ಚದಲ್ಲಿ ಕಟ್ಟಲಾದ ಈ ಭಾರಿ ಆಣೆಕಟ್ಟಿನ ಉದ್ಘಾಟನಾ ಸಮಾರಂಭ ೧೯೫೯ರ ಡಿಸೆಂಬರ್ ೬ರಂದು ನಡೆದಾಗ, ಸ್ವತಃ ಪ್ರಧಾನಮಂತ್ರಿ ನೆಹರೂ ಅವರೇ ಸಮಾರಂಭವನ್ನಲಂಕರಿಸಿದ್ದರು. ಜೊತೆಗೆ ಅವರು ತಮ್ಮದೇ ಆದ ಶೈಲಿಯಲ್ಲಿ ಆ ಸಮಾರಂಭ ನಡೆಯಬೇಕೆಂದು ಒತ್ತಾಯಿಸಿ, ವಿದ್ಯುತ್ ಉತ್ಪಾದನಾ ಕೇಂದ್ರದ ಉದ್ಘಾಟನೆಯ ಗುಂಡಿಯೊತ್ತುವ ಕಾರ್ಯವನ್ನು ಆ ಅಣೆಕಟ್ಟು ಕಟ್ಟಿದ ಕೂಲಿಗಳಲ್ಲೊಬ್ಬಳಾದ ೧೫ ವರ್ಷ ವಯಸ್ಸಿನ ಬುಧ್ನಿ ಮೆಝಾನ್ ಎಂಬ ಸ್ಥಳೀಯ ಆದಿವಾಸಿ ಸಂತಾಲ್ ಕನ್ಯೆಯ "ಹಸ್ತ"ದಿಂದ ನೆರವೇರಿಸಿದ್ದರು. ಬಹಳ ಹುಡುಕಿದ ನಂತರ ಆ ಸಮಾರಂಭದ ಚಿತ್ರ ಕೂಡ ನನಗೆ ನೆಹರೂ ಸ್ಮಾರಕ ಸಂಗ್ರಹಾಲಯದಲ್ಲಿ ಸಿಕ್ಕಿತು. ಆದಿವಾಸಿ ಕನ್ಯೆಯೊಬ್ಬಳ ಮುಗ್ಧತೆ ಮತ್ತು ನೆಹರೂ ಅವರ ಉತ್ಸಾಹ ವನ್ನು ತೋರಿಸುವ ಈ ಕಪ್ಪು ಬಿಳುಪು ಫೋಟೋ ಕಾಲನ ಮಹಿಮೆಯಿಂದಾಗಿ ಮಾಸಿದೆಯಾದರೂ, ಆ ಚಿತ್ರದಲ್ಲಿ ಕಂಡುಬರುವ ಅಂದಿನ ಹುರುಪು ಮಾಸಿಲ್ಲ.

ಮುಂದಾದ ವಿಶೇಷ ಬಹಳ ಜನರ ಅರಿವಿಗೆ ದಕ್ಕಿಲ್ಲ. ಸಮಾರಂಭದಲ್ಲಿ ನೆಹರೂ ಅವರಿಗೆ ಬುಧ್ನಿ ಹಾರ ಹಾಕಿದ್ದರಿಂದ ಅವಳು ಸಂತಾಲರಲ್ಲದ ನೆಹರೂ ಅವರ ಪತ್ನಿಸಮಾನಳಾದಳೆಂದು ತಮ್ಮ ಸಂಪ್ರದಾಯದ ಪ್ರಕಾರ ನಿರ್ಧರಿಸಿದ ಕರ್ಬೋನಾ ಹಳ್ಳಿಯ ಸಂತಾಲ್ ಆದಿವಾಸಿ ಸಮುದಾಯ ಅವಳಿಗೆ ಬಹಿಷ್ಕಾರ ಹಾಕಿ ಅವಳನ್ನು ಊರಿಂದ ಹೊರಹಾಕಿತು. ಬದುಕುವುದೇ ಹೀಗೆ ದುಸ್ತರಗೊಂಡ ನಂತರ ಬುಧ್ನಿಗೆ ಆಸರೆ ದೊರೆತದ್ದು ಪಾಂಚೆತ್ ನಿವಾಸಿ ಸುಧೀರ್ ದತ್ತ ಅವರ ಮನೆಯಲ್ಲಿ. ಅವರಿಂದ ಒಂದು ಹೆಣ್ಣುಮಗುವನ್ನೂ ಕೂಡ ಬುಧ್ನಿ ಪಡೆದಳು. ಬಹಿಷ್ಕಾರದ ಜೊತೆಜೊತೆಯಾಗಿಯೇ ಹುಟ್ಟಿ ಆಜೀವ ಪರ್ಯಂತ ಅಜ್ಞಾತವಾಗಿ ಬದುಕಬೇಕಾಗಿದ್ದ ದೌರ್ಭಾಗ್ಯ ಆ ಮಗುವಿನದಾಗಿತ್ತು. ೧೯೬೨ರಲ್ಲಿ ದಾಮೋದರ್ ಕಣಿವೆ ಪ್ರಾಧಿಕಾರದ ನೌಕರಿಯಿಂದ ಹೊರಹಾಕಲ್ಪಟ್ಟ ಬುಧ್ನಿ ಜೀವನ ಸಾಗಿಸಲು ಸಣ್ಣ ಪುಟ್ಟ ಕೂಲಿನಾಲಿ ಕೆಲಸಗಳ ಮೊರೆ ಹೋಗಬೇಕಾಯಿತು. ೧೯೮೫ರಲ್ಲಿ ದಿಲ್ಲಿಗೆ ಹೋದ ಬುಧ್ನಿ ಅಲ್ಲಿ ನೆಹರೂರವರ ಮೊಮ್ಮಗನಾದ ಅಂದಿನ ಪ್ರಧಾನಿ ಶ್ರೀಯುತ ರಾಜೀವ್ ಗಾಂಧಿ ಆವರನ್ನು ಭೇಟಿ ಮಾಡಿ ತನಗೆ ದಾಮೋದರ್ ಕಣಿವೆ ಪ್ರಾಧಿಕಾರದಲ್ಲಿ ಮತ್ತೆ ನೌಕರಿ ಕೊಡಿಸಬೇಕೆಂಬ ಬೇಡಿಕೆಯನ್ನಿಟ್ಟಳಾದರೂ ಅದು ಫಲಕಾರಿಯಾಗಲಿಲ್ಲ.

ಬುಧ್ನಿ ಬಗೆಗಿನ ಕೊನೆಯ ತಂತು ಸಿಕ್ಕಿದ್ದು, www.ambedkar.org ಎಂಬ ಅಂತರ್ಜಾಲ ತಾಣದಲ್ಲಿ ಪ್ರಕಟಗೊಂಡ ವರದಿಯೊಂದರಲ್ಲಿ. "ತನ್ನ ಸಮುದಾಯದಿಂದ ಬಹಿಷ್ಕೃತಗೊಂಡ ನೆಹರೂರವರ "ಆದಿವಾಸಿ ಪತ್ನಿ" ಬಡತನದಿಂದ ಕಂಗಾಲು" ಎಂಬ ಶೀರ್ಷಿಕೆಯಡಿ ಪ್ರಕಟವಾದ ಈ ಲೇಖನದಲ್ಲಿ ಬುಧ್ನಿಯ ಜೀವನದ ವಿವರಗಳನ್ನು ಉಲ್ಲೇಖಿಸಿತ್ತು. ಆಲ್ಲಿ ತಿಳಿಸಿದ ಪ್ರಕಾರ, ೫೮ ವರ್ಷದ ಬುಧ್ನಿ ತಾನು

ಮತ್ತೆ ಕರ್ಬೋನ ಗ್ರಾಮಕ್ಕೆ ಹಿಂದಿರುಗುವ ಅವಕಾಶ ಸಿಕ್ಕರಷ್ಟೇ ಸಾಕು ಎಂಬ ಅಳಲನ್ನು ವ್ಯಕ್ತ ಪಡಿಸಿದ್ದಳು. ಇದನ್ನು ಓದಿದ ನನಗೆ ನಂಬಿಕೆಯೇ ಬರಲಿಲ್ಲ. ಬುಧ್ನಿಯನ್ನು ನೇರ ಭೇಟಿ ಮಾಡಿ, ಅವಳೊಡನೆ ಮಾತಾಡಿ ಸತ್ಯ ಅರಿಯುವ ಆಸೆ ಬಲವಾಯಿತು. ನಾನು ನೆಹರೂ ಸಂಗ್ರಹಾಲಯದಲ್ಲಿ ಕಲೆ ಹಾಕಿದ್ದ ಫೋಟೋದಲ್ಲಿ ಕಂಡ ಬುಧ್ನಿಯ ಸ್ಪಷ್ಟ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿತ್ತು. ಆಕೆ ಧರಿಸಿದ್ದ ಒಡವೆಗಳು, ಆಕೆಯ ಆರೋಗ್ಯವಂತ ಕಡುಗಪ್ಪು ಕೈಯನ್ನಲಂಕರಿಸಿದ್ದ ಬೆಳ್ಳಿ ಬಳೆಗಳು, ನನ್ನ ನೆನಪಲ್ಲಿ ಸ್ಥಿರಗೊಂಡಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಆಕೆಯ ಕಣ್ಣಲ್ಲಿ ಮಿಂಚುತ್ತಿದ್ದ, ಮುಖದಲ್ಲಿ ಹೊರಹೊಮ್ಮುತ್ತಿದ್ದ ಅಮಾಯಕ ಮುಗ್ಧತೆ ನನ್ನ ಮನಃಪಟಲದಲ್ಲಿ ಅಚ್ಚಳಿಯದೇ ನಿಂತಿತ್ತು. ಸುರ್‌ಜಿತ್ ಅವರ ಪ್ರವಾಸ ತಾಣಗಳ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಬದಿಗಿಟ್ಟು ಬುಧ್ನಿಯ ಬಗ್ಗೆ ವಿವರಗಳನ್ನು ಕಲೆ ಹಾಕತೊಡಗಿದೆ.

ಪಾಂಚೇತ್ ಅಣೆಕಟ್ಟಿನ ಉದ್ಘಾಟನೆ ಅಂದಿನ ಕಾಲದ ವೃತ್ತಪತ್ರಿಕೆಗಳಲ್ಲಿ, ವಿಶೇಷ ಉತ್ಸಾಹದಲ್ಲಿ ವರದಿಯಾಗಿತ್ತು. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ವರದಿ "ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಭಾರತ; ಭಾರಿ ಅಣೆಕಟ್ಟುಗಳು ನಮ್ಮ ಧೃಡ ನಿರ್ಧಾರದ ಪ್ರತೀಕ – ನೆಹರೂ" ಎಂಬ ಶೀರ್ಷಿಕೆಯಡಿ ಪ್ರಕಟಗೊಂಡರೆ, ಸ್ಟೇಟ್ಸ್‌ಮನ್ ಪತ್ರಿಕೆ ಬುಧ್ನಿಯನ್ನೂ ಒಳಗೊಂಡು "ಡಿವಿಸಿಯ ಭಾರಿ ಅಣೆಕಟ್ಟಿನ ಉದ್ಘಾಟನೆ; ಪಾಂಚೇತ್‌ನಲ್ಲಿ ನಡೆದ ಸಮಾರಂಭದಲ್ಲಿ ಆದಿವಾಸಿ ಹೆಣ್ಣುಮಗಳೊಬ್ಬಳಿಂದ ಚಾಲನೆಗೊಂಡ ವಿದ್ಯುತ್ ಕೇಂದ್ರ" ಎಂಬ ಶೀರ್ಷಿಕೆ ಹೊಂದಿತ್ತು. ಅಂದಿನ ಸಮಾರಂಭದ ಬಗ್ಗೆ ಅತ್ಯುತ್ಸಾಹದಿಂದ ಉಸಿರು ಬಿಗಿಹಿಡಿದು ವರದಿ ಮಾಡಿದ ಮಾದರಿ ನೋಡಿ – "ಉದ್ಘಾಟನಾ ಕಾರ್ಯಕ್ಕೆ ಸಂತಾಲ ಕೂಲಿಗಾರ್ತಿ ಶ್ರೀಮತಿ ಮಾಝಿ (ಹೆಸರು ಬರೆಯುವಾಗ ಇರುವ ತಪ್ಪು ಮತ್ತು ಇನ್ನೂ ಮದುವೆಯಾಗದ ಆಕೆಯನ್ನು ಶ್ರೀಮತಿ ಎಂದು ಸಂಭೋದಿಸುವಲ್ಲಿ ಕಾಣುವ ಉಪೇಕ್ಷೆಯನ್ನು ಗಮನಿಸಿ) ಯವರಿಂದ ನೆರವೇರಿಸಿದ ಮಾನ್ಯ ನೆಹರೂರವರು ಪ್ರಾಜೆಕ್ಟ್ ಕೆಲಸಗಾರ್ತಿಯೊಬ್ಬರು ಈ ಕೇಂದ್ರವನ್ನು ಉದ್ಘಾಟಿಸುವುದೇ ಸರಿಯಾದ ಕ್ರಮ ಎಂದು ತಿಳಿಸಿದರು. ಇದರಿಂದಾಗಿ ವಿದ್ಯುತ್ ಕೇಂದ್ರವನ್ನು ಉದ್ಘಾಟಿಸಿದ ದೇಶದ ಪ್ರಥಮ ಕೂಲಿ ಹೆಂಗಸೆಂಬ ವಿಶೇಷ ಗೌರವ ಶ್ರೀಮತಿ ಮಾಝಿಯವರಿಗೆ ದೊರಕಿದೆ"

ಇದೇ ವರದಿಗಾರ ವರದಿಯನ್ನು ಮುಂದುವರೆಸಿ – ೧೩೪ ಅಡಿ ಎತ್ತರದ ಆಣೆಕಟ್ಟನ್ನು, ಆ ಹೆಂಗಸು ಸಂತಾಲಿ ಭಾಷೆಯಲ್ಲಿ ಮಾತನಾಡಿ ರಾಷ್ಟ್ರಕ್ಕೆ ಸಮರ್ಪಿಸಿದಳು ಎಂದೂ ಬರೆದಿದ್ದ. ಕೇವಲ ೧೫ವರ್ಷದ ಒಬ್ಬ ಆದಿವಾಸಿ ಬಾಲೆ ರಾಷ್ಟ್ರದಲ್ಲಿ ಅಧಿಕೃತ ಭಾಷೆಯ ಸ್ಥಾನವನ್ನೂ ಪಡೆಯದ ಭಾಷೆಯೊಂದರಲ್ಲಿ ಮಾತಾಡಿ, ಅಣೆಕಟ್ಟನ್ನು ರಾಷ್ಟ್ರಕ್ಕೆ ಸಮರ್ಪಿಸಿದ ವಿಪರ್ಯಾಸ ವರದಿಗಾರನ ಗಮನಕ್ಕೇ ಬಂದಿರಲಿಲ್ಲ. (ಸಂತಾಲಿ ಭಾಷೆ ಅಧಿಕೃತ ಭಾಷೆಗಳ ಪಟ್ಟಿಯನ್ನು ಸೇರಿದ್ದು ೨೦೦೩ರಲ್ಲಿ!). ಆಷ್ಟೇಕೆ, "ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಂದ ದುರ್ಗಾಪುರ ಉಕ್ಕು ಕಾರ್ಖಾನೆಯ ಉದ್ಘಾಟನೆ, ಅಮೆರಿಕ ರಾಷ್ಟ್ರಪತಿ ಐಸೆನ್ಹೋವರ್ ಅವರ ಐತಿಹಾಸಿಕ ಭಾರತ ಭೇಟಿ" ಇತ್ಯಾದಿ "ಮಹತ್ತ್ವಪೂರ್ಣ ಸಂಗತಿ"ಗಳನ್ನು ವರದಿ ಮಾಡುವುದರಲ್ಲಿ ನಿರತವಾಗಿದ್ದ ಪತ್ರಿಕೆಗಳಿಗೆ, ನೆಹರೂರವರ ಆಸೆಯ ನೆರವೇರಿಕೆಯ ಒಂದು ಕ್ಷಣದ

ಕ್ರಮ ಬುಧ್ನಿಯ ಜೀವನವನ್ನು ಶಾಶ್ವತವಾಗಿ ಹಾಳುಗೆಡವಿದ ಸಂಗತಿ ಯಃಕಶ್ಚಿತ್ ವಿಷಯವಾಗಿದ್ದು ಅದು ಅವರ ಗಮನಕ್ಕೆ ಬರಲೇ ಇಲ್ಲ. ಇದಿಷ್ಟೇ ಸಾಲದೆಂಬಂತೆ "ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತಕ್ಕೆ ೪೯೦೦೦ ಇಂಜಿನಿಯರುಗಳ ಅವಶ್ಯಕತೆ," "೧೯೬೧ರ ವೇಳೆಗೆ ಉಕ್ಕು ಉತ್ಪಾದನೆಯಲ್ಲಿ ರಾಷ್ಟ್ರದ ಸ್ವಾವಲಂಬನೆಯ ಸಾಧನೆ," "ಭಾಕ್ರಾ ಅಣೆಕಟ್ಟು ಕಾರ್ಯದಲ್ಲಿ ಪ್ರಗತಿ," "ಆಲೂಗೆಡ್ಡೆ ಬೇಳೆಯುವ ಕ್ರಮದಲ್ಲಿ ವೈಜ್ಞಾನಿಕ ಪದ್ಧತಿಯ ಅಳವಡಿಕೆ," ಇತ್ಯಾದಿತ್ಯಾದಿ ಪ್ರಗತಿಶೀಲ ಭಾರತದ ಸಾಧನೆಯ ಶೀರ್ಷಿಕೆಗಳಿಂದ ಪತ್ರಿಕೆಗಳು ತುಂಬಿಹೋಗಿದ್ದವು. ಬುಧ್ನಿಗಾದ ದುರಂತದ ಬಗ್ಗೆ ಒಂದು ಚಿಕ್ಕ ಕಲಮೂ ಎಲ್ಲೂ ಸಿಕ್ಕಲಿಲ್ಲ. ಡಿವಿಸಿ ಕಟ್ಟಿದ ಪಾಂಚೇತ್ ಆಣೆಕಟ್ಟಿನಲ್ಲಿ ಮುಳುಗಿಹೋದ, ಸಂತಾಲ ಗ್ರಾಮಗಳಂತೆ, ಐತಿಹಾಸಿಕ ದೇಗುಲಗಳಂತೆ ಬುಧ್ನಿಯ ದುರ್ದೈವ ಈ ಎಲ್ಲ ಪ್ರಗತಿಶೀಲ ಭಾರತದ ಕನಸಿನಲ್ಲಿ, ಕನಸುಗಳ ವರದಿಗಳಲ್ಲಿ ಮುಳುಗಿ ಹೋಗಿತ್ತು. (ಜಾಗತಿಕ ಅಣೆಕಟ್ಟು ಆಯೋಗ(World Commission on Dams)ಕ್ಕಾಗಿ, ಹರ್ಷ್ ಮಂದೆರ್, ರವಿ ಹೇಮಾದ್ರಿ ಮತ್ತು ವಿಜಯಾ ನಾಗರಾಜ್ ಅವರು ನಡೆಸಿದ ಅಧ್ಯಯನದ ಫಲವಾಗಿ, ೧೯೯೯ ರಲ್ಲಿ ಪ್ರಕಟವಾದ - ಭಾರತದ ಅಣೆಕಟ್ಟುಗಳು, ಅದರಿಂದಾಗಿ ನಿರ್ವಸಿತಗೊಂಡವರ ಬಗೆಗಿನ ಭಾರತೀಯ ನೀತಿ ಮತ್ತು ಕಾನೂನು ಎಂಬ ಲೇಖನದ ಪ್ರಕಾರ ಪಾಂಚೇತ್ ಹಾಗೂ ಮೈಥಾನ್ ಅಣೆಕಟ್ಟಿನಿಂದಾಗಿ ನಿರ್ವಸಿತಗೊಂಡವರಲ್ಲಿ ೫೪.೬೬% ಜನ ಆದಿವಾಸಿಗಳೆಂಬ ಅಂಶ ಬೆಳಕಿಗೆ ಬಂದಿದೆ. ಕುತೂಹಲಕಾರಿಯಾದ ಇನ್ನೊಂದು ಅಂಶವೆಂದರೆ ೧೯೬೦ರವರೆಗೂ ನಿರ್ವಸಿತ ಜನರ ಪಟ್ಟಿಯಲ್ಲಿ ಭಾರತ ಇಭ್ಭಾಗವಾದಾಗ ಬಂದ ಜನರನ್ನು ಮಾತ್ರ ಸೇರಿಸಲಾಗುತ್ತಿತ್ತೇ ವಿನಹಾ ಅಣೆಕಟ್ಟುಗಳಿಂದಾಗಿ ಮನೆಮಠ ಕಳೆದುಕೊಂಡು ನಿರ್ಗತಿಕರಾದವರನ್ನು ಈ ಪಟ್ಟಿಗೆ ಸೇರಿಸುತ್ತಿರಲಿಲ್ಲ. ಈ ಪರಿಸ್ಥಿತಿ ಬದಲಾದದ್ದು ಈಗೊಂದು ದಶಕದಷ್ಟು ಹಿಂದಿನಿಂದ ಮಾತ್ರ.)

ಪಾಂಚೇತ್ ಅಣೆಕಟ್ಟಿನ ಬಗ್ಗೆ ಮಾಹಿತಿ ನೀಡುವ ಅಂತರ್ಜಾಲ ತಾಣದಲ್ಲಿ ಸಿಕ್ಕುವ ಹಲವು ಕೊಂಡಿಗಳಲ್ಲಿ ಖ್ಯಾತ ರಾಜ್ಯನೈತಿಕ ಮನಃಶಾಸ್ತ್ರಜ್ಞ ಶ್ರೀ ಅಶೀಶ್ ನಂದಿಯವರು ಬರೆದಿರುವ ಆಧುನಿಕ ಭಾರತದ ಪರಿಸರವಾದಿಗಳ ಬಗೆಗಿನ ಲೇಖನವೂ ಒಂದು. ಆದರಲ್ಲಿ ಅಂದಿನ ಪರಿಸರವಾದಿ ಕಪಿಲ್ ಭಟ್ಟಾಚಾರ್ಜಿ ಅವರ ಹೆಸರಿನ ಉಲ್ಲೇಖವಿದೆ. ಆ ಕಾಲದಲ್ಲಿ ಬಹಳ ಜನಪ್ರಿಯವಾಗಿದ್ದ ಡಿವಿಸಿ ಪ್ರಾಜೆಕ್ಟ್ ಬಗ್ಗೆ ಪರಿಸರ ದೃಷ್ಟಿಕೋನದಿಂದ ಅಪಸ್ವರವೆತ್ತಿದ ಭಟ್ಟಾಚಾರ್ಜಿ ಅವರನ್ನು ಒಬ್ಬ ದೇಶದ್ರೋಹಿಯೆಂದು ಅಂದಿನ ಹಲವರು ಭಾವಿಸಿದ್ದೂ ಉಂಟಂತೆ! ಅಂತಹ ಕಪಿಲ್ ಭಟ್ಟಾಚಾರ್ಜಿ ಅವರ ಲೇಖನಗಳಲ್ಲೂ ಸಹ ಅಣೆಕಟ್ಟಿನಿಂದಾಗಿ ನಿರ್ವಸಿತರಾದ ಆದಿವಾಸಿಗಳ ಬಗ್ಗೆ ಸೊಲ್ಲೇ ಇಲ್ಲ. ತನ್ನ ಇಳಿವರ್ಷಗಳಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಾದ ಭಟ್ಟಾಚಾರ್ಜಿ ಅವರ ಲೇಖನಗಳಲ್ಲಿ ಕಾಣುವ ಈ ಕೊರತೆಗೆ ಬಹುಶಃ ಕೈಗಾರಿಕೀಕರಣ ಮತ್ತು ವಿಜ್ಞಾನ-ತಂತ್ರಜ್ಞಾನಾಧಾರಿತ ಪ್ರಗತಿಯ ಬಗ್ಗೆ ಭಟ್ಟಾಚಾರ್ಜಿಯವರಿಗಿದ್ದ ನಂಬಿಕೆಯೇ ಕಾರಣವಿರಬಹುದು ಎಂಬುದು ಆಶೀಶ್ ನಂದಿಯವರ ಅಭಿಪ್ರಾಯ.

ಇದನ್ನು ಓದಿದ ನನಗೆ ನನ್ನ ಬಾಲ್ಯದ ನೆನಪುಗಳು ಮರುಕಳಿಸಿತು. ೧೯೭೦ರಲ್ಲಿ ಜನಪ್ರಿಯವಾಗಿದ್ದ "ಸಾಮಾನ್ಯ ಜ್ಞಾನ ಅಥವಾ ಜನರಲ್ ನಾಲೆಜ್" ಎಂಬ ವಿಷಯ ವಿಶೇಷ ನೆನಪಿಗೆ ಬಂತು. ಎಲ್ಲಾ ಸಂದರ್ಶನ ಹಾಗೂ ಕೆಲಸದ ಪೂರ್ವಭಾವಿ ಲಿಖಿತ ಪರೀಕ್ಷೆಗಳಲ್ಲಿ ಈ ವಿಭಾಗದ ಪ್ರಶ್ನೆಗಳು ಕಡ್ಡಾಯವಾಗಿದ್ದವು. ಅವುಗಳನ್ನು ಉತ್ತರಿಸಲೆಂದು ನಾವುಗಳು, ರಸ್ತೆ ಬದಿಯಲ್ಲಿನ ಪುಸ್ತಕ ವ್ಯಾಪಾರಿಗಳ ಬಳಿ ದೊರೆಯುತ್ತಿದ್ದ ಕೆಟ್ಟ ಕಾಗದದಲ್ಲಿ ಅಚ್ಚು ಹಾಕಿದ್ದ ಗೈಡುಗಳಿಂದ ವಿಷಯಗಳನ್ನು ಉರು ಹಚ್ಚಿದ್ದು ನೆನಪಾಯಿತು. ನಾವುಗಳು ಉತ್ಸಾಹದಿಂದ ಒದರುತ್ತಿದ್ದ ಪಟ್ಟಿಯಲ್ಲಿ ಹಲವು ಹೆಸರುಗಳು ನಮ್ಮ ನೆನಪಿನ ಭಾಗವಾಗುತ್ತಿದ್ದವು. ಉದಾಹರಣೆಗೆ – ಸಿಂಧ್ರಿ (ರಸಗೊಬ್ಬರ), ಪಿಂಪ್ರಿ (ಪೆನಿಸಿಲಿನ್), ಚಿತ್ತರಂಜನ್(ರೈಲ್ವೆ ಇಂಜಿನ್), ಪೆರಂಬೂರ್ (ರೈಲ್ವೆ ಭೋಗಿ), ಭಾಕ್ರಾನಂಗಲ್, ಹಿರಾಕುಡ್, ದಾಮೋದರ್ ವ್ಯಾಲಿ, ಕೋಸಿ, ತುಂಗಭದ್ರಾ (ವಿವಿಧೋದ್ದೇಶ ಅಣೆಕಟ್ಟುಗಳು), ಅಂಕಲೇಶ್ವರ್ (ಪೆಟ್ರೋಲಿಯುಮ್), ನರೋಡಾ(ಭಾರ ಜಲ), ತಾರಾಪುರ (ಅಣು ವಿದ್ಯುತ್ ಕೇಂದ್ರ), ಟ್ರಾಂಬೆ (ಅಣು ಸಂಶೊಧನೆ) ಇತ್ಯಾದಿ ಇತ್ಯಾದಿ. ಇದರ ಜೊತೆಗೆ ಭಾರತದ ಖನಿಜ ಸಂಪತ್ತನ್ನು ನೆನೆಪಿಸುವ ಚಿತ್ರ ವಿಚಿತ್ರ ಹೆಸರುಗಳು ಮತ್ತು ಭೂಪಟದಲ್ಲಿ ಇವುಗಳ ಸ್ಥಾನದ ಇನ್ನೊಂದು ಪಟ್ಟಿ – ಝೂರಿಯಾ (ಕಲ್ಲಿದ್ದಲು), ಹಜಾರಿಬಾಗ್(ಅಭ್ರಕ), ಬೈಲದಿಲ್ಲ, ಗಡ್ಚಿರೋಲಿ(ಕಬ್ಬಿಣದ ಅದಿರು), ನೈವೇಲಿ(ಲಿಗ್ನೈಟ್) ...... ಈ ಎಲ್ಲ ಸಂಗತಿಗಳನ್ನು ನಮ್ಮ ತಲೆಗೆ ತುಂಬುತ್ತಿದ್ದ, ಹಾಗೂ ಈ ಸ್ಥಳಗಳನ್ನು ನೋಡಬೇಕೆಂದು ನಮ್ಮನ್ನು ಪ್ರೇರೇಪಿಸುತ್ತಿದ್ದ ಸುರ್‌ಜಿತ್ ಕೌರ್‌ರಂತಹ ಟೀಚರ್‌ಗಳೂ ನೆನಪಾದರು!

ಹೆಚ್ಚಿಗೆ ಮಾಡಲು ಬೇರೇನೂ ಇಲ್ಲದ ನಮ್ಮ ಬಾಲ್ಯ ಕಾಲದಲ್ಲಿ ನಮ್ಮ ತಲೆಗೆ ತುಂಬಿಕೊಂಡ ಈ ಹೆಸರುಗಳು ತನ್ನದೇ ಆದ ಒಂದು ಚೌಕಟ್ಟನ್ನು ಕಟ್ಟಿ ಅದರ ನಡುವೆ ನಮ್ಮ ನೆನಪಿನಲ್ಲಿ ಸುಭದ್ರವಾಗಿ ನೆಲೆ ನಿಲ್ಲುತ್ತಿದ್ದವು. ಹಲವು ವರ್ಷಗಳ ನಂತರವೂ, ಈ ಪಟ್ಟಿಯಲ್ಲಿನ ಒಂದು ಹೆಸರು ಕಿವಿಗೆ ಬಿದ್ದರೆ ಸಾಕು, ಮಗ್ಗಿ ಹೇಳಿದಂತೆ ಉಳಿದವು ತಂತಾನೆ ಬಾಯಿಗೇ ನುಗ್ಗಿ ಬಂದುಬಿಡುತ್ತಿದ್ದವು; ಅಷ್ಟರ ಮಟ್ಟಿಗೆ ಅವು ನಮ್ಮ ತಲೆಯಲ್ಲುಳಿದಿದ್ದವು.

ಇವೆಲ್ಲ ನೆನೆಪುಗಳ ನಡುವೆ ಧುತ್ತನೆ ನನ್ನನ್ನು ಕಾಡಿದ್ದು ಒಂದು ಹೊಚ್ಚ ಹೊಸ ಹೊಳಹು – "ಇವೆಲ್ಲ ಜಾಗಗಳೂ ನಮಗೆ ಬೇಕಾಗುವ ಸಂಪನ್ಮೂಲಗಳ ಆಕರವಾಗಿ, ಮುಂದೆ ಮೂಡಲಿರುವ ಭವ್ಯ ಭಾರತದ ಕನಸಿನ ಕಚ್ಚಾಸಾಮಗ್ರಿಗಳಾಗಿ, ತಮ್ಮ ಇರವನ್ನು ಮೂಡಿಸಿದವೇ ಹೊರತು, ಬಯಕೆ ಭಯಗಳಿಂದ, ಆಸೆ ಆಳವುಗಳಿಂದ, ಕನಸು ಕಳವಳಗಳಿಂದ ಕೂಡಿದ, ಬುದ್ಧಿ-ಮನಸ್ಸುಯುಕ್ತ, ರಕ್ತ ಮಾಂಸಭರಿತ ನಮ್ಮಂತಹ ಮನುಷ್ಯರು ಇರುವ ತಾಣಗಳಾಗಿ ಗೋಚರಿಸಲೇ ಇಲ್ಲ." ಈ ಹೊಸ ಹೊಳಹು ನನ್ನನ್ನು ವಿಹ್ವಲಗೊಳಿಸಿದ್ದನ್ನು ನನ್ನ ಗೆಳತಿಯೊಬ್ಬಳ ಬಳಿ ಹಂಚಿಕೊಂಡಾಗ ಅವಳು ನನಗೆ ಸಮಾಜಶಾಸ್ತ್ರಜ್ಞ ಶ್ರೀ ಸತೀಶ್ ದೇಶಪಾಂಡೆಯವರ "ಸಮಕಾಲೀನ ಭಾರತ – ಒಂದು ಸಮಾಜಶಾಸ್ತ್ರೀಯ ನೋಟ (ಪೆಂಗ್ವಿನ್ ೨೦೦೩)" ಎಂಬ ಪುಸ್ತಕ ಓದುವಂತೆ ಸಲಹೆ ಇತ್ತಳು. ಆವಳ ಪ್ರಕಾರ ನನ್ನ ಕಳವಳದ ಹಿಂದಿನ ಗೃಹೀತಗಳನ್ನರಿಯಲು ಅದು ತಕ್ಕ ಪುಸ್ತಿಕೆ.

ಅವಳ ಅಂದಾಜು ಸರಿಯಿತ್ತು. ನೆಹರೂರವರ ದೃಷ್ಟಿಯಲ್ಲಿ ದೇಶವೆಂಬುದು ಪ್ರಮುಖವಾಗಿ ಒಂದು ಆರ್ಥಿಕ ಆಡುಂಬೊಲವಾಗಿತ್ತೆಂಬುದನ್ನು ದೇಶಪಂಡೆಯವರು "ಒಂದು ಕಲ್ಪಿತ ಅರ್ಥವ್ಯವಸ್ಥೆಯಾಗಿ ರಾಷ್ಟ್ರದ ಪರಿಕಲ್ಪನೆ." ಎಂಬ ತಮ್ಮ ಪ್ರಬಂಧದಲ್ಲಿ ನಿರೂಪಿಸಿದ್ದರು. ಶಾಲೆಗಳ ಹಾಗೂ ಮಾಧ್ಯಮಗಳ ಮೂಲಕ ಪ್ರಚುರಗೊಂಡ ಈ ಪರಿಕಲ್ಪನೆಯಿಂದಾಗಿ ದೇಶವೆಂದರೆ ಆರ್ಥಿಕ ಸಂಬಂಧಗಳಿಂದ ರೂಪುಗೊಂಡ ಉತ್ಪಾದನಾವಕಾಶಗಳ ಕ್ಷೇತ್ರ ಎಂಬುದು ಅಂದಿನ ವಿದ್ಯಾವಂತರೆಲ್ಲರ ನಂಬಿಕೆಯಾಗಿಬಿಟ್ಟಿತ್ತು. ಹೀಗಾಗಿ ಪ್ರಗತಿಯೆಂದರೆ ದೇಶದ ಎಲ್ಲ ಸಂಪನ್ಮೂಲಗಳನ್ನು ಕಚ್ಚಾ ಸಾಮಗ್ರಿಯಾಗಿ ಬಳಸಿ ಯೋಜನೆಗಳ ಮೂಲಕ ಸಾಧಿಸಬೇಕಾದ ಗುರಿಗಳು ಎಂಬ ಪ್ರಚ್ಛನ್ನ ಪರಿಕಲ್ಪನೆ ಸ್ಫುಟವಾಗಿ ನನಗೆ ಕಾಣತೊಡಗಿತು.

ಇದೇಕೆ ಹೀಗೆ ಎಂಬುದಕ್ಕೂ ಶ್ರೀ ದೇಶಪಾಂಡೆಯವರಲ್ಲಿ ಉತ್ತರವಿತ್ತು. ಅವರ ಪ್ರಕಾರ – ಅರ್ಥವ್ಯವಸ್ಥೆಯನ್ನೇ ಅಡಿಪಾಯವಾಗಿ ಬಳಸಿ ಕಟ್ಟಿದ ರಾಷ್ಟ್ರ, ಕೇಂದ್ರೀಕೃತ ಸಮುದಾಯವಾಗಿ ರೂಪುಗೊಂಡ ರಾಷ್ಟ್ರವಾಗುತ್ತದೆಂಬ ಪರಿಕಲ್ಪನೆ ನಮ್ಮ ಮಾಜಿ ಪ್ರಧಾನಿ ನೆಹರೂರವರು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೀಡಿದ ವಿಶಿಷ್ಟ ವೈಯುಕ್ತಿಕ ಕೊಡುಗೆ. ಈ ಪರಿಕಲ್ಪನೆಯೇ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಇತ್ಯಾದಿ ವಿಭಿನ್ನ ಸೆಳೆತಗಳು ಮೂಡಿಸುವ ವಿಕೇಂದ್ರೀಕರಣದ ಒತ್ತಡವನ್ನು ದಮನಗೊಳಿಸಿ ಕೇಂದ್ರೀಕೃತ ಏಕರೂಪಿ ರಾಷ್ಟವನ್ನು ಸ್ಥಾಪಿಸುವ ಬ್ರಹ್ಮಾಸ್ತ್ರವಾದದ್ದು.

ಹುಡುಗರಾಗಿದ್ದಾಗ "ಪ್ರಗತಿ" ಎಂಬ ಈ ಸಿದ್ಧ ಪರಿಕಲ್ಪನೆ ನಮಗೆ ಏಕೆ ಅಷ್ಟು ರೋಚಕವಾಗಿ ಕಂಡಿತ್ತೆಂಬ ನನ್ನ ಸಮಸ್ಯೆಗೂ ದೇಶಪಾಂಡೆಯವರ ಬಳಿ ಉತ್ತರವಿತ್ತು. ಪ್ರಗತಿಯ ಗುರಿಸಾಧನೆಗೆ ಬಳಕೆಯಾದ ಎರಡು ಪರಿಕರಗಳಲ್ಲಿ(ಒಂದು ತಂತ್ರಜ್ಞಾನವಾದರೆ ಇನ್ನೊಂದು ಈ ತಂತ್ರಜ್ಞಾನವನ್ನು ಎಲ್ಲಿ ಹೇಗೆ ಬಳಸಬೇಕೆಂಬುದನ್ನು ನಿರ್ಧರಿಸುವ ಯೋಜನೆಗಳು) ಒಂದಾದ ಯೋಜನಾಕ್ರಮದ ಹೃದಯದಲ್ಲೇ ಅಡಗಿರುವ ಮೂಲದೋಷ. ಅಂಕಿಅಂಶಗಳ ಜೊತೆ ನಮ್ಮ ತರ್ಕ ಕ್ರಮವನ್ನು ಬಳಸಿ ಸಿದ್ಧಗೊಳ್ಳುವ ಯೋಜನಾಕ್ರಮದಲ್ಲಿ ಮಾನವಿಕ ಅಂಶಗಳ ಸ್ಥಾನ ಕಟ್ಟ ಕಡೆಯದು; ಇಲ್ಲಿ ಗುರಿ ಹಾಗೂ ಕ್ರಮಗಳೆರಡೂ ಮಾನವೀಯ ಭಾವನಾತ್ಮಕ ಅಂಶಗಳನ್ನು ಬದಿಗಿಡುತ್ತವೆ. ಯೋಜನೆಯ ಅಂತಿಮ ಫಲಾನುಭವಿಯಾಗಿ ಮಾತ್ರ ಮನುಷ್ಯನಿಗೆ ಅಲ್ಲಿ ಸ್ಥಾನ. ಇಷ್ಟಿದ್ದರೂ ಇಂತಹ ಕ್ರಮಗಳು ಅತ್ಯಂತ ಮಾನವೀಯ ಮುಖವಾಡಗಳನ್ನು ತಂತಾನೇ ಗಳಿಸಿಕೊಡುಬಿಡುತ್ತವೆ. ಇದರಿಂದಾಗಿ ಇವುಗಳ ಸಫಲತೆ ಇಡಿ ಸಮುದಾಯದ ವರದಂತೆ ಗೋಚರಿಸಿ ಇವುಗಳು ಅಧುನಿಕ ದೇವತೆಗಳ ಸ್ಥಾನ ಪಡೆದುಬಿಡುತ್ತವೆ. ಹೀಗಿರುವುದರಿಂದ ತಾನೆ, ಮಾನ್ಯ ನೆಹರುರವರಿಗೆ ಭಕ್ರಾ ನಂಗಲ್ ಬಳಿ ನಿಂತು "ಇದಕ್ಕಿಂತ ಪವಿತ್ರವಾದ ಸ್ಥಳ ಭಾರತದಲ್ಲಿ ಇರಲು ಸಾಧ್ಯವೇ!" ಎಂದು ಉದ್ಗರಿಸಲು, ಹಾಗೂ ಆ ಉದ್ಗಾರವನ್ನು ಕೇಳಿ ಆಧುನಿಕರು ಪುಳಕಿತರಾಗಲು ಸಾಧ್ಯವಾದದ್ದು! ನಮ್ಮ ರಾಷ್ಟ್ರ ಹಾಗೂ ಅದರ ಪ್ರಗತಿಯ ಪರಿಕಲ್ಪನೆ ಭಾರಿ ಕೈಗಾರಿಕೆಗಳ, ಅಣೆಕಟ್ಟುಗಳ ಭಾರದಡಿ ಸಿಕ್ಕಿ ನಲುಗಿಹೋಗಿತ್ತು. ಅಷ್ಟೇಕೆ; ೨೮ನೆ ಡಿಸೆಂಬರ್ ೧೯೫೯ರಂದು ಖರಗ್ಪುರ ಐಐಟಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಭಾಷಣವನ್ನು ಸ್ಟೇಟ್ಸ್‌ಮನ್ ಪತ್ರಿಕೆ ಮಾಡಿದ

ವರದಿಯ ಶೀರ್ಷಿಕೆ – "ಜನರ (ಮಾನವೀಯ) ಹಕ್ಕುಗಳ ಬಗ್ಗೆ ಅತಿ ಒತ್ತು ಕೊಡುವುದು ಖಂಡನೀಯ, ಬದಲಿಗೆ ನಮ್ಮ ಕರ್ತವ್ಯದ ಬಗ್ಗೆ ಗಮನಹರಿಸಿ – ರಾಷ್ಟ್ರಪತಿಯವರ ಕರೆ" ನಮ್ಮ ಪ್ರಗತಿಸಾಧನೆಯ ಗುರಿ ಮತ್ತು ಕ್ರಮದ ಹಿಂದಿನ ನಂಬಿಕೆಗಳನ್ನು ಎತ್ತಿ ತೋರಿಸುತ್ತದೆ. (೧೯೯೯ರಲ್ಲಿ ಯೋಜನಾ ಆಯೋಗದ ಕಾರ್ಯದರ್ಶಿಯಾಗಿದ್ದ ಎನ್.ಸಿ.ಸಕ್ಸೇನಾ ಅವರ ಪ್ರಕಾರ ನಮ್ಮ ೫೦ ವರ್ಷಗಳ ಭಾರಿ ಯೋಜನೆಗಳ ಫಲವಾಗಿ ಮನೆಮಠ ಕಳೆದುಕೊಂಡು ನಿರಾಶ್ರಿತರಾದವರ ಸಂ–ಖ್ಯೆ ಸರಿಸುಮಾರು ೫ ಕೋಟಿ. (ನೋಡಿ – Dams, Displacement, Policy and Law in India', 1999 by N.C.Saxena)

ಈ ನಮ್ಮ "ಪ್ರಗತಿಯ ಪ್ರತೀಕ"ಗಳನ್ನು ಜನ ಸಾಮಾನ್ಯರು ಬೆರಗಿನಿಂದ ಮೆಚ್ಚುಗೆಯಿಂದ ನೋಡುವಂತೆ ಪ್ರಚೋದಿಸಲಾಯಿತೇ ವಿನಹಾ, ಅವುಗಳ ಬಗ್ಗೆ ನೇರ ನಿರ್ವಿಕಾರ ಗಮನ ಹರಿಸಲು ಅಸಾಧ್ಯವಾದಂತಹ ವಾತಾವರಣವೊಂದು ಸೃಷ್ಟಿಯಾಗಿತ್ತು. ಸುರ್‌ಜಿತ್ ಅವರ ಉತ್ಸಾಹ, ಬುಧ್ನಿಯ ಹುರುಪು ಹಾಗೂ ನನ್ನ ಜನರಲ್ ನಾಲೆಜ್ ಬಗೆಗಿನ ಭಕ್ತಿ ಶ್ರದ್ಧೆ – ಇವೆಲ್ಲ ಸಾಧ್ಯವಾದದ್ದು ಸ್ವತಂತ್ರ ಭಾರತದ ಅಧ್ವರ್ಯುಗಳು ಸೃಜಿಸಿದ ಇಂತಹ ವಾತಾವರಣದಿಂದಾಗಿಯೇ!

ಚಾರಿತ್ರಿಕ ಸಂಧಿಕಾಲವೊಂದು ಒಬ್ಬ ಶಿಕ್ಷಕಿಯನ್ನೂ ಮತ್ತು ಒಬ್ಬ ಸಂತಾಲ ಕೂಲಿಕೆಲಸದವಳನ್ನೂ ಒಂದೆಡೆ ಒಗ್ಗೂಡಿಸಿದೆ; ಅಂದಿನ ಭಾರತದ ಒಟ್ಟಾರೆ ಸಮಾಜದ ಎರಡು ತುದಿಯಲ್ಲಿರುವ ಇವರಿಬ್ಬರೂ ನೆಹರೂರವರ ಕನಸಿನಲ್ಲಿ ಸಿಕ್ಕಿಬಿದ್ದಿದ್ದಾರೆ. ದೇಶಪಾಂಡೆಯವರು ಹೇಳುವಂತೆ, ತನ್ನ ಪರಂಪರಾಗತ ನೆನಪುಗಳನ್ನು ಧಿಕ್ಕರಿಸಿ ದೂರತಳ್ಳಿ, ಆಧುನಿಕ ಅರ್ಥವ್ಯವಸ್ಥೆ ಹಾಗೂ ಚಿಂತನೆಯ ಅಡಿಪಾಯದ ಮೇಲೆ ಕಟ್ಟಿರುವ ನೆಹರೂರವರ ಭಾರತದ ಕಲ್ಪನೆಯಲ್ಲಿ ಬುಧ್ನಿಯಂತಹ ಅತಿ ಸಾಮಾನ್ಯರ ವಾಸ್ತವ ಪ್ರಪಂಚದ ಸೋಂಕೂ ಇರಲಿಲ್ಲ. ಅಂದಿನ ಸಮಾಜದ ಆಧ್ವರ್ಯುಗಳಿಗಾಗಲೀ, ಸುರ್‌ಜಿತ್ ಕೌರ್ ಅವರಿಗಾಗಲೀ, ನನಗಾಗಲೀ ಭುಧ್ನಿಯ ಹಾಗೂ ಅವಳಂತಹವರ ಇರವಿನ ಅರಿವೇ ಇರಲಿಲ್ಲ.

ಸುರ್‌ಜಿತ್ ಕೌರ್ ಅವರಿಂದ ಪ್ರೇರಿತಳಾಗಿ ೫೦ ವರ್ಷಗಳ ಪ್ರಗತಿ–ಸಾಧನೆಯ ಮಾಹಿತಿ ಸಂಗ್ರಹ ಕಾರ್ಯಕ್ಕೆ ಹೊರಟದ್ದು ಒಂದು ರೀತಿ ಒಳ್ಳೆಯದೇ ಆಯಿತು. "ಪ್ರಗತಿ ಸಾಧನೆಯೇ ಒಂದು ಮಹಾನ್ ಪುರುಷಾರ್ಥ"ವೆಂದು ಬಗೆದು ಈ ಪಥದಲ್ಲಿ ಸಾಗಿದ ಸುರ್‌ಜಿತ್ ಕೌರ್ ಹಾಗೂ ನನ್ನಂಥಹವರಿಗೆ, ಈ ಎಲ್ಲ ಸಂಭ್ರಮಗಳಿಗೆ ಹೊರತಾಗಿ, ಹೆದ್ದಾರಿ ಬದಿ ಬೇರುಸಮೇತ ಕಿತ್ತು ಬಿಸುಟ ಗಿಡಗಳಂತೆ ಗಮನಕ್ಕೆ ಬಾರದೇ ಉಳಿದು ಬದುಕಿದ ಭುಧ್ನಿಯಂತಹ ಹುಲು ಮಾನವರ ಬಗ್ಗೆ ಅರಿವು ಹಾಗೂ ಸಹಾನುಭೂತಿ ಮೂಡುವಂತಾದದ್ದು ಒಳ್ಳೆಯದೇ.

ನೆಹರೂ ಕಾಲದ ಕನಸುಗಳು ಇಂದು ಮಾಸಿವೆಯಾದರೂ ದೇಶದ ಭಾಗಗಳನ್ನು ಸಂಪನ್ಮೂಲ ಭರಿತ ಪ್ರದೇಶಗಳೆಂದು ಗುರುತಿಸುವ ಚಾಳಿ ಇನ್ನೂ ಹಾಗೇ ಉಳಿದುಬಿಟ್ಟಿದೆ. ಉದಾಹರಣೆಗೆ, ಇತ್ತೀಚೆಗೆ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಛತ್ತೀಸ್‌ಗಡ್ ಪ್ರದರ್ಶಿಸಿದ್ದ ಸ್ಥಬ್ದಚಿತ್ರದಲ್ಲಿ ಮೋಹಕ ಕೊತ್ಮುಸಾರ್ ಗುಹೆಗಳಲ್ಲಿರುವ ಹೇರಳ ಸುಣ್ಣಕಲ್ಲಿನ ಚಿತ್ರಣವಿತ್ತೇ ಹೊರತು ಅಲ್ಲಿನ ಬಸ್ತರ್ ಆದಿವಾಸಿಗಳ

ಸುಳುಹೂ ಇರಲಿಲ್ಲ. ಆರ್ಥಿಕಾಭಿವೃದ್ಧಿ ಹಾಗೂ ಖಾಸಗಿ ಉದ್ಯಮಶೀಲತೆಯ ಮೋಡಿಗೊಳಗಾಗಿರುವ ಇಂದಿನ ಜಾಗತೀಕರಣಗೊಂಡ ಪ್ರಪಂಚದಲ್ಲಿ ಈ ಚಾಳಿ ಇನ್ನೂ ಹೆಚ್ಚು ಬಲಗೊಳ್ಳುತ್ತಿದೆ.

ದೇಶದ ಪೌರತ್ವದ ಬಗೆಗಿನ ತಿಳುವಳಿಕೆಯ ಬದಲು ಗ್ರಾಹಕತ್ವದ ಪರಿಚಯವನ್ನು ಮಾಡುತ್ತಿರುವ ವಿದ್ಯಾಭ್ಯಾಸದಿಂದಾಗಿ ಜನರಿಗೆ ದೇಶದ ನೆಲ-ಜಲ ಅಷ್ಟೇ ಏಕೆ, ಸಹಪೌರರೂ ಸಹ ಮಾರಾಟದ ಸರಕಾಗಿ, ಲಾಭಗಳಿಸಲು ಉಪಯುಕ್ತವಾದ ಕಚ್ಚಾ ಸಾಮಗ್ರಿಯಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಆದರೆ ಗಮನಿಸಬೇಕಾದ ಒಂದು ಮುಖ್ಯ ಬದಲಾವಣೆಯೂ ಇದರಲ್ಲೇ ಅಡಗಿದೆ. ದೇಶದ ವಿಸ್ತಾರವನ್ನು ಕಚ್ಚಾ ಸಾಮಗ್ರಿಯಾಗಿ ಕಾಣುವ ಚಾಳಿ ಹೆಚ್ಚಿದಷ್ಟೂ ಅಲ್ಲಿನ ಜನ ಸಮುದಾಯ ಹಾಗೂ ಅವರ ಸಂಸ್ಕೃತಿಗಳು ನೆಹರೂ ಕನಸಿನ ಪ್ರಗತಿಗೆ ಅಡ್ಡಗಾಲು ಹಾಕುವುದೂ ಹೆಚ್ಚಾಗಿದೆ. ಕಚ್ಚಾ ಸಮಗ್ರಿಯ ಕಾಣ್ಕೆಯ ಹಿಂದೆಯೇ ಎದುರಿಸಬೇಕಾದ ಅಡೆತಡೆಗಳೂ ಸೆಡ್ಡು ಹೊಡೆದು ನಿಲ್ಲುತ್ತಿರುವುದು ಢಾಳಾಗಿ ಕಾಣಹತ್ತಿದೆ. ಎಲ್ಲೆಡೆಯಲ್ಲಿಯೂ ಜನ ಸಾಮಾನ್ಯರು ಪ್ರತಿಭಟಿಸತೊಡಗಿದ್ದಾರೆ; ಮುಂಚಿನಷ್ಟು ಸರಳವಾಗಿ ಬಿಡಿಸಕೊಳ್ಳಲಾಗದಂತೆ ತೊಡಕನ್ನು ಒಡ್ಡುತ್ತಿದ್ದಾರೆ. ಬಾಕ್ಸೈಟ್ ಅದಿರಿನ ಕಣಜದಂತೆ ಕಾಣುವ ಬೆಟ್ಟದಲ್ಲೇ ಆದಿವಾಸಿಗಳ ದೈವಮೂಲಗಳಷ್ಟೇ ಅಲ್ಲ, ಅಲ್ಲಿರುವ ಔಷಧೀಯ ಸಸ್ಯ ಸಂಪತ್ತು ಹಾಗೂ ಅದರ ಬಗೆಗೆ ಅಲ್ಲಿನ ಮೂಲ ನಿವಾಸಿಗಳಿಗಿರುವ ಅಮೂಲ್ಯ ಜ್ಞಾನ ಕೂಡ ನಮ್ಮ ಹುರುಪಿಗೆ ಕಡಿವಾಣ ಹಾಕುತ್ತವೆ;. ತಾಳ್ಮೆಯ ಪಾಠವನ್ನೆಮಗೆ ಕಲಿಸುತ್ತಿವೆ. ಜನ ಸಮುದಾಯ, ತಾನು ಇದ್ದೆಡೆಯೆಲ್ಲಾ ತಮ್ಮ ತಮ್ಮ ಅನುಭವವೆಂಬ ವೃಕ್ಷದ ಬೇರನ್ನು ಅಲ್ಲಿನ ನೆಲದಲ್ಲಿ ಹರಡಿ ಅಲ್ಲಿನ ಜಲ-ಹವೆಯೊಂದಿಗೆ ಅದನ್ನು ಬೆಸೆದಿರುತ್ತದೆ. ಪರಿಸರ ಹಾಗೂ ಜನ ಸಮುದಾಯದ ನಡುವೆ ಇರುವ ಈ ಸಾವಯವ ಸಂಬಂಧವನ್ನು ಮರೆತು ಮುಂದುವರೆಯುವುದು ಅಸಾಧ್ಯವಷ್ಟೇ ಅಲ್ಲ, ಅಸಾಧು ಕೂಡ. ಇದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಲೇ ಬೇಕಾದ ಅನಿವಾರ್ಯ ಇಂದು ಸೃಷ್ಟಿಯಾಗಿದೆ ಎಂಬುದು ಭುಧ್ನಿಯ ಕಥಾನಕದಿಂದ ನಾನು ಪಡೆದ ತಿಳುವಳಿಕೆ.

ಇಂತೆಲ್ಲಾ ನಾನು ಭುಧ್ನಿಯ ಬಗ್ಗೆ ಚಿಂತನೆ ನಡೆಸುತ್ತಿದ್ದಾಗಲೇ, ಕೊನೆವರೆಗೂ ದೈನೇಸಿ ಬದುಕನ್ನೇ ನಡೆಸಿದ ಭುಧ್ನಿ ಕಳೆದ ವರ್ಷ ತನ್ನ ೭೦ನೆಯ ವಯಸ್ಸಿನ ಆಸುಪಾಸಿನಲ್ಲಿ ಕಡೆಯುಸಿರೆಳೆದಳೆಂಬ ಸುದ್ದಿ ನನ್ನ ರಾಂಚಿಯ ಮಿತ್ರರೊಬ್ಬರಿಂದ ದಕ್ಕಿತು.

ಭುಧ್ನಿ ಉದ್ಘಾಟಿಸಿದ ಪಾಂಚೇತ್ ಅಣೆಕಟ್ಟು ಸಹ ತನ್ನದೇ ಆದ ವಯೋಸಹಜ ಮುದಿತನವನ್ನು ಕಂಡಿದೆ. ಆಣೆಕಟ್ಟಿನ ಬಗ್ಗೆ ಮಾಹಿತಿ ಕಲೆಹಾಕುವ ಕಾರ್ಯದಲ್ಲಿ ಮುಳುಗಿದ್ದ ನನಗೆ ಶ್ರೀ ಬೂಲೂ ಇಮಾಮ್ ರವರು The Indian National Trust for Art and Cultural Heritage (Hazaribagh chapter) ಗಾಗಿ ೨೦೦೬-೦೭ ರಲ್ಲಿ ಅಂತಾರಾಷ್ಟ್ರೀಯ ಸ್ಮಾರಕಗಳು ಹಾಗೂ ನಿವೇಶಗಳ ಬಗ್ಗೆ ತಯಾರಿಸಿದ ವರದಿಯೂ ಕಣ್ಣಿಗೆ ಬಿತ್ತು. ಪಾಂಚೇತ್ ಅಣೆಕಟ್ಟಿನಲ್ಲಿ ತುಂಬಿದ ಹೂಳಿನಿಂದಾಗಿ ನೀರಿನ ಸಂಗ್ರಹ ಕಡಿಮೆಯಾಗಿ, ಅಣೆಕಟ್ಟಿನ ನೀರಲ್ಲಿ

ಮುಳುಗಿಹೋಗಿದ್ದ ತೇಲ್ಲುಪಿ ದೇವಸ್ಥಾನ ಹೇಗೆ ಮತ್ತೆ ಮೇಲೆದ್ದು ಕಾಣತೊಡಗಿದೆ ಎಂಬುದನ್ನು ಶ್ರೀ ಇಮಾಮರವರು ತಮ್ಮ ವರದಿಯಲ್ಲಿ ವಿವರಿಸಿದ್ದರು.

ಸುರ್‌ಜಿತ್ ಕೌರ್ ಅವರ ಕೋರಿಕೆಯಿಂದ ಶುರುವಾದ ನನ್ನ ಪಯಣ, ಭುಧ್ನಿಯ ದುರಂತದಿಂದ ಮುಂದುವರೆದು, ಮತ್ತೆ ಮೆಲೆದ್ದಿರುವ, ಈ ದ್ರೇಶದ ಸಾಂಸ್ಕೃತಿಕ ಪ್ರತೀಕವಾದ, ದೇಗುಲದವರೆಗೆ ಸಾಗಿದ್ದು, ಕಂಡು ಪರಿಭಾವಿಸಿದ ಚಿತ್ರಗಳೆಲ್ಲವೂ ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ತಿರುಗುತ್ತಿವೆ. ಇಡೀ ನಮ್ಮ ಪ್ರಸಕ್ತ ಸನ್ನಿವೇಶಕ್ಕೆ ಹೊಸ 'ಸಾಮಾನ್ಯ ಜ್ಞಾನ' (ಜನರಲ್ ನಾಲೆಜ್) ದ ಒಂದು ದೊಡ್ಡ ಪ್ರತೀಕವಾಗಿ, ನಮ್ಮ ಇಂದಿನ ಹಾಗೂ ಭವಿತವ್ಯದ ಕಡೆಗೆ ತೋರುಬೆರಳೆನಿಸುವ ರೂಪಕಗಳಾಗಿ, ಇಲ್ಲಿನ ನೆಲ ಹಾಗು ಅಲ್ಲಿ ನೆಲೆ ಕಂಡುಕೊಂಡ ಜನಕ್ಕೆ ನಾವು ಇದುವರೆಗೂ ತೋರಿದ ಉಪೇಕ್ಷೆ, ಅನಾದರದ ಬಗೆಗಿನ ಎಚ್ಚರಿಕೆ ಘಂಟೆಯಾಗಿ, ನಮ್ಮ ಹಮ್ಮನ್ನು ಅಣಕಿಸುತ್ತಾ, ನಮ್ರತೆ, ವಿನಯದ ಪಾಠಹೇಳುವ ಗುರುಸದೃಶವಾಗಿ ಕಾಣುತ್ತಿವೆ.

ಈ ನನ್ನ ಲೇಖನ ಸುರ್‌ಜಿತ್ ಕೌರ್ ಅವರನ್ನು ಯಾವ ರೀತಿ ತಟ್ಟುತ್ತದೆ ಎಂಬುದು ನನ್ನ ಕುತೂಹಲ. ಅವರು ವಹಿಸಿದ ಕಾರ್ಯವನ್ನು ಇನ್ನೂ ಮುಗಿಸದೆ ಕುಳಿತಿರುವ ನನಗೆ ಅವರನ್ನು ಮುಖತಃ ಭೇಟಿ ಮಾಡುವಷ್ಟು ಎದೆಗಾರಿಕೆ ಇಲ್ಲ. ಆದರೂ ನಾನು ಸಂಗ್ರಹಿಸಿದ ಮಾಹಿತಿಗಳನ್ನು ಗಮನಿಸಿದ ಅವರು ಮತ್ತೊಮ್ಮೆ ಆ ಹಳೆಯ ಸ್ಥಳಗಳ ಪ್ರವಾಸ ಕೈಗೊಳ್ಳುವ ಮನಸ್ಸು ಮಾಡಿಯೇ ಮಾಡುತ್ತಾರೆಂಬ ನಂಬಿಕೆ ನನ್ನದು. ಹಾಗೆ ಅವರು ಹೊರಟಾಗ, ನಾನಂತೂ ಮರೆಯದೆ ಅವರ ಜೊತೆ ಹೊರಡುತ್ತೇನೆ ಎಂಬುದಂತೂ ಖಂಡಿತಾ ನಿಜ! (ನೆಹರೂರವರ "ಆಧುನಿಕ ಭಾರತದ ದೇವಾಲಯ"ಗಳನ್ನು ಉದ್ಘಾಟಿಸಿ ಅವರ ಕನಸಿನಲ್ಲಿ ಸಿಕ್ಕಿ ನರಳಿದ ಸಂತಾಲ ಹೆಣ್ಣು ನಮ್ಮ ಭಾರತದ ರಾಷ್ಟ್ರೀಯ ಚರಿತ್ರೆಯ ಪುಟಗಳಲ್ಲಿ ಸ್ಥಾಪಿತಗೊಳ್ಳಲಿ; ನಮ್ಮೆಲ್ಲರ ಸಾಮುದಾಯಿಕ ನೆನೆಪಿನಲ್ಲಿ ಆಕೆ ಭದ್ರವಾಗಿ ಉಳಿದು, ಇಲ್ಲಿನ ಮಣ್ಣನ್ನು, ಮಣ್ಣಿನ ಮಕ್ಕಳಿಂದ ಬೇರೆಯಾಗಿಸಿಯೇ ಪರಿಭಾವಿಸುವ ಚಾಳಿಯಿಂದಾಗುವ ಘನಘೋರ ದುರಂತಗಳನ್ನು ನಮಗೆ ಸರ್ವದಾ ನೆನೆಪಿಸುತ್ತಿರಲಿ.)

(ಹಿಂದೂ ವೃತ್ತಪತ್ರಿಕೆಯಲ್ಲಿ ಇತ್ತೀಚೆಗೆ (ಜೂನ್ ೨, ೨೦೧೨) ಪ್ರಕಟವಾದ ಲೇಖನ – Recovering Budhni Mejhan from the silted landscape of modern India ದ ಕನ್ನಡಾನುವಾದ)

* * *

ಸಂವಿಧಾನ ಸ್ತಂಭಗಳನ್ನು ನಾಶಪಡಿಸಬಾರದು

– ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ

(ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದ ಪೂರ್ಣ ಪಾಠ.)

ಕನ್ನಡಕ್ಕೆ : ನಾಗಮಣಿ ಎಸ್.ರಾವ್

ನಮ್ಮ ಭಾರತ ಈ ೬೬ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ನಮ್ಮ ದೇಶದಲ್ಲೇ ವಾಸಿಸುತ್ತಿರುವ ಮತ್ತು ವಿಶ್ವದ ಮೂಲೆ ಮೂಲೆಗಳಲ್ಲಿರುವ ಭಾರತೀಯ ಬಂಧುಗಳನ್ನು, ಇದೇ ಪ್ರಥಮ ಬಾರಿಗೆ ಉದ್ದೇಶಿಸಿ ಮಾತನಾಡುವ ಮಹಾನ್ ಸುಯೋಗ ನನ್ನದಾಗಿದೆ. ಈ ಉನ್ನತ ಪದವಿಯ ಗೌರವವನ್ನು ನನಗೆ ಪ್ರದಾನ ಮಾಡಿರುವ ಜನತೆ ಹಾಗೂ ಅವರ ಪ್ರತಿನಿಧಿಗಳಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಕ ರೀತಿಯಲ್ಲಿ ಸಲ್ಲಿಸಲು ಪದಗಳಿಗೆ ಸಾಧ್ಯವಿಲ್ಲ. ನನಗೆ ಪೂರ್ಣ ಅರಿವಿದೆ; ನಮ್ಮ ಪ್ರಜಾಪ್ರಭುತ್ವದ ಅತ್ಯುನ್ನತ ಗೌರವ ಯಾವುದೇ ಪದವಿ ಅಥವಾ ಅಧಿಕಾರದಲ್ಲಿಲ್ಲ; ಆದರೆ ನಮ್ಮ ಮಾತೃಭೂಮಿ ಭಾರತದ ಪ್ರಜೆಯಾಗಿರುವುದರಲ್ಲಿ ಈ ಗೌರವವಿದೆ. ನಮ್ಮ ಈ ಮಾತೃಭೂಮಿಯಲ್ಲಿ ನಾವೆಲ್ಲರೂ ಸಮಾನರು. ರಾಷ್ಟ್ರನಿರ್ಮಾಣದ ಜಟಿಲವಾದ ನಾಟಕದಲ್ಲಿ ನಾವು ಯಾವುದೇ ಪಾತ್ರವನ್ನು ನಿರ್ವಹಿಸಲಿ ಅದನ್ನು ಸಂವಿಧಾನದ ಮೌಲ್ಯಗಳಿಗೆ ಅನುಗುಣವಾಗಿ ಪ್ರಾಮಾಣಿಕತೆಯಿಂದ, ಬದ್ಧತೆಯಿಂದ ಮತ್ತು ದೃಢನಿಷ್ಠೆಯಿಂದ ನಿರ್ವಹಿಸಬೇಕೆಂದು ಪ್ರತಿಯೊಬ್ಬರನ್ನೂ ನಮ್ಮ ಮಾತೃಭೂಮಿ ಭಾರತ ಕೇಳುತ್ತಿದೆ.

ಚಕ್ರಾಧಿಪತ್ಯ ನಮಗೆ ಸ್ವಾತಂತ್ರ್ಯ ನೀಡಲಿಲ್ಲ; ಅದನ್ನು ನಾವೇ ತೆಗೆದುಕೊಂಡೆವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ತುಂಬ ಮುಖ್ಯ. ಮಹಾನ್ ಭಾಗ್ಯವಿಧಾತ ಮಹಾತ್ಮ ಗಾಂಧೀಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ವೀರರ ಪೀಳಿಗೆಯೊಂದು ಇದನ್ನು ಗೆದ್ದು ತಂದಿತು. ಇತಿಹಾಸದಲ್ಲೇ ಅತ್ಯಂತ ಬಲಿಷ್ಠವಾದ ಶಕ್ತಿಯೊಂದರ ವಿರುದ್ಧ ರಾಜಕೀಯ ಚಿಂತನೆಯನ್ನೇ ಪರಿವರ್ತಿಸಿದಂತಹ ನಿಸ್ವಾರ್ಥ ಮತ್ತು ದೃಢನಿರ್ಧಾರಗಳಿಂದ ಈ ಸ್ವಾತಂತ್ರ್ಯ ಯೋಧರು ಹೋರಾಡಿ ಜಯಗಳಿಸಿದರು. ಇಂದಿಗೂ ಆ ಹೋರಾಟದ ಪ್ರತಿಧ್ವನಿ ನಮ್ಮ ಪ್ರಮುಖ ಘಟನೆಗಳ ಸಂದರ್ಭದಲ್ಲಿ ಸುತ್ತಮುತ್ತ ಅನುರಣಿಸುತ್ತದೆ. ಯೂರೋಪಿಯನ್ನರ ವಸಾಹತುಷಾಹಿಯ ಆರಂಭ, ಭಾರತದಲ್ಲಿ ೧೮ನೇ ಶತಮಾನದಲ್ಲಿ ಆರಂಭವಾಗಿದ್ದರೆ; ಅದರ ವಿರುದ್ಧವಾಗಿ ಒಗ್ಗಟ್ಟಾಗಿದ್ದ 'ಜೈ ಹಿಂದ್' ಎಂಬ ಸ್ವಾತಂತ್ರ್ಯ ಘೋಷಣೆ, ೧೯೪೭ರಲ್ಲಿ ಅದರ ಮುಕ್ತಾಯವನ್ನು ಹಾಡಿತು. ಭಾರತದ ಜನರು ಪ್ರೀತಿಯಿಂದ 'ನೇತಾಜಿ' ಎಂದು ಕರೆಯುವ ಸುಭಾಸ್ ಚಂದ್ರ ಬೋಸ್ ಅವರು ವಿಜಯಕ್ಕಾಗಿ 'ಜೈ ಹಿಂದ್' ಎಂಬ

ಅಂತಿಮ ಕರೆ ನೀಡಿದರು. ಪಂಡಿತ್ ಜವಾಹರಲಾಲ್ ನೆಹರೂ, ಬಾಬಾ ಸಾಹೇಬ್ ಅಂಬೇಡ್ಕರ್, ಸರ್ದಾರ್ ವಲ್ಲಭಭಾಯ್ ಪಟೇಲ್, ಮೌಲಾನಾ ಅಬುಲ್ ಕಲಾಂ ಅಜ಼ಾದ್, ಸರೋಜಿನಿ ನಾಯ್ಡು ಮತ್ತು ಇತರ ಹಲವಾರು ಪ್ರಮುಖರು ಸ್ವತಂತ್ರ ಭಾರತದ ಹೋರಾಟದ ನಕ್ಷೆಪಠ ಬಿಡಿಸಿದರು. ಈ ಅಸಾಧಾರಣ ಪುರುಷರೂ ಮತ್ತು ಮಹಿಳೆಯರು ಅವರ ಅಂದಿನ ದಿನಗಳನ್ನು ನಮ್ಮ ನಾಳೆಗಳಿಗಾಗಿ ತ್ಯಾಗ ಮಾಡಿದರು. ಆ 'ನಾಳೆ' ಈಗ ಬಂದಿದೆ. ಈಗ ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ. ಆ ಘನ ವ್ಯಕ್ತಿಗಳ ಮಹತ್ ದೂರದೃಷ್ಟಿಯನ್ನೂ, ನಾವಿಂದು, ಒಂದು ರಾಷ್ಟ್ರವಾಗಿ, ಒಂದು ಸಮಾಜವಾಗಿ ಗೌರವಿಸಿದ್ದೇವೆಯೇ?

"ಬಡತನ, ಅನಕ್ಷರತೆ, ಅನಾರೋಗ್ಯ, ಇವುಗಳ ನಿವಾರಣೆಯೇ ನಮ್ಮ ಪ್ರಮುಖ ರಾಷ್ಟ್ರೀಯ ಸಮಸ್ಯೆಗಳು" ಎಂದು ತಪತಿ ನದಿಯ ದಡದಲ್ಲಿರುವ ಹರಿಪುರದ ೫೧ನೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ನಾಯಕ ನೇತಾಜಿಯವರು ತಿಳಿಸಿ ಹೇಳಿದಾಗ, ನಾನಿನ್ನೂ ನಡಿಗೆ ಕಲಿಯಲು ಯತ್ನಿಸುತ್ತಿದ್ದ ಪುಟ್ಟ ಬಾಲಕ. ನಮ್ಮ ಮನೆಯಲ್ಲಿ ಆದಂತೆ, ದೇಶದ ಲಕ್ಷಾಂತರ ಮನೆಗಳಲ್ಲೂ ಅವರ ಭಾಷಣ ಮಾರ್ದನಿಸಿತು. ನನ್ನ ತಂದೆ ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ಒಂದು ಭ್ರಾಂತಿಯೇನೋ ಎನ್ನಿಸುತ್ತಿದ್ದ ಅಂದಿನ ಸುದೀರ್ಘ ಹೋರಾಟದ ಕಾಲದಲ್ಲಿ, ಅದನ್ನು ತಡೆದುಕೊಳ್ಳುವಂತೆ ನಮ್ಮನ್ನು ಕಾಯ್ದದ್ದು ನಮ್ಮೊಳಗಿನ ಆತ್ಮವಿಶ್ವಾಸ, ನಮ್ಮ ನಾಯಕರ ಬಗ್ಗೆ ನಮಗಿದ್ದ ವಿಶ್ವಾಸ, ಅಹಿಂಸಾ ಮಾರ್ಗದಲ್ಲಿನ ಬಲ, ಭಯಭೀತಿಗಳಿಂದ ಮುಕ್ತರಾಗಿದ್ದ ಭಾರತೀಯರ ದಿಟ್ಟತನ. ಈಗಿನಂತೆ ಆಗಲೂ ನಮಗೆ ತಿಳಿದಿದ್ದ ಅಂಶವೆಂದರೆ, ಸ್ವಾತಂತ್ರ್ಯ ಎಂದರೆ "ಅದರಲ್ಲಿ ತಿನ್ನುವ ಅನ್ನ ಮತ್ತು ಕಾಣುವ ಕನಸು ಎರಡೂ ಸೇರಿರಬೇಕು ಎಂಬ ಪರಿಜ್ಞಾನ."

ಮೇಲ್ನೋಟಕ್ಕೆ ಅತ್ಯಂತ ಕಠಿಣ ಎನಿಸುವ ತದ್ವಿರುದ್ಧ ಅಂಶಗಳನ್ನೆಲ್ಲ ಸಮನ್ವಯಗೊಳಿಸುವುದರಿಂದ ಭಾರತದ ಭವಿಷ್ಯವನ್ನು ಕಾಯ್ದುಕೊಳ್ಳಬಹುದು ಎಂಬ ನಂಬಿಕೆ ನೇತಾಜಿ ಮತ್ತು ನೆಹರೂಜಿ ಅವರದಾಗಿತ್ತು. ವಸಾಹತುಷಾಹಿ ನಂತರದ ವಿಶ್ವಕ್ಕೆ ಭಾರತ ಒಂದು ಪರ್ಯಾಯ ಮಾದರಿಯಾಗಬೇಕು. ವಿವಿಧ ಕೋಮುಗಳ ನಡುವೆ ದ್ವೇಷಕ್ಕೆ ಬದಲು ಸೌಹಾರ್ದದಿಂದ ಪ್ರೇರಿತವಾದ ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ಕ್ರಾಂತಿಯ ಮಾದರಿಯಾಗಿ ಭಾರತ ವಿಜೃಂಭಿಸಬೇಕು. ಮತೀಯ ಸ್ವಾತಂತ್ರ್ಯ, ಲಿಂಗ ಸಮಾನತೆ ಮತ್ತು ಆರ್ಥಿಕ ನ್ಯಾಯ ಮುಂತಾದವುಗಳ ಆಧಾರದ ಮೇಲೆ ಭಾರತ ಒಂದು ಮಾದರಿ ರಾಷ್ಟ್ರವಾಗಬೇಕು. ಇಂತಹ ಒಂದು ಆಧುನಿಕ ರಾಷ್ಟ್ರವಾಗಿ ಭಾರತ ಬೆಳೆಯುತ್ತಿದೆ ಎಂಬ ಸಂಗತಿಯನ್ನು ಸಣ್ಣಪುಟ್ಟ ಕುಂದುಕೊರತೆಗಳು ಮುಚ್ಚಿ ಹಾಕಿಬಿಡಬಾರದು. ನಮ್ಮ ದೇಶದಲ್ಲಿ ಯಾವುದೇ ಧಾರ್ಮಿಕ ನಂಬಿಕೆಗಳು ಅಪಾಯದಲ್ಲಿಲ್ಲ ಮತ್ತು ಲಿಂಗ ಸಮಾನತೆ ಬಗ್ಗೆ ನಮ್ಮ ಬದ್ಧತೆ ಮುಂದುವರಿದಿರುವುದೂ ಇಂದಿನ ವಾಸ್ತವ.

ನನ್ನ ಸಹ ಪ್ರಜೆಗಳೇ, ನಾನು ನಿರಾಶಾವಾದಿಯಲ್ಲ. ನನ್ನ ದೃಷ್ಟಿಯಲ್ಲಿ ಒಂದು ಲೋಟ ಯಾವಾಗಲೂ ಅರ್ಧ ತುಂಬಿದೆಯೇ ಹೊರತು, ಅರ್ಧ ಖಾಲಿ ಎನಿಸುವುದಿಲ್ಲ. ಆಧುನಿಕ ಭಾರತದ ಲೋಟ ಅರ್ಧಕ್ಕಿಂತ ಹೆಚ್ಚು ತುಂಬಿದೆ ಎಂದೇ

ನಾನು ಹೇಳಲು ಇಷ್ಟಪಡುತ್ತೇನೆ. ನಮ್ಮ ಉತ್ಪಾದನಾ ಕಾರ್ಮಿಕರು, ಸ್ಫೂರ್ತಿಯಿಂದ ಕಾರ್ಯವೆಸಗುವ ನಮ್ಮ ರೈತರು ಬರದಿಂದ ಪೀಡಿತವಾಗಿದ್ದ ಭೂಮಿಯನ್ನು ಆಹಾರ ಸಮೃದ್ಧಿಯ ನಾಡನ್ನಾಗಿ ಅಭಿವೃದ್ಧಿ ಪಡಿಸಿದ್ದಾರೆ. ಖಾಸಗಿ ಹಾಗೂ ಸರ್ಕಾರಿ ವಲಯದ ಕೈಗಾರಿಕಾ ಉದ್ಯಮಶೀಲರು, ನಮ್ಮ ಬುದ್ಧಿಜೀವಿಗಳು, ಶಿಕ್ಷಣವೇತ್ತರು ಮತ್ತು ನಮ್ಮ ರಾಜಕೀಯ ಧುರೀಣರು ಕೆಲವೇ ದಶಕಗಳಲ್ಲಿ ಶತಶತಮಾನಗಳಷ್ಟು ಆರ್ಥಿಕ ಬೆಳವಣಿಗೆ ಮತ್ತು ಪ್ರಗತಿಪರ ಸಾಮಾಜಿಕ ಶಾಸನ ರಚನೆ ಭಾರತದಲ್ಲಿ ಸಾಧ್ಯವಾಗುವಂತೆ ಮಾಡಿದ್ದಾರೆ.

ನಾವು ಎಷ್ಟು ದೂರ ಸಾಗಿ ಬಂದಿದ್ದೇವೆ ಎಂದು ತಿಳಿಯಬೇಕಾದರೆ, ನಾವು ಸ್ವತಂತ್ರವಾಗಿ ಕಾರ್ಯ ಆರಂಭಿಸಿದ ೧೯೪೭ರಲ್ಲಿ ಎಲ್ಲಿದ್ದೆವು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ೧೯೦೦ ರಿಂದ ೧೯೪೭ರ ವರೆಗೆ ಭಾರತದ ಆರ್ಥಿಕ ಬೆಳವಣಿಗೆ ವಾರ್ಷಿಕ ಶೇಕಡಾ ೧ ರಷ್ಟಿತ್ತು. ಇಂತಹ ಪ್ರಪಾತದಿಂದ ನಾವು ಎದ್ದು ಬಂದಿದ್ದೇವೆ. ಮೊದಲು, ಶೇಕಡಾ ೩ ರಷ್ಟು ಬೆಳವಣಿಗೆ. ನಂತರ ಒಂದು ದೊಡ್ಡ ಮುನ್ನೆಗೆತ; ಇಂದು ಪ್ರಪಂಚವನ್ನೇ ನಡುಗಿಸಿದ, ಎರಡು ದುರ್ಭರ ಅಂತಾರಾಷ್ಟ್ರೀಯ ಬಿಕ್ಕಟ್ಟುಗಳನ್ನು ಮತ್ತು ಸ್ವದೇಶದಲ್ಲಿನ ಕೆಲವು ಹಿನ್ನಡೆಗಳನ್ನು ಎದುರಿಸಿಯೂ, ನಾವು ಶೇಕಡಾ ೮ ಕ್ಕಿಂತ ಹೆಚ್ಚು ಸರಾಸರಿ ಬೆಳವಣಿಗೆಯನ್ನು ಕಳೆದ ೭ ವರ್ಷಗಳಲ್ಲಿ ಸಾಧಿಸಿದ್ದೇವೆ.

ಈಗ ನಮಗೆ ಎರಡನೆಯ ಸ್ವಾತಂತ್ರ್ಯ ಹೋರಾಟ ಅಗತ್ಯವಾಗಿದೆ. ಹಸಿವು, ಅನಾರೋಗ್ಯ ಮತ್ತು ಬಡತನದಿಂದ ಭಾರತವನ್ನು ಎಲ್ಲ ಕಾಲಕ್ಕೂ ಮುಕ್ತಗೊಳಿಸುವುದು ಈ ಹೋರಾಟದಿಂದ ಸಾಧ್ಯವಾಗಬೇಕು. ನನಗೆ ಮುಂಚೆ, ಈ ಹಿಂದೆ, ಇದೇ ವೇದಿಕೆಯಿಂದ, ಸ್ವಾತಂತ್ರ್ಯೋತ್ಸವದ ೧೮ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸುವಿಖ್ಯಾತರಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮಾತನಾಡುತ್ತಾ "ಆರ್ಥಿಕ ಪ್ರಗತಿ ಪ್ರಜಾಪ್ರಭುತ್ವ ಎದುರಿಸಬೇಕಾದ ಒಂದು ಪರೀಕ್ಷೆ" ಎಂದು ಹೇಳಿದ್ದರು.

ಯುವಜನರ ಆಶೋತ್ತರಗಳು ದಿನದಿನಕ್ಕೂ ಹೆಚ್ಚುತ್ತಿವೆ. ಪ್ರಗತಿಯಲ್ಲಿ ಹಿನ್ನಡೆಯಾಗಬಾರದು. ಕಿರಿಯರು ಜ್ಞಾನದಾಹಿಗಳಾಗಿದ್ದಾರೆ. ಅವರಿಗೆ ಈ ಬೌದ್ಧಿಕ ಕೌಶಲ ಒದಗಿಸಬೇಕು. ಇದರಿಂದ ಭಾರತವೂ ಶೀಘ್ರ ಗತಿಯಲ್ಲಿ ವಿಶ್ವದೊಡನೆ ಹೆಜ್ಜೆಹಾಕಲು ಸಾಧ್ಯವಾಗುತ್ತದೆ. ಶಿಕ್ಷಣ ಬೀಜವಾದರೆ, ಆರ್ಥಿಕ ಮುನ್ನಡೆ ಅದರ ಫಲಶ್ರುತಿ. ಒಳ್ಳೆಯ ಶಿಕ್ಷಣ ನೀಡಿ, ಮಿಕ್ಕೆಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ. ನಾನು ಈ ಸ್ಥಾನ ಸ್ವೀಕರಿಸಿದ ಸಂದರ್ಭದಲ್ಲಿ ಹೇಳಿದಂತೆ, ನಮ್ಮ ಧ್ಯೇಯ "ಜ್ಞಾನಕ್ಕಾಗಿ ಎಲ್ಲರೂ ಮತ್ತು ಎಲ್ಲರಿಗೂ ಜ್ಞಾನ". ನಮ್ಮ ದೂರದರ್ಶಿತ್ವವನ್ನು ಯುವಜನರ ಮೇಲೆ ಕೇಂದ್ರೀಕರಿಸೋಣ.

ನನ್ನ ದೇಶಬಾಂಧವರೇ, ಕಳೆದ ಎರಡು ದಶಕಗಳಲ್ಲಿನ ನಿರಂತರ ಆರ್ಥಿಕ ಸುಧಾರಣೆಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಆದಾಯ ಹಾಗೂ ಬಳಕೆಯಲ್ಲಿನ ಸರಾಸರಿ ಮಟ್ಟವನ್ನು ಸುಧಾರಿಸುವಲ್ಲಿ ನೆರವಾಗಿವೆ. ಕೆಲವು ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಹೊಸ ಚೈತನ್ಯ ಮೂಡಿಬಂದಿದ್ದು, ಅವುಗಳೆಲ್ಲಾ ರಾಷ್ಟ್ರೀಯ ಆರ್ಥಿಕ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಂಡಿವೆ. ಆದರೂ ಸಹ

ಸಂಪರ್ಕ ಕಲ್ಪಿಸಬೇಕಾದದ ಕಂದಕಗಳೂ ಸಾಕಷ್ಟಿವೆ. ಹಸಿರು ಕ್ರಾಂತಿಯನ್ನು ನಮ್ಮ ದೇಶದ ಪೂರ್ವ ವಲಯಕ್ಕೆ ವಿಸ್ತರಿಸಬೇಕಿದೆ. ಶಿಕ್ಷಣ ಮತ್ತು ಆರೋಗ್ಯ ಸೇವೆ, ಆದಷ್ಟು ಶೀಘ್ರವಾಗಿ ದೇಶದ ಕಟ್ಟಕಡೆಯ ಮನುಷ್ಯನನ್ನೂ ತಲುಪಬೇಕಾಗಿದೆ. ಸಾಕಷ್ಟು ಕೆಲಸಗಳು ಆಗಿವೆ. ಆಗಬೇಕಾದ ಕೆಲಸಗಳೂ ಸಾಕಷ್ಟಿವೆ.

ಮಳೆ ಈ ಬಾರಿ ಚೆಲ್ಲಾಟವಾಡಿದೆ. ನಮ್ಮ ದೇಶದ ಬಹುಭಾಗ ಬರಗಾಲದ ಶಾಪಕ್ಕೆ ಸಿಕ್ಕಿದರೆ, ಉಳಿದ ಕೆಲವು ಪ್ರದೇಶಗಳು ಪ್ರವಾಹಕ್ಕೆ ಈಡಾಗಿವೆ. ಹಣದುಬ್ಬರ, ಅದರಲ್ಲೂ ಆಹಾರ ಪದಾರ್ಥಗಳ ಬೆಲೆಏರಿಕೆ ತುಂಬ ಕಾಡುತ್ತಿವೆ. ಆಹಾರದಲ್ಲಿನ ನಮ್ಮ ತೃಪ್ತಿಕರ ಪರಿಸ್ಥಿತಿ ರೈತರ ನೆರವಿನಿಂದ ಸಾಧ್ಯವಾಗಿದೆ. ದೇಶದ ಕಷ್ಟಕಾಲದಲ್ಲಿ ಅವರು ಸಹಾಯಕ್ಕೆ ಬಂದಿದ್ದಾರೆ. ಅವರ ಈಗಿನ ಸಂಕಷ್ಟದಲ್ಲಿ ರಾಷ್ಟ್ರ ಅವರ ಬೆಂಬಲಕ್ಕೆ ನಿಲ್ಲಬೇಕಾಗಿದೆ.

"ಮನುಷ್ಯನ ಅಗತ್ಯಕ್ಕೆ ಸಾಕಾಗುವಷ್ಟು ಸಂಪನ್ಮೂಲ ಪ್ರಪಂಚದಲ್ಲಿದೆ; ಆದರೆ ಅವನ ದುರಾಸೆಗೆ ಸಾಕಾಗುವಷ್ಟಲ್ಲ" ಎಂದು ಗಾಂಧೀಜಿ ಹೇಳುತ್ತಿದ್ದರು. ನಾವು ಸುರಕ್ಷಿತವಾಗಿದ್ದೇವೆ. ಸರ್ವರೊಂದಿಗೆ ಸೌಹಾರ್ದದಿಂದ ಜೀವಿಸಲು ನಾವು ಕಲಿಯಬೇಕು. ಪ್ರಕೃತಿ ಒಂದೇ ರೀತಿಯಾಗಿರುವುದಿಲ್ಲ. ಆಕೆಯ ಸಂಪತ್ತನ್ನು, ಸಮೃದ್ಧವಾದ ಕಾಲದಲ್ಲಿ ರಕ್ಷಿಸಿಟ್ಟುಕೊಳ್ಳುವುದನ್ನು ಕಲಿಯಬೇಕು. ಇದರಿಂದ ಅಭಾವ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುತ್ತದೆ.

ತೀವ್ರ ಭ್ರಷ್ಟಾಚಾರದ ವಿರುದ್ಧ ಸಿಟ್ಟು ನ್ಯಾಯವಾದದ್ದೇ. ನಮ್ಮ ದೇಶದ ಸಾಮರ್ಥ್ಯ ಹಾಗು ಸುಪ್ತ ಶಕ್ತಿಗಳನ್ನೆಲ್ಲ ನಾಶಮಾಡುತ್ತಿರುವ ಈ ಪೀಡೆಯ ವಿರುದ್ಧ ತೀವ್ರ ಪ್ರತಿಭಟನೆಯೂ ಅರ್ಥ ಮಾಡಿಕೊಳ್ಳುವಂಥದ್ದೇ. ಈ ಸಂಬಂಧ ಜನತೆ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳುವುದಿದೆ. ಆದರೆ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಗಳ ಮೇಲೆ ದುಂಡಾವರ್ತಿಗೆ ಇದು ಒಂದು ನೆಪವಾಗಬಾರದು.

ಇಂತಹ ವ್ಯವಸ್ಥೆಗಳು ನಮ್ಮ ಸಂವಿಧಾನದ ಸ್ತಂಭಗಳು. ಇವುಗಳಲ್ಲಿ ಬಿರುಕುಂಟಾದರೆ ನಮ್ಮ ಸಂವಿಧಾನದ ಧ್ಯೇಯಗಳು ಕುಸಿದು ಬೀಳುತ್ತವೆ. ಧ್ಯೇಯಗಳು ಹಾಗೂ ಜನತೆಯನ್ನು ಒಂದುಗೂಡಿಸುವ ಸಾಧನಗಳಿವು. ಕಾಲಚಕ್ರದಲ್ಲಿನ ಬದಲಾವಣೆಗಳಿಂದಾಗಿ ವ್ಯವಸ್ಥೆಯಲ್ಲಿ ಕೆಲಮಟ್ಟಿನ ದೋಷಗಳು ಕಂಡುಬಂದಿರಬಹುದು. ಅವುಗಳನ್ನು ಪುನರ್‌ವ್ಯವಸ್ಥೆಗೊಳಿಸಬೇಕೇ ಹೊರತು ನಾಶಪಡಿಸಬಾರದು. ಈ ವ್ಯವಸ್ಥೆಗಳು ನಮ್ಮ ಸ್ವಾತಂತ್ರ್ಯದ ರಕ್ಷಕರು.

ನಮ್ಮ ಗಡಿಪ್ರದೇಶದಲ್ಲಿನ ಜಾಗರೂಕತೆ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ನಮ್ಮೊಳಗಿನ ಜಾಗರೂಕತೆ. ನಮ್ಮ ರಾಜಕಾರಣ, ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳಲ್ಲಿ ಕಾರ್ಯ ಸುಗಮವಾಗಿ ನಡೆಯಲು ತಡೆಯಾಗಿರಬಹುದಾದ ಉದಾಸೀನ ಮನೋಭಾವ, ಬಳಲಿಕೆ ಅಥವಾ ಅಧಿಕಾರ ದುರ್ವರ್ತನೆಗಳನ್ನು ನಿವಾರಿಸಿ ವಿಶ್ವಾಸಾರ್ಹತೆಯನ್ನು ಮತ್ತೆ ತುಂಬಿ ನೋಡಬೇಕಾಗಿದೆ. ತಮ್ಮ ಅತೃಪ್ತಿಯನ್ನು ಅಭಿವ್ಯಕ್ತಗೊಳಿಸಲು ಜನರಿಗೆ ಹಕ್ಕಿದೆ. ಆದರೆ ಶಾಸಕಾಂಗದಿಂದ ಅದರ ಶಾಸನ ಮಾಡುವ ಕಾರ್ಯವನ್ನಾಗಲೀ, ನ್ಯಾಯಾಂಗದಿಂದ ನ್ಯಾಯ ಪ್ರದಾನವನ್ನಾಗಲೀ ಬಲಾತ್ಕಾರವಾಗಿ ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನಾವು ಮನಗಾಣಬೇಕು.

ಪ್ರಜಾಪ್ರಭುತ್ವ ಎನ್ನುವುದು ಒಂದು ಹಂಚಿಕೆಯ ಪ್ರಕ್ರಿಯೆ. ನಾವೆಲ್ಲರೂ ಒಟ್ಟಿಗೆ ಗೆಲ್ಲುತ್ತೇವೆ ಅಥವಾ ಸೋಲುತ್ತೇವೆ. ಅಭಿಪ್ರಾಯಗಳಾದರೂ ಸಹ, ಸಹಿಸಿಕೊಳ್ಳುವ ಮತ್ತು ಗಾಂಭೀರ್ಯದಿಂದ ನಡೆದುಕೊಳ್ಳುವ ರೀತಿಯನ್ನು ಪ್ರಜಾಪ್ರಭುತ್ವ ಮನೋಭಾವ ಅಪೇಕ್ಷಿಸುತ್ತದೆ. ಪಾರ್ಲಿಮೆಂಟಿಗೆ ಅದರದೇ ಆದ ವೇಳಾಪಟ್ಟಿಯಿದೆ, ನಡೆಯಿದೆ. ಈ ಓಟ ಒಮ್ಮೊಮ್ಮೆ ಅಷ್ಟಾಗಿ ಲಯಬದ್ಧವಾಗಿರದೇ ಇರಬಹುದು; ಆದರೆ ಪ್ರಜಾಪ್ರಭುತ್ವದಲ್ಲಿ 'ತೀರ್ಪು ನೀಡಿಕೆಯ ಒಂದು ದಿನವಿದೆ', ಅದೇ ಚುನಾವಣೆ. ಪಾರ್ಲಿಮೆಂಟ್, ಜನತೆಯ ಆತ್ಮವಿದ್ದಂತೆ, ಭಾರತದ 'ಆತ್ಮನ್' ಅದು. ಅದರ ಹಕ್ಕು ಬಾಧ್ಯತೆಗಳಿಗೆ ನಾವು ಸವಾಲೊಡ್ಡಿದರೆ, ಅದರಿಂದ ನಮಗೇ ಅಪಾಯ.

ಇದನ್ನೆನೂ ನಾನು ಎಚ್ಚರಿಕೆ ಎಂಬ ಅರ್ಥದಲ್ಲಿ ಹೇಳುತ್ತಿಲ್ಲ. ಆದರೆ ಐಹಿಕ ವ್ಯವಹಾರಗಳ ಸಂದಿಯಲ್ಲೇ ನುಸುಳುವ ಇಂದಿನ ಹಲವಾರು ವಿಷಯಗಳನ್ನು ಕೂಲಂಕಷವಾಗಿ ಅರ್ಥಮಾಡಿಕೊಳ್ಳಬೇಕೆಂದು ಮನವಿಮಾಡಿಕೊಳ್ಳುವ ಉದ್ದೇಶದಿಂದ ಹೇಳುತ್ತಿದ್ದೇನೆ. ಇಂತಹ ಅಳಲು, ಸಂಕಟಗಳಿಗೆಲ್ಲ ಪರಿಹಾರ ಕಂಡುಕೊಳ್ಳಬಹುದಾದ ಒಂದು ವಿಶಿಷ್ಟ ಅವಕಾಶವೂ ಪ್ರಜಾಪ್ರಭುತ್ವದಲ್ಲಿದೆ. ಅದೆಂದರೆ ಹೊಣೆಗಾರಿಕೆಯಿಂದ ನಿರ್ವಹಿಸಬೇಕಾದ ಮಹಾನ್ ಕ್ರಿಯೆ – ಮುಕ್ತ ಚುನಾವಣೆ.

ಅಸ್ಸಾಂನ ಹಿಂಸಾಕೃತ್ಯಗಳನ್ನು ಕಂಡು ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಹಳೆಯ ದ್ವೇಷಾಸೂಯೆಗಳ ಬೆಂಕಿ ಪೂರ್ತಿಯಾಗಿ ಆರಿಲ್ಲ. ಇನ್ನೂ ಅಲ್ಲಲ್ಲಿ ಹೊಗೆಯಾಡುತ್ತಿದೆ. ನಮ್ಮ ಅಲ್ಪಸಂಖ್ಯಾತರಿಗೆ ನೆಮ್ಮದಿ ತಂದುಕೊಡಬೇಕಾಗಿದೆ. ಅವರನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ದೌರ್ಜನ್ಯಗಳಿಂದ ಅವರಿಗೆ ರಕ್ಷಣೆ ನೀಡಬೇಕಾಗಿದೆ. ಎಲ್ಲಕ್ಕೂ ಹಿಂಸೆಯೇ ಆಯ್ಕೆಯ ಮಾರ್ಗವಲ್ಲ. ಹಿಂಸೆಯಿಂದ ಹಿಂಸೆ ಉಲ್ಬಣವಾಗುತ್ತದಷ್ಟೇ. ನಮ್ಮ ಯುವ ಹಾಗೂ ಮಾಜಿ ಪ್ರಧಾನಮಂತ್ರಿ ಪ್ರಿಯ ರಾಜೀವ್ ಗಾಂಧೀಯವರು ರೂಪಿಸಿದ್ದ ಅಸ್ಸಾಂ ಒಪ್ಪಂದವೂ ಸೇರಿದಂತೆ, ಅಸ್ಸಾಂ ಜನರ ಸಂಕಷ್ಟಗಳನ್ನು ನಿವಾರಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಗಿದೆ. ನ್ಯಾಯ ಸಮ್ಮತ ಹಾಗೂ ರಾಷ್ಟ್ರೀಯ ಹಿತದೃಷ್ಟಿಯಿಂದ ಅವರನ್ನು ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಮಾಡಲು ಮತ್ತೆ ಅವರ ಬಳಿಗೆ ತೆರಳಬೇಕಾಗಿದೆ.

ಅಂತಾರಾಷ್ಟ್ರೀಯ ಸಹಕಾರದಿಂದ ಹೆಚ್ಚಿನ ಯಶಸ್ಸು ಸಾಧಿಸಬಹುದಾಗಿದೆ. ಉಗ್ರಗಾಮಿಗಳ ವಿರುದ್ಧದ ಸಮರ ಸಾರ್ಕ್ ಒಕ್ಕೂಟದ ಎಲ್ಲರಿಗೂ ಅನ್ವಯಿಸುವಂತಹದ್ದಾಗಿದ್ದು, ಈ ಒಕ್ಕೂಟ ನೆರವಾಗಬಲ್ಲದಾಗಿದೆ. ಇಲ್ಲದಿದ್ದರೆ ಈ ಉಪಖಂಡದಲ್ಲಿ ಶಾಂತಿ ಸ್ಥಾಪನೆಗೆ ಅನ್ಯಮಾರ್ಗವಿರಲಿಲ್ಲ.

ಉಗ್ರಗಾಮಿಗಳ ಹಾವಳಿಯನ್ನು ತಡೆಗಟ್ಟುವಲ್ಲಿ ವೈಯಕ್ತಿಕ ಅಪಾಯಗಳನ್ನು ಲೆಕ್ಕಿಸದೆ, ಅಪಾರವಾಗಿ ಶ್ರಮಿಸಿರುವ ನಮ್ಮ ಧೈರ್ಯವಂತ ಸಶಸ್ತ್ರ ದಳಗಳು ಮತ್ತು ನಮ್ಮ ಸಾಹಸಿ ಪೊಲೀಸ್ ಪಡೆಗಳ ಬಗ್ಗೆ ನಾನು ತಂಬ ಅಭಿಮಾನಪಡುತ್ತೇನೆ. ಇವರುಗಳು ತಮ್ಮ ಜಾಗರೂಕತೆಯಿಂದಾಗಿ ಇನ್ನೂ ಹೆಚ್ಚಿನ ಕಷ್ಟ ನಷ್ಟಗಳನ್ನು ತಡೆಗಟ್ಟಿದ್ದಾರೆ. ನಾವಿಂದು ಶಾಂತಿಯಿಂದ ನಿದ್ರೆ ಮಾಡುತ್ತಿದ್ದರೆ, ಅದು ಇವರುಗಳು ಮರುಭೂಮಿಯ, ಪರ್ವತಗಳ ಮತ್ತು ಅರಣ್ಯದ ರುದ್ರ ಭಯಾನಕ ಮೌನದಲ್ಲಿ ಹಾಗೂ ಸಮುದ್ರದ ಏಕತಾನತೆಯ ಗಂಭೀರತೆಯಲ್ಲಿ ಕಟ್ಟೆಚ್ಚರಿಕೆಯಿಂದ ನಮ್ಮ

ಸುರಕ್ಷತೆ ನೋಡಿಕೊಳ್ಳುತ್ತಿರುವ ಕಾರಣದಿಂದ. ಅವರ ಬದ್ಧತೆ ಮತ್ತು ದೇಶಭಕ್ತಿಗೆ ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತಿದ್ದೇನೆ. ನಮ್ಮ ಸಶಸ್ತ್ರ ಸೇನಾ ಪಡೆಯವರು, ನಮ್ಮ ಶಾಂತಿಯನ್ನು ರಕ್ಷಿಸಿಕೊಡುತ್ತಿರುವುದರ ಜೊತೆಗೆ, ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಪದಕ ವಿಜೇತರನ್ನು ಕೊಡುತ್ತಿದ್ದಾರೆ ಎಂಬ ವಿಷಯ ತುಂಬ ಸಂತಸದಾಯಕ. ಇತ್ತೀಚೆಗೆ ಮುಕ್ತಾಯವಾದ ಒಲಂಪಿಕ್ಸ್‌ನಲ್ಲಿ ನಮ್ಮ ದೇಶ ಅಭಿಮಾನದಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿರುವ ಈ ಎಲ್ಲ ಕ್ರೀಡಾಪಟುಗಳನ್ನು ನಾನು ಅಭಿನಂದಿಸುತ್ತೇನೆ. ಅವರು ತಂದಿರುವ ಪದಕಗಳ ಸಂಖ್ಯೆ ಹೆಚ್ಚಿಲ್ಲದಿರಬಹುದು. ಆದರೆ ಕಳೆದ ಕ್ರೀಡೋತ್ಸವಕ್ಕೆ ಹೋಲಿಸಿದರೆ ಇದು ಗಮನಾರ್ಹ ಪ್ರಗತಿ. ಮತ್ತೆ ನಾಲ್ಕು ವರ್ಷಗಳ ನಂತರ, ನಾನು ನಿಮ್ಮನ್ನು ಉದ್ದೇಶಿಸಿ ಮಾತನಾಡುವೆನೆಂಬ ಆಶಯದೊಂದಿಗೆ, ಈ ಪದಕಗಳ ಸರಮಾಲೆಯೇ ಹರಿದು ಬರುವುದನ್ನು ಸಂಭ್ರಮಿಸಿ ಆಚರಿಸಲಾಗುವುದೆಂಬ ಭರವಸೆಯಿಂದಿದ್ದೇನೆ.

ನನ್ನ ದೇಶಬಾಂಧವರೇ, ಇತಿಹಾಸದಲ್ಲಿ 'ಶಾಂತಿ' ಎಂದು ನೆನೆದಕೂಡಲೇ ಅದರ ಪರ್ಯಾಯವೆಂಬಂತೆ ನೆನಪಿಗೆ ಬರುವ ಯಾರಾದರೂ ಒಬ್ಬ ವ್ಯಕ್ತಿ ಇದ್ದರೆ, ಅದು ಭಾರತ ಸ್ವಾತಂತ್ರ್ಯದ ಶಿಲ್ಪಿ ಗಾಂಧೀಜಿ. ಭಾರತ ಸಮೃದ್ಧ ದೇಶವಾದರೂ, ಬಡತನ ತಪ್ಪಿಲ್ಲ. ಉನ್ನತವಾದ ನಾಗರೀಕತೆಯ ಭಾರತ ಅಮೋಘವಾದ ಕಲೆಯಿಂದ ಬೆಳಗುವುದರ ಜೊತೆಗೆ, ಅಪಾರ ಸೃಜನಾತ್ಮಕ ಮತ್ತು ಮಾನವೀಯ ಬದುಕಿನ ನಾಡೂ ಆಗಿದೆ. ಇಂದಿರಾ ಗಾಂಧೀಯವರು ನಕ್ಷತ್ರಗಳತ್ತ ಕೈಚಾಚಿದಾಗ, ಇನ್ನೊಂದು ಪೀಳಿಗೆಯ ಅವಧಿಯಲ್ಲಿ ಇದು ಭಾರತದ ಮುಷ್ಟಿಗೆ ಸಿಕ್ಕಿರುತ್ತದೆ ಎಂಬ ವಿಶ್ವಾಸ ಹೊಂದಿದ್ದರು.

ನನ್ನ ಭಾರತದ ಪ್ರಜೆಗಳೇ,

– ದ್ವೇಷ, ಹಿಂಸೆ, ಹಾಗೂ ಕೋಪತಾಪಗಳ ಮಾರ್ಗವನ್ನು ಬಿಟ್ಟುಬಿಡೋಣ.

– ನಮ್ಮ ಸಣ್ಣಪುಟ್ಟ ಜಗಳಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿಡೋಣ.

– ತಾಯಿಯೆಡೆಗೆ ಪುಟ್ಟ ಮಗುವೊಂದು ತೋರುವ ಸಮರ್ಪಣಾ ಭಾವದಿಂದ ನಮ್ಮ ರಾಷ್ಟ್ರಕ್ಕಾಗಿ ನಾವು ಒಟ್ಟಾಗಿ ಶ್ರಮಿಸೋಣ.

ಉಪನಿಷತ್ತಿನ ಈ ಪ್ರಾರ್ಥನೆಯಲ್ಲಿ ನಮ್ಮ ವಿಶ್ವಾಸವನ್ನು ಪುನರ್ ವ್ಯಕ್ತಪಡಿಸೋಣ:–

ಭಗವಂತನು ನಮ್ಮನ್ನು ರಕ್ಷಿಸಲಿ.
ಭಗವಂತನು ನಮ್ಮನ್ನು ಪೋಷಿಸಲಿ.
ನಾವೆಲ್ಲ ಒಟ್ಟಾಗಿ ಆತ್ಮಬಲ ಚೈತನ್ಯಗಳಿಂದ ದುಡಿಯೋಣ.
ನಮ್ಮ ಅಧ್ಯಯನ ಉಜ್ವಲವಾಗಲಿ.
ನಮ್ಮ ನಮ್ಮಲ್ಲಿ ದ್ವೇಷಾಸೂಯೆಗಳು ಇರದಿರಲಿ.
ಶಾಂತಿ ಶಾಂತಿ ಶಾಂತಿ ಇದೇ ಎಲ್ಲೆಡೆ ವ್ಯಾಪಿಸಲಿ.

'ಶಾಂತಿ' ನಮ್ಮ ಧ್ಯೇಯವಾಗಿರಬೇಕು, 'ಪ್ರಗತಿ' ನಮ್ಮ ದಿಗಂತವಾಗಿರಲಿ.

ಜೈ ಹಿಂದ್ ! *(ಕೃಪೆ : ಆಕಾಶವಾಣಿ, ಬೆಂಗಳೂರು)*

ಪುಸ್ತಕ ಪರಿಚಯ

೧. ಪುಸ್ತಕದ ಹೆಸರು — **ಅಸ್ಪೃಶ್ಯತೆ**

೨. ಲೇಖಕರು — ಡಾ. ಬಿ.ಅರ್. ಅಂಬೇಡ್ಕರ್

೩. ಪ್ರಕಾಶಕರು — ಸಂಬುದ್ಧ ಪ್ರಕಾಶನ
ವಿದ್ಯಾ ಟ್ಯುಟೋರಿಯಲ್ಸ್ ಪಕ್ಕ.
ವಿ.ನಾಗನಹಳ್ಳಿ
ಬೆಂಗಳೂರು - ೫೬೦೦೩೨

೪. ಪುಟಗಳು — ೪೫+೧=೪೬

೫. ಬೆಲೆ — ೩೦ ರುಪಾಯಿ

೬. ಸಂಗ್ರಹ — ಮಂಗ್ಳೂರು ವಿಜಯ

"ಬೃಹತ್ ಗಾತ್ರದ ಗ್ರಂಥಗಳನ್ನು ಓದುವುದಕ್ಕೆ ಪ್ರಾರಂಭಿಸಲು ಜನಸಾಮಾನ್ಯರು ಹಿಂದೆ ಮುಂದೆ ನೋಡುವುದನ್ನು ಗಮನಿಸಿ, ಅವರು ಆ ಗ್ರಂಥವನ್ನು ಹೆಚ್ಚಿನ ಆಸಕ್ತಿಯಿಂದ ಓದುವುದಕ್ಕೆ ಉತ್ತೇಜಿಸುವ ದೃಷ್ಟಿಯಿಂದ, ಈ ಸಂಗ್ರಹಾನುವಾದ ಭಾಗವನ್ನು ಕನ್ನಡ ಓದುಗರ ಕೈಗೆ ನೀಡಲಾಗುತ್ತಿದೆ".ಎಂಬ ವಿಚಾರದಿಂದ ಈ ಸಂಗ್ರಹವನ್ನು ಪ್ರಕಟಪಡಿಸಲಾಗಿದೆ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಜಾತಿ ಪದ್ಧತಿ ತೀವ್ರವಿದ್ದಾಗಿನ ಅಸ್ಪೃಶ್ಯತೆಯ ಗಂಭೀರ ಸ್ವರೂಪವನ್ನು ಈ ಸಂಗ್ರಹ ದಾಖಲಿಸುತ್ತದೆ. ಆದರೆ ಸ್ವತಂತ್ರ ಭಾರತದಲ್ಲಿ ಸರ್ಕಾರಗಳ ಅನೇಕ ವಿಧವಾದ ಪುರೋಗಾಮಿ ಕ್ರಮದಿಂದಾಗಿ, ಬೆಳೆದಿರುವ ಶಿಕ್ಷಿತರ ಸಂಖ್ಯೆಯಿಂದಾಗಿ ಅಸ್ಪೃಶ್ಸತೆಯ ಆಚರಣೆ ಸರ್ವಣಿಯರಲ್ಲೂ ಕಡಿಮೆಯಾಗಿದೆ. ಉ.ಭಾರತದ ಹಿಂದುಳಿದ ಕೆಲ ಹಳ್ಳಿಗಳಲ್ಲಿ ಮತ್ತು ಕೆಲ ಮೂರ್ಖ ಮತ್ತು ಅಜ್ಞಾನಿ ಸರ್ವಣಿಯರು ಮಾತ್ರ ಅಸ್ಪೃಶ್ಸತೆಯನ್ನು ಆಚರಿಸುತ್ತಿರಬಹುದು. ಅಸ್ಪೃಶ್ಯತೆಯನ್ನು ಹೋಗಲಾಡಿಸಿದ ಕ್ರಮಗಳನ್ನು ಮತ್ತು ವ್ಯಕ್ತಿಗಳನ್ನು ಪರಿಚಯಿಸುವ ಕೆಲಸವಾಗಬೇಕಿದೆ. ಗತಕಾಲದ ಅಸ್ಪೃಶ್ಯತೆಯನ್ನು ವಿವಿಧ ನೆಪಗಳಿಂದ ತಿಳಿಹೇಳುವ ಕೆಲಸ ಎಷ್ಟು ಸೂಕ್ತ ಎಂದು ಆಲೋಚಿಸುವುದು ಯೋಗ್ಯ. ಅಸ್ಪೃಶ್ಸತೆಯ ಭೀಕರ ಸಮೆಸ್ಯೆಯನ್ನು ತಿಳಿಸಲಾಗಿರುವಂತೆ ಸರ್ವಣೀಯರು ಮತ್ತು ಅಸ್ಪೃಶ್ಯರು ಒಂದಾಗಿ ಒಳ್ಳೆ ಕೆಲಸ ಮಾಡಿರುವುದನ್ನು ತಿಳಿಸುವುದು ಸಹ ಅಷ್ಟೇ ಮುಖ್ಯವಾಗಿದೆ.

ಪುಸ್ತಕವೆಂದರೆ ಜೇಬಿನಲ್ಲಿ ತೆಗೆದೊಯ್ಯಬಹುದಾದಂಥ ತೋಟ.
- ಚೀನೀ ಗಾದೆ

ವೇದ ಬಿಂದು

– ವಿನೋಬಾ

(ಜೂನ್ ತಿಂಗಳ ಸಂಚಿಕೆಯಿಂದ ಮುಂದುವರೆದದ್ದು...)

೨೫

ಒಂದು ವೇಳೆ ಮನುಷ್ಯನ ಇಚ್ಛೆಗಳು ಪೂರ್ಣವಾಗಿ ಮುಕ್ತಾಯವಾದಲ್ಲಿ ಅದೊಂದು ಮೃತ್ಯುವಿನ ದೊಡ್ಡ ಕಾಣಿಕೆ. ವೇದದಲ್ಲಿ ಋಷಿಗಳು ಹೇಳಿದ್ದಾರೆ. ನನ್ನನ್ನು ಎರಡು ವಿಪತ್ತುಗಳಿಂದ ಉಳಿಸು. ಮೊದಲನೆಯದು ಜನ್ಮ ಮತ್ತೊಂದು ಅಮರತೆ. ಇವೆರಡು ಬಹುದೊಡ್ಡ ವಿಪತ್ತುಗಳು. ಜನ್ಮದಿಂದ ಉಳಿಸು ಎಂದರೆ ಹೊಸ ಜನ್ಮದಿಂದ ರಕ್ಷಿಸು. ಹೊಸ ಜನ್ಮ ಬೇಕಿಲ್ಲ. ಅಮೃತದಿಂದ, ಅಮರತೆಯಿಂದ ಉಳಿಸು ಅಂದರೆ ಈ ದೇಹವನ್ನು ಸದಾಕಾಲ ಜೀವಿಸುವುದರಿಂದ ಉಳಿಸು. ಅಂದರೆ 'ಸಾಯುವುದರಿಂದ ಉಳಿಸು".

೨೬

ತಮ್ಮ ಅಧಿಕಾರದ ಮಿತಿಯನ್ನು ಅರಿಯದೆ ಎಲ್ಲಂದರಲ್ಲಿ ತಲೆ ಹಾಕುವ ಉನ್ಮತ್ತ ವೃತ್ತಿಯ ವರ್ಣನೆ ವೇದಗಳಲ್ಲಿ ಸಾನೂಕೊ ವೃಕಃ (ಋಗ್ವೇದ ೨.೨೩.೭) ಎಂಬ ಶಬ್ದಗಳಿಂದ ಹೇಳಲಾಗಿದೆ. ಸಾನೂಕೊ ವೃತಃ ಅರ್ಥ ಯಾರ ಕೊಂಬು ಬೆಳೆದಿದೆಯೊ ಅಂಥ ಟಗರು.

೨೭

ವೇದದಲ್ಲಿ ನಿದ್ರೆಗೆ ಮೂರು ಶಬ್ದಗಳು ಬರುತ್ತವೆ.

೧. ನಿದ್ರಾ – ಈ ಶಬ್ದದಿಂದ ಗುಜರಾತಿಯಲ್ಲಿ 'ನಿಂದಿರಾ' ಶಬ್ದವಾಯಿತು.

೨. ಶಯನಂ – ಈ ಶಬ್ದದಿಂದ ಹಿಂದಿಯಲ್ಲಿ 'ಸೋನಾ' ಶಬ್ದವಾಯಿತು.

೩. ಸ್ವಾಪ – ಈ ಶಬ್ದದಿಂದ ಮರಾಠಿಯಲ್ಲಿ 'ಜೋಪ್' ಶಬ್ದವಾಯಿತು.

ಸ್ವಾಪ – ಸ್ವಪ್ರೀತಿಯ ಅರ್ಥ ತನ್ನಲ್ಲಿ ಲೀನವಾಗುವುದು. ನಿದ್ರೆ ಎಂಬ ಶಬ್ದಕ್ಕಾಗಿ ಇಷ್ಟೊಂದು ಆಧ್ಯಾತ್ಮಿಕ ಶಬ್ದ ಬೇರೆ ಭಾಷೆಯಲ್ಲಿ ಇಲ್ಲ.

೨೮

ಸಂಸ್ಕೃತ ಭಾಷೆಯಲ್ಲಿ 'ಸಹ' ಧಾತುವಿನ ಎರಡು ಅರ್ಥವಿವೆ. ಒಂದು ಅರ್ಥ ಸಹನೆ ಮತ್ತು ಎರಡನೆಯದು ಗೆಲ್ಲುವುದು. ವೇದದಲ್ಲಿ ಈ ಶಬ್ದ ಬಂದಿದೆ. ಈ ಶಬ್ದ ಇಂದೂ ರೂಢಿಯಲ್ಲಿದೆ. ಯಾರು ಸಹಿಷ್ಣು ಆಗಿರುತ್ತಾರೋ ಅವರೇ ಜಹಿಷ್ಣು ಆಗುತ್ತಾರೆ. ಬಾಗುವುದರಲ್ಲಿ ಶೌರ್ಯದ ಪರಾಕಾಷ್ಠತೆ ಇದೆ. ಯಾರಲ್ಲಿ ಬಾಗುವ ಧೈರ್ಯವಿರುತ್ತದೋ ಅವರೆದುರಿಗೆ ಈಶ್ವರ ಕೂಡ ಸೋಲುತ್ತಾನೆ.

೨೯

ಯೋಗ ಮತ್ತು ಕ್ಷೇಮ ಇವು ವೈದಿಕ ಶಬ್ದ. ವೈದಿಕ ಶಬ್ದಗಳಿಗೆ ಎರಡು ಅರ್ಥಗಳಿವೆ. ಒಂದು ಸಂಸಾರಿಗಳಿಗಾಗಿ ಸರ್ವ ಸಧಾರಣ ಅರ್ಥ ಮತ್ತು ಇನ್ನೊಂದು

ಸಾಧಕ–ಭಕ್ತರಿಗೆ ವಿಶೇಷ ಅರ್ಥ. ಇವುಗಳ ಸಾಧಾರಣ ಅರ್ಥವಿದೆ ಯೋಗ್ಯ. ಅಂದರೆ ಅಪ್ರಾಪ್ತ ವಸ್ತುವಿನ ಪ್ರಾಪ್ತಿ ಮತ್ತು ಪ್ರೇಮ ಅಂದರೆ ಪ್ರಾಪ್ತ ವಸ್ತುವಿನ ಸಂರಕ್ಷಣೆ.

ಶರೀರ ಯಾತ್ರೆಗಾಗಿ ಪ್ರಾಪ್ತಿ, ಸಾಧನೆಯ ಪ್ರಾಪ್ತಿ, ಈಶ್ವರ ದರ್ಶನಕ್ಕಾಗಿ ಪ್ರಾಪ್ತಿ– ಇವೆಲ್ಲವೂ ಯೋಗ. ಪ್ರಾಪ್ತಿಯ ಸಂರಕ್ಷಣೆ, ಸಾಧನೆಯಲ್ಲಿ ಬರುವಂಥ ವಿಘ್ನಗಳ ನಿವೃತ್ತಿ ಇದು ಕ್ಷೇಮ.

೩೦

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇವು ಪಂಚಶೀಲ; ಇವುಗಳಿಗೆ 'ಪಂಚಚರ್ಯ' ಎಂಬ ಹೆಸರು ಕೊಡಲ್ಪಟ್ಟಿದೆ. ಬೌದ್ಧರು ಇವುಗಳನ್ನು ಪಂಚಶೀಲ ಹೆಸರಿನಿಂದ ಗ್ರಹಿಸಿದರೆ. 'ಪತಂಜಲಿ' ಮಾವ್ರತದ ಹೆಸರಿನಿಂದ ಗ್ರಹಿಸಿದರು. ವೇದದಲ್ಲಿ ಇದರ ಉಲ್ಲೇಖ ಇರುವುದು ಕಂಡು ಬರುತ್ತದೆ. ಪಂಚಯೋಗ ಅಥವಾ 'ಪಂಚ ಮಹಾಯಜ್ಞ' ಈ ಮಾತಿನದೇ ಪ್ರತೀಕ.

೩೧

ಆದಿವಾಸಿಗಳದಂತೂ ವೈದೀಕ ಧರ್ಮ. ಆ ಜನ ಪ್ರಕೃತಿಯ ಉಪಾಸಕರು, ಧರ್ಮಿಷ್ಠರು.

೩೨

ಕ್ಷುಧ್ರ ಶಬ್ದ ವೈದಿಕ ಭಾಷೆಯಲ್ಲಿ ಬರುತ್ತದೆ. ಕ್ಷುಧ್ರ ಅಂದರೆ ಲಘು, ಚಿಕ್ಕದು. ಋಗ್ವೇದದ ಕೊನೆಯಲ್ಲಿ ಚಿಕ್ಕ–ಚಿಕ್ಕ ಸೂಕ್ತಗಳು ಬರುತ್ತವೆ. ಅವುಗಳಲ್ಲಿ ನಾಸದೀಯ, ಆಘಮರ್ಶಣ ಇತ್ಯಾದಿ ಉತ್ತಮ ಸೂಕ್ತಗಳ ಸಮಾವೇಶವಿದೆ. ಅವುಗಳಿಗೆ ವೈದಿಕ ಭಾಷೆಯಲ್ಲಿ ಕ್ಷುಧ್ರ ಸೂಕ್ತ ಎನ್ನುತ್ತಾರೆ.

೩೩

ಋಗ್ವೇದದ ೯ನೇ ಮಂಡಲದ ಪ್ರಮುಖ ದೇವತೆ ಪವಮಾನ. ಪವಮಾನದಿಂದ ವಿಷ್ಣು ದೇವತೆಯ ಅಭಿಷೇಕ ಮಾಡಲಾಗುತ್ತದೆ. ಪವಮಾನ ಸೂಕ್ತಗಳಲ್ಲಿ ಆರೇಳು ನೂರು ಮಂತ್ರಗಳಿವೆ. ಅದರಲ್ಲಿ ೨೦ ಸಲ 'ನಿಸ್ತಾರ' ಬಂದಿದೆ. (ಅದೇ ಅದೇ ಶಬ್ದ ರಚನೆ ಎರಡು–ಮೂರು ಸಲ ಬರುತ್ತದೆ. ಅದನ್ನು ಶಾಸ್ತ್ರದಲ್ಲಿ ನಿಸ್ತಾರ ಅನ್ನುತ್ತಾರೆ.) ಆದ್ದರಿಂದ ಅದನ್ನು ಬಾಯಿಪಾಠ ಮಾಡಿ ಸರಿಯಾಗಿ ಹೇಳುವುದು ತುಂಬಾ ಎಚ್ಚರಿಕೆ ವಹಸಿಬೇಕಾದ ವಿಷಯವಾಗಿದೆ.

೩೪

ಅನುಷ್ಟಪ್ ಛಂದಸ್ಸು ವೇದಗಳಿಂದ ಹಿಡಿದು ಇಂದಿನವರೆಗೆ ಉಪಯೋಗದಲ್ಲಿದೆ. ಅನುಷ್ಟಪ್ ಛಂದಸ್ಸು, ನಂತರ ರಾಮಾಯಣ–ಮಹಾಭಾರತದ ಅನುಷ್ಟಪ್ ಮತ್ತು ತದನಂತರ ಶಿಷ್ಟ ಸಂಸ್ಕೃತ ಕವಿಗಳ ಅನುಷ್ಟಪ್.

೩೫

ವೇದವನ್ನು ಅಪೌರುಷೇಯ ಎಂದು ಹೇಳುತ್ತಾರೆ. ಅಪೌರುಷೇಯ ಅಂದರೆ ಆತ್ಮ ಸಾಕ್ಷಾತ್ಕಾರದ ಮೂಲಕ ಸಹಜ ಸ್ಫುರಿತ ಮನುಷ್ಯನ ತಾರ್ಕಿಕ ಬುದ್ಧಿಯಿಂದ ಯಾವುದರ ರಚನೆ ಆಗಿಲ್ಲವೊ ಅದು ಇಂಥ ಅಪೌರುಷೇಯ ವಾಣಿ ಇಂದೂ ಕೂಡ ಉಪಲಬ್ಧವಾಗಲು ಸಾಧ್ಯ.

೩೬

ಎಲ್ಲ ನದಿಗಳು ಸಮುದ್ರ ಸೇರುವಂತೆ ಎಲ್ಲ ಶ್ರುತಿಗಳು ಅಂದರೆ ವೇದ ಮಂತ್ರಗಳು ಭಗವಂತನದೇ ಗುಣಗಾನ ಮಾಡುತ್ತವೆ.

೩೭

ಭಗವಂತ ವಾಗ್ಮೀ ಅರ್ಥಾತ್ ವ್ಯಕ್ತ. ವೇದವಾಣಿ ಯಾರ ಮುಖದಿಂದ ಹೊರಡುತ್ತದೊ ಅಂಥವನಿಗಿಂತ ವ್ಯಕ್ತ ಯಾರಿರಲು ಸಾಧ್ಯ?

೩೮

ವಿಷ್ಣು ಸಹಸ್ರನಾಮ ಭಗವಂತನನ್ನು ***ಅಮೃತಾಂಶುದ್ಭವಃ*** ಎಂದು ಹೇಳುತ್ತದೆ. ಅಮೃತಾಂಶು = ತಂಪಾದ ಕಿರಣ, ಚಂದ್ರ. ಅವನ ಉದ್ಗಮ ಭಗವಂತನ ಮನದಿಂದಾಗಿದೆ. ಹೀಗೆಂದು ವೇದವಾಕ್ಯವಿದೆ. ***ಚಂದ್ರಮಾ ಮನಸೋ ಜಾತಃ*** ಇದು ವೇದ ವಾಕ್ಯ.

೩೯

ವಿಷ್ಣು ಸಹಸ್ರನಾಮ ಭಗವಂತನನ್ನು ***ವೇದ, ವೇದವಿತ್, ವೇದಾಂಗಃ*** ಎಂದೆನ್ನುತ್ತದೆ. ಮಾನವನಿಗೆ ಭೋಧನೆಗಾಗಿ ಭಗವಂತ ವೇದ ರಚಿಸುತ್ತಾನೆ. ಆದರೆ ಯಾರಿಗೆ ವೇದ ಅರ್ಥವಾಗುವುದಿಲ್ಲವೊ ಅಂಥವರಿಗಾಗಿ ವಿಷ್ಣು ಸಹಸ್ರ ನಾಮ. ಅದು ವೇದದ ರೂಪವೇ ಆಗಿದೆ.

ವೇದದ ಚಿಂತನ-ಮನನ ಮಾಡುವ ಋಷಿ ಮುನಿಗಳು ಭಗವಂತನ ರೂಪವೇ. ವೇದವನ್ನು ತಿಳಿದ ಮಹರ್ಷಿ ವ್ಯಾಸರು ಭಗವಂತನ ರೂಪವೇ. ವೇದ ಜ್ಞಾನಕ್ಕಾಗಿ ವ್ಯಾಕರಣಾದಿ ಷಡ್ ಅಂಗಗಳ ಅಧ್ಯಯನ ಮಾಡಬೇಕಾಗುತ್ತದೆ. ಆ ಅಂಗಗಳು ಕೂಡ ಭಗವಂತನ ರೂಪವೇ.

೪೦

೧. ನಾಲ್ಕೂ ವೇದಗಳ ಮಂತ್ರ.

೨. ವೇದ ಸಾರ ಗಾಯತ್ರಿ ಮಂತ್ರ.

೩. ಗೀತೋಕ್ತ 'ಓಂ ತತ್ ಸತ್ ಮಂತ್ರ'.

೪. 'ರಾಮಕೃಷ್ಣ-ಹರಿ ಇತ್ಯಾದಿ ಸಂತರು ಕಲಿಸಿದ ಮಂತ್ರ. ಈ ಮಂತ್ರಗಳ ಮನನ ಮಾಡಿದ ಭಕ್ತರಿಗೆ ಭಗವಂತನ ಸಾಕ್ಷಾತ್ಕಾರವಾಗುತ್ತದೆ.

(ಮುಂದುವರಿಯುವುದು...)

* * *

"ಶಾಂತಿಯು ಯುದ್ಧಕ್ಕಿಂತ ಉತ್ತಮ ಆದರೆ ಖಂಡಿತವಾಗಿಯೂ ಹೆಚ್ಚು ಕಷ್ಟಕರ.

- ಜಾರ್ಜ್ ಬರ್ನಾಡ್ ಷಾ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್ ನಡೆಸುತ್ತಿರುವ ಖಾದಿ ಉದ್ಯಮವನ್ನು ಅಭಿವೃದ್ಧಿ ಪಡಿಸಲು ಎಲ್ಲ ರೀತಿಯಿಂದಲೂ ಪ್ರಯತ್ನಿಸಲಾಗುತ್ತಿದೆ. ಅದರ ಅಂಗವಾಗಿ ಖಾದಿ ವಿಷಯದ ಬಗ್ಗೆ ಪ್ರೀತಿ ಉಳ್ಳವರನ್ನು ಮತ್ತು ಕಾದಿ ಕ್ಷೇತ್ರದಲ್ಲಿ ಅನುಭವ ಇರುವಂಥವರನ್ನು ಹಾಗೂ ಆಧುನಿಕ ರೀತಿಯಲ್ಲಿ ಬಟ್ಟೆ ವಿನ್ಯಾಸ ಮಾಡುವವರನ್ನು ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ. ಇಂಥ ಒಂದು ಪ್ರಯತ್ನದ ಫಲವಾಗಿ ತಾರಾ ಅಸ್ಲಂರವರು ತಮ್ಮ ಮಗಳೊಂದಿಗೆ ಟ್ರಸ್ಟಿನ ಖಾದಿ ವಿಭಾಗಕ್ಕೆ ಭೇಟಿಕೊಡುವಂತಾಯಿತು. ತಾರಾ ಅಸ್ಲಂರವರು ಫ್ಯಾಬ್-ಇಂಡಿಯಾದಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿದ ಅನುಭವಸ್ಥರು. ಅವರು ಈಗ ಸ್ವತಃ ಬೆಂಗಳೂರಿನಲ್ಲಿ 'ನೇಚರ್ಸ್ ಎಲಿಸ್' ಎಂಬ ಸಂಸ್ಥೆಯ ಮೂಲಕ ದೇಸೀ ವಸ್ತುಗಳ ಮಾರಾಟ ಮಳಿಗೆ ಹಾಗೂ ಸ್ಥಳೀಯವಾಗಿ ತಯಾರಾದ ಬಟ್ಟೆಗಳಲ್ಲಿ ಹೊಸ ಮಾದರಿಯ ವಿನ್ಯಾಸಗಳನ್ನು ತಯಾರಿಸಿ ಮಾರುವ ಹವ್ಯಾಸ ಇರಿಸಿಕೊಂಡಿದ್ದಾರೆ. ಟ್ರಸ್ಟಿನಲ್ಲಿ ಉತ್ಪಾದನೆಯಾಗುತ್ತಿರುವ ಖಾದಿ ಬಟ್ಟೆ ನೋಡಿ ಸಂತೋಷಪಟ್ಟರು. ತಮ್ಮ ಕೇಂದ್ರದ ಮೂಲಕ ಯಥಾಶಕ್ತಿ ಮಾರಾಟದ ವಿಷಯದಲ್ಲಿ ಸಹಾಯ ಮಾಡುವುದಾಗಿ ಹೇಳಿದರು. ಆ ಮಾತಿನಂತೆ ಅವರು ಅಗಸ್ಟ್ ತಿಂಗಳ ಮೊದಲವಾರದಲ್ಲಿ ಇಂದಿರಾನಗರದಲ್ಲಿರುವ 'ದಿ ಆಂಟ್ಸ್' ಎಂಬ ಮಳಿಗೆಯಲ್ಲಿ ಟ್ರಸ್ಟಿನ ಖಾದಿ ಸಿದ್ಧ ಉಡುಪುಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಟ್ಟಿದ್ದರು. ತಾರಾ ಅಸ್ಲಂರವರಿಗೆ ಟ್ರಸ್ಟ್ ತುಂಬ ಆಭಾರಿಯಗಿದೆ. ಟ್ರಸ್ಟಿನಲ್ಲಿ ತಯಾರಾಗುವ ಖಾದಿ ಇನ್ನು ಮುಂದೆ ನೈಸರ್ಗಿಕ ಬಣ್ಣದಿಂದ ಆಗಬೇಕೆಂಬ ಉದ್ದೇಶ್ಯದಿಂದ ಖಾದಿ ದಾರಕ್ಕೆ ನೈಸರ್ಗಿಕ ಬಣ್ಣ ಹಾಕುವುದನ್ನು ಆರಂಭಿಸಲಾಯಿತು. ಈ ಉದ್ಯಮ ಪ್ರಾರಂಭಿಸಲು ಸಹಾಯ ಮತ್ತು ಮಾರ್ಗದರ್ಶನ ಮಾಡುವುದಕ್ಕಾಗಿ ಸಾಗರದಿಂದ ಎನ್.ಎಂ.ಕುಲಕರ್ಣಿಯವರು ಬಂದು ಹೋದರು.

ದತ್ತು ವಿಭಾಗಕ್ಕೆ ಇತ್ತೀಚಿಗೆ ಇತ್ತೀಚಿಗೆ ಒಂದು ವಾರದ ಹೆಣ್ಣು ಮಗುವಿನ ಸೇರ್ಪಡೆಯಾಯಿತು. ಈ ಮೊದಲು ದತ್ತು ಕೊಟ್ಟಿದ್ದ ಈಗ ಆರು ವರ್ಷದ ಸಂಧ್ಯಾ ಎಂಬ ಬಾಲಕಿಯನ್ನು ದತ್ತು ಕೇಂದ್ರಗಳ ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯು ಸಂದರ್ಶಿಸಿ "ದೊಡ್ಡವಳಾದ ಮೇಲೆ ನೀನು ಏನಾಗಲು ಬಯಸುತ್ತಿಯೆ?" ಎಂದು ಕೇಳಿದಾಗ ಅವಳು ಮೇಲುಕೋಟೆಯಲ್ಲಿರುವ 'ಸಂತೋಷಪ್ಪ' ಹೇಳುವ ರೀತಿಯಲ್ಲಿ ಮಾಡುವುದಾಗಿ ಉತ್ತರಿಸಿದ್ದನ್ನು ಕೇಳಿ ಸಮಿತಿಯವರಿಗೆ ಸಂತೋಷವೂ ಆಶ್ಚರ್ಯವೂ ಆಯಿತು. ಮೇಲುಕೋಟೆಯ ದತ್ತು ಕೇಂದ್ರದ ಬಗ್ಗೆ ಅವರಲ್ಲಿ ಸದಭಿಪ್ರಾಯ ಮೂಡಿತು. ಈ ವಿಷಯವನ್ನು ಸಮಿತಿಯವರೇ ತಿಳಿಸಿದ್ದಾರೆ.

ಮೈಸೂರಿನಲ್ಲಿರುವ ಟ್ರಸ್ಟಿನ ಅಭಿಮಾನಿ ಮತ್ತು 'ಅಮೃತ ಆಯುರ್ವೇದಾಲಯ'ವನ್ನು ನಡೆಸುತ್ತಿರುವ ಡಾ॥ ರಾಜೇಂದ್ರ ಮತ್ತು ಡಾ॥ ಭಾರತಿ ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ಶ್ರೀ ಸುರೇಂದ್ರ ಕೌಲಗಿಯವರ ಆರೋಗ್ಯವನ್ನು ವಿಚಾರಿಸಿದರು.

ಹಿರಿಯ ಚಿಂತಕ, ರಂಗಕರ್ಮಿ ಶ್ರೀ ಪ್ರಸನ್ನ ಮತ್ತು ಮೈಸೂರಿನ ಪತ್ರಕರ್ತ ಶ್ರೀ ಓಂಕಾರ್ ಮತ್ತು ಅವರ ಶ್ರೀಮತಿ ಸ್ನೇಹಾ ಹಾಗು ಮಗಳು ಚಿ.ತುಷಾರ ಟ್ರಸ್ಟಿಗೆ ಭೇಟಿ ಕೊಟ್ಟರು.

ಮಂಡ್ಯದ ಸಾಹಿತಿ ಮತ್ತು ಚಿಂತಕ ಪ್ರೊ. ಎಚ್.ಎಲ್.ಕೇಶವಮೂರ್ತಿ ಮತ್ತು ನಿವೃತ್ತ ಪ್ರಾಧ್ಯಾಪಕ ಜಿ.ಟಿ.ವೀರಪ್ಪ ಮತ್ತು ಸಮಾಜವಾದಿ ಚಿಂತಕ ಎಚ್.ಆರ್.ಕೃಷ್ಣೇಗೌಡ ಟ್ರಸ್ಟಿಗೆ ಭೇಟಿ ಕೊಟ್ಟರು.

ಬೆಂಗಳೂರಿನ ಯಲಹಂಕದಲ್ಲಿರುವ ನಾಗಾರ್ಜುನ ಕಾಲೇಜ್‌ನ ಯುವ ಪ್ರಾಂಶುಪಾಲರಾದ ಮನೋಹರ್ ನಾರಾಜೆ ಮತ್ತು ಕಛೇರಿ ಮುಖ್ಯಸ್ಥರಾದ ಶ್ರೀ ಕುಲಕರ್ಣಿ ಭೇಟಿ ಕೊಟ್ಟರು. ತಮ್ಮ ಕಾಲೇಜಿನಲ್ಲಿ ಖಾದಿ ವಾತಾವರಣ ಉಂಟು ಮಾಡಲು ಟ್ರಸ್ಟಿನ ಸಹಕಾರ ಕೋರಿದರು.

* * *

೨೦೧೨ ಅಗಸ್ಟ್ ಮಾಹೆಯ ದಾನಿಗಳು

ಶ್ರೀಮತಿ ಪ್ರೇಮಲತಾ, ಶ್ರೀಮತಿ ವಸಂತಕುಮಾರಿ,
ಶ್ರೀ ರವೀಂದ್ರ ಮೊರಬ್, ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ,
ಶ್ರೀ ಎನ್.ಆರ್.ಅರುಣ್‌ಕುಮಾರ್, ಶ್ರೀ ಎಂ.ಪಿ.ರಮೇಶ್, ಶ್ರೀ ಸಿ.ಪಿ.ಭಗವಾನ್,
ಶ್ರೀ ಎ.ವಿ.ಬಾಲಸುಬ್ರಮಣ್ಯಂ, ಶ್ರೀ ಜಿ.ವಿ.ಸುಂದರ್,
ಶ್ರೀಮತಿ ಕೆ.ಕುಸುಮಾ ಕುಮಾರಿ, ಶ್ರೀ ಸಿ.ಎಸ್.ಬನಶಂಕರಮ್ಮ,
ಶ್ರೀಮತಿ ಎಸ್.ತಾರಾ, ಶ್ರೀಮತಿ ವಿ.ಸೀತಾಲಕ್ಷ್ಮಿ, ಶ್ರೀಮತಿ ಎಸ್.ರಾಧಾ,
ಶ್ರೀಮತಿ ಶಾರದಾ ಮತ್ತು ಜಯಲಕ್ಷ್ಮಿ, ಶ್ರೀ ಎಂ.ವಿ.ದೇಶಪಾಂಡೆ,
ಶ್ರೀಮತಿ ಕೆ.ತಂಗಮ್ಮ – ಬೆಂಗಳೂರು

ಶ್ರೀ ಬಿ.ಕೆ.ಶಿವಣ್ಣ, ಶ್ರೀಮತಿ ಸುಂದರಿ ಮಣಿ ಅಯ್ಯ,
ಡಾ॥ಎಚ್.ಆರ್.ಮಣಿಕರ್ಣಿಕಾ, ಶ್ರೀಮತಿ ವಿಜಯಾ ಸಿಂಧುವಳ್ಳಿ,
ಶ್ರೀ ಬಿ.ಎಸ್.ಬಸವರಾಜು, ಶ್ರೀ ಆರ್.ಡಬ್ಲ್ಯೂ.ಎನ್. ಅಯ್ಯಂಗಾರ್ – ಮೈಸೂರು


ಶ್ರೀಮತಿ ಜನಿರಾವ್ – ಆಗುಂಬೆ
ಶ್ರೀ ಕೆ.ಸುರೇಂದ್ರ ಹಗ್ಡೆ – ಕೋಟಾ
ಶ್ರೀಮತಿ ಸುನಂದ ಕೆ. ಶೆಟ್ಟಿ, ಶ್ರೀ ರಮೇಶ್ ಕುಲಾಲ್ – ಮುಂಬಯಿ
ಶ್ರೀ ಡಿ.ಕೃಷ್ಣಪ್ಪಗೌಡರು, ಶ್ರೀ ಜಿ.ಟಿ.ವೀರಪ್ಪ – ಮಂಡ್ಯ
ಶ್ರೀ ಕೆ.ರಮೇಶ್‌ರಾವ್ – ಮಂಗಳೂರು

ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

* * *

ಜನಪದ ನಿಲಯದ ಅಂತರಂಗದಲ್ಲಿ.. ೧೦೩

- ಸುರೇಂದ್ರ ಕೌಲಗಿ



ಅಯ್ಯೋ! ಬೈಲವ್ವ ಇನ್ನಿಲ್ಲವಾದಳು! ಅವಳು ತೀರಿಕೊಂಡಳೆಂಬ ಸುದ್ದಿ ಕೇಳಿ ಆಘಾತವಾಯಿತು. ಆ ಸುದ್ದಿ ಬಂದದ್ದು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹೊನ್ನಾವರ ಬಳಿಯ ಶ್ರೀ ಕೃಷ್ಣಧಾಮ ಆಶ್ರಮದ ವ್ಯವಸ್ಥಾಪಕರಾದ ಶ್ರೀ ಕೆ.ಟಿ.ಜೋಯಿಸ್‌ರಿಂದ. ಒಂದು ನಿಮಿಷ ಮೌನ ಆಚರಿಸಿ ಅನಾಥ ಬಾಲೆಗೆ ಶಾಂತಿಯನ್ನು ಕೋರಿದೆ. ನಂತರ ನೆನಪಿನ ಸುರಳಿ ಬಿಚ್ಚಿತು. ಸುಮಾರು ೪೭ ವರ್ಷಗಳ ಹಿಂದೆ ಜನಪದ ನಿಲಯದ ಮುಂದೆ ಚಳಿಗಾಲದ ಒಂದು ರಾತ್ರಿ ಸುಮಾರು ೭ ಗಂಟೆಗೆ ಒಬ್ಬ ಅಂಗವಿಕಲ ಬಾಲಕಿ ಮತ್ತು ಒಬ್ಬ ಗಂಡಸು ಬಂದು ನಿಂತ ದೃಶ್ಯ ಕಂಡಿತು. ಅವಳು ಸುಮಾರು ೧೦ ವರ್ಷದವಳಿರಬಹುದು. ಎಡಗಾಲಿನ ಪಾದ ತಿರುಚಿಕೊಂಡಿತ್ತು. ಎಡಗೈಯನ್ನು ಎತ್ತಿ ಕುಂಟುತ್ತ ನಡೆಯುತ್ತಿದ್ದಳು. ಜೊತೆಗೆ ಬಂದಿದ್ದ ಮನುಷ್ಯನನ್ನು ಬಾಲಕಿಯ ಹೆಸರೇನೆಂದು ಕೇಳಲಾಗಿ ಬೈಲವ್ವ ಎಂದು ಉತ್ತರಿಸಿದ. ಜೊತೆ ಬಂದಿದ್ದ ಮನುಷ್ಯ ಅವಳ ತಂದೆಯಾಗಿರದೆ ಬಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿದ್ದ ಬಾಲಾಪರಾಧಿ ಮಕ್ಕಳ ಶಾಲೆಯ ಪೋಲೀಸ್ ನೌಕರನಾಗಿದ್ದ. ಆ ಬಾಲೆಯ ಜೀವನೇತಿಹಾಸವನ್ನು ನೋಡಿದಾಗ ಅವಳ ತಂದೆಯ ಕಸುಬು ಬೇಟೆಯಾಡುವುದು, ಜಾತಿ ಹರಿಣಶಿಕಾರಿ. ಸರಿ ಆ ಬಾಲೆಯನ್ನು ಟ್ರಸ್ಟ್ ನಡೆಸುತ್ತಿದ್ದ ಅಂಗವಿಕಲ ಮಕ್ಕಳ ಸೇವಾ ವಿಭಾಗವಾದ ಕರುಣಾಗೃಹಕ್ಕೆ ಸೇರಿಸಿಕೊಳ್ಳಲಾಯಿತು. ಅವಳು ತನ್ನ ಎಡಗೈಯನ್ನು ಮೇಲಕ್ಕೆತ್ತಿ ಕುಂಟುತ್ತಾ ಕರುಣಾಗೃಹದ ಕಡೆ ನಡೆದಳು. ಲಂಗ ಧರಿಸಿದ್ದಳು, ಮೈಬಣ್ಣ ಕಪ್ಪು, ಅಷ್ಟು ಲಕ್ಷಣವಲ್ಲದ ಮುಖ, ತೊದಲು ನುಡಿ. ಎಲ್ಲ ರೀತಿಯಲ್ಲೂ ಅಂಗವಿಕಲಳಾದ ಬೈಲವ್ವನನ್ನು ಕರುಣಾಗೃಹಕ್ಕೆ ಸೇರಿಸಿಕೊಂಡಾಗ ಧನ್ಯತಾ ಭಾವ ಮೂಡಿತು.

ಆ ಸಮಯದಲ್ಲಿ ಟ್ರಸ್ಟ್ ಸಮಾಜದ ತೊಂದರೆಗೆ ಒಳಗಾದ ಮಹಿಳೆಯರಿಗಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯ ಎರಡು ವರ್ಷದ ಸಂಕ್ಷಿಪ್ತ ಶಿಕ್ಷಣ ಶಾಲೆಯನ್ನು ನಡೆಸುತ್ತಿತ್ತು. ಸುಮಾರು ಇಪ್ಪತ್ತು ಜನ ವಿದ್ಯಾರ್ಥಿನಿಯರಿದ್ದರು. ಅವರು ಸಹ ಕರುಣಾಗೃಹದಲ್ಲಿ ವಾಸವಾಗಿದ್ದರು. ಶಾರೀರಿಕವಾಗಿ ದೃಢತೆಯುಳ್ಳ ಆದರೆ ಸಾಮಾಜಿಕವಾಗಿ ತೊಂದರೆ ಇರುವ ಮತ್ತು ದೈಹಿಕವಾಗಿ ಅಂಗವಿಕಲತೆಯಿರುವ ಸುಮಾರು ಇಪ್ಪತ್ತು ಅಂಗವಿಕಲ ಮಕ್ಕಳೂ ಸಹ ಜೀವನ ನಡೆಸುತ್ತಿದ್ದರು. ಬೈಲವ್ವ ಈ ಕುಟುಂಬ ಸೇರಿದಳು. ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರು ಅವಳಿಗೆ ಭಾಗೀರಥಿ ಎಂದು ಪುನರ್‌ನಾಮಕರಣ ಮಾಡಿದರು. ಮಾರನೆಯ ದಿನದಿಂದ ಎಲ್ಲರೂ ಅವಳನ್ನು ಭಾಗೀರಥಿ ಎಂದು ಕರೆಯಲಾರಂಭಿಸಿದರು. ಹೊಸ ಹೆಸರು ಬಂದಿದ್ದರಿಂದಲೋ ಅಥವಾ ಹೊಸ ಪರಿಸರದ ಕಾರಣದಿಂದಲೋ ಬೈಲವ್ವ

ಲವಲವಿಕೆಯಿಂದ ಕರುಣಾಗೃಹದಲ್ಲಿ ಓಡಾಡಲು ಪ್ರಾರಂಭಿಸಿದಳು. ಅವಳ ದೈಹಿಕ ತೊಂದರೆ ತಿಳಿದುಕೊಂಡ ಉಳಿದೆಲ್ಲ ಸಹಜೀವಿಗಳು ಅವಳಿಗೆ ಎಲ್ಲ ಕೆಲಸದಲ್ಲಿ ನೆರವಾಗುತ್ತಿದ್ದರು. ಅವಳನ್ನು ಬಲು ಪ್ರೀತಿಯಿಂದ ತಮ್ಮವಳನ್ನಾಗಿ ಮಾಡಿಕೊಂಡರು. ಭಾಗೀರಥಿಯೂ ಸಹ ಅವರೆಲ್ಲರ ಪ್ರೀತಿಗೆ ತಕ್ಕಂತೆ ಬಲು ಚಟುವಟಿಕೆಯಿಂದ ಕರುಣಾಗೃಹದಲ್ಲಿ ಎಲ್ಲ ಕೆಲಸದಲ್ಲಿ ಭಾಗಿಯಾಗುತ್ತಿದ್ದಳು. ಅವಳೂ ಸಹ ಕರುಣಾಗೃಹದ ಉಳಿದ ಮಕ್ಕಳಂತೆ ಒಂಟೆತ್ತಿನ ಗಾಡಿಯಲ್ಲಿ ಕುಳಿತು ಮೇಲುಕೋಟೆ ಬಸ್ ನಿಲ್ದಾಣದ ಬಳಿ ಇದ್ದ ಸರ್ಕಾರಿ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದಳು. ಶಾಲೆಯಿಂದ ಹಿಂದಿರುಗಿದ ನಂತರ ಮಕ್ಕಳೆಲ್ಲರು ತೋಟದ ಕೆಲಸ ಇತ್ಯಾದಿ ಮಾಡುತ್ತಿದ್ದರು. ಭಾಗೀರಥಿಯೂ ಸಹ ತನ್ನ ಅಂಗವಿಕಲತೆಯನ್ನು ಮರೆತು ಉತ್ಸಾಹದಿಂದ ಕೆಲಸಮಾಡುತ್ತಿದ್ದಳು. ತೋಟದ ತುಂಬ ಕುಂಟಕೊಂಡೆ ಓಡಾಡುತ್ತಿದ್ದಳು. ತನ್ನ ಬಲಗಾಲಿನ ಬಲವೂರಿ ಕುಳಿತುಕೊಂಡು ಪಾತಿಯನ್ನು ಮಾಡುತ್ತಿದ್ದಳು. ಪಾತಿಗಳನ್ನು ತುಂಬಾ ಸಮತಟ್ಟಾಗಿ ಕಲ್ಲುಕಸ ಇಲ್ಲದಂತೆ ಕುಶಲತೆಯಿಂದ ಮಾಡುತ್ತಿದ್ದಳು. ಹಾಗೆ ಕೆಲಸ ಮಾಡುವಾಗ ಅವಳ ಎಡಗೈ ಸ್ವಲ್ಪ ಮೇಲೆ ಇರುತ್ತಿತ್ತು. ಎಡ ಮುಷ್ಟಿ ಮುಚ್ಚಿರುತ್ತಿತ್ತು. ತನ್ನ ಒಂದು ಕೈಯಿಂದಲೇ ತನ್ನ ಬಟ್ಟೆಯನ್ನು ಒಗೆದುಕೊಳ್ಳುತ್ತಿದ್ದಳು. ತಲೆಯನ್ನು ಬಾಚಿಕೊಳ್ಳುತ್ತಿದ್ದಳು. ತನ್ನ ಶಾರೀರಿಕ ತೊಂದರೆಯಿಂದಾಗಿ ಎಂದೂ ಯಾರಿಗೂ ತೊಂದರೆ ಕೊಟ್ಟವಳಲ್ಲ. ಅಷ್ಟೇ ಅಲ್ಲ ತನ್ನ ಜೊತೆಯಲ್ಲಿದ್ದ ಅಂಗವಿಕಲ ಮಕ್ಕಳಿಗೆ ಯಥಾಶಕ್ತಿ ಸಹಾಯ ಮಾಡುತ್ತಿದ್ದಳು. ಭಾಗೀರಥಿಯ ಶಾರೀರಿಕ ತೊಂದರೆಯೊಂದಿಗೆ ಇನ್ನೊಂದು ತೊಂದರೆ ಇರುವುದು ನಿಧಾನವಾಗಿ ಗೊತ್ತಾಯಿತು. ಅವಳು ಓದುವುದು ಮತ್ತು ಬರೆಯುವುದರಲ್ಲಿ ತುಂಬಾ ನಿಧಾನವಾಗಿದ್ದಳು. ಈ ಕಾರಣದಿಂದ ಅವಳು ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗದೆ ಹೋಯಿತು. ಮಾಧ್ಯಮಿಕ ಆರನೇ ತರಗತಿವರೆಗೆ ಹೇಗೋ ಕಷ್ಟ ಪಟ್ಟು ಶಾಲೆಗೆ ಹೋದಳು. ಅಲ್ಲಿಗೆ ಅವಳ ವಿದ್ಯಾಭ್ಯಾಸ ನಿಂತಿತು. ಅದೇ ವೇಳೆಗೆ ಟ್ರಸ್ಟ್ ಖಾದಿ ಕೆಲಸವನ್ನು ಪ್ರಾರಂಭಿಸಿತು. ನೂಲು ಉತ್ಪಾದನೆಗಾಗಿ ಅಂಬರ ಚರಕಾಗಳು ಬಂದವು. ಭಾಗೀರಥಿ ನೂಲುಗಾರಿಕೆ ಕಲಿತಳು. ಕೆಲಸದ ವಿಷಯದಲ್ಲಿ ಎಂದೂ ಸೋಮಾರಿಯಲ್ಲ. ಕುಂಟುಕೊಂಡೇ ಕರುಣಾಗೃಹದ ಕಸಗುಡಿಸುವುದು, ನೆಲ ಒರೆಸುವುದು ಮತ್ತು ಮೈದಾನದಲ್ಲಿ ಬಿದ್ದ ಕಸಕಡ್ಡಿಗಳನ್ನು ಆಯ್ದು ಹಾಕುವುದು ಇತ್ಯಾದಿ ಶ್ರಮ ನಿಷ್ಠ ಕೆಲಸವನ್ನು ಉತ್ಸಾಹದಿಂದಲೇ ಮಾಡುತ್ತಿದ್ದಳು. ಒಂದೇ ಕೈ, ಅಂದರೆ ಬಲಗೈಯಿಂದ ಮಾಡಲು ಸಾಧ್ಯವಾಗುವ ಯಾವ ಕೆಲಸವನ್ನೂ ಅವಳು ಮಾಡದೇ ಇರುತ್ತಿರಲಿಲ್ಲ. ಆದ್ದರಿಂದ ಅಂಬರ ಚರಕಾ ಬಂದ ಮೇಲೆ ನೂಲುವುದನ್ನು ಬಹುಬೇಗನೆ ಕಲಿತಳು. ದಾರ ಕಿತ್ತು ಹೋದರೆ ಬಲಗೈಯಿಂದ ದಾರ ಪೋಣಿಸುತ್ತಿದ್ದಳು ಮತ್ತು ಅದೇ ಬಲಗೈಯಿಂದ ಚರಕಾ ನಡೆಸುತ್ತಿದ್ದಳು. ಆರು ಕದಿರುಗಳ ಮೇಲೆ ಏಕಕಾಲಕ್ಕೆ ದಾರ ಬರುವಂತೆ ಮಾಡುತ್ತಿದ್ದಳು. ಯಥಾ ಪ್ರಕಾರ ಅವಳ ಎಡಗೈ ಮೇಲೆ ಇರುತ್ತಿತ್ತು. ಪ್ರತಿನಿತ್ಯ ಸುಮಾರು ನಾಲ್ಕೈದು ಗಂಟೆಗಳ ಕಾಲ ಬೇಸರವಿಲ್ಲದೆ ನೂಲು ತೆಗೆಯುತ್ತಿದ್ದಳು. ಬೇರೆಲ್ಲ ನೂಲುಗಾರರಂತೆ ಅವಳ ದಾರವು ಸಮ ಪ್ರಮಾಣ ಮತ್ತು ಗಟ್ಟಿಯಾಗಿ ಇರುತ್ತಿತ್ತು. ಆರು ಕದಿರುಗಳ ಮೇಲೆ ದಾರ ತೆಗೆಯುವುದನ್ನು ನೋಡುವುದೇ ಸಂತೋಷದ ಸಂಗತಿಯಾಗಿತ್ತು. ಗಾಂಧೀಜಿ ಚರಕಾವನ್ನು ದುರ್ಬಲರ ಬಲರಾಮ್ ಎಂದು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತಿತ್ತು. ನೂಲು

ತೆಗೆಯುತ್ತಿದ್ದದ್ದರಿಂದ ಅವಳ ತಿಂಗಳ ದುಡಿಮೆ ಬೇರೆಯವರಿಗಿಂತ ಹೆಚ್ಚಾಗಿರುತ್ತಿತ್ತು. ಖಾದಿ ಕ್ಷೇತ್ರದ ನಿಯಮದಂತೆ ಕಾರ್ಮಿಕ ಕ್ಷೇಮ ಕಲ್ಯಾಣ ನಿಧಿಯನ್ನು ಹೊಂದಿದ್ದಳು. ಟ್ರಸ್ಟಿನಲ್ಲಿ ನಡೆದ ಖಾದಿ ಸಂಬಂಧಿ ಕಾರ್ಯಕ್ರಮವೊಂದರಲ್ಲಿ ಒಳ್ಳೆಯ ನೂಲುಗಾರರಿಗೆ ಸಲ್ಲುವ ಗೌರವ ಅವಳಿಗೆ ಸಂದಾಯವಾಗಿತ್ತು. ನೇಯ್ಗೆಯ ವಿಷಯದಲ್ಲಿ ಮಾತು ಬಾರದ ವಿಜಯ ಎಂಬುವವರಿಗೆ ಗೌರವ ಸಂದಿತ್ತು. ಉತ್ತಮ ನೂಲುಗಾರರೆಂಬ ಗೌರವ ವಯೋವೃದ್ಧ ಮತ್ತು ಕೇವಲ ಒಂದು ಕಣ್ಣಿನ ದೃಷ್ಟಿ ಹೊಂದಿದ್ದ ಭೈರಶೆಟ್ಟರಿಗೆ ದೊರೆತಿತ್ತು.

ಭಾಗೀರಥಿ ನೂಲುಗಾರಿಕೆಯ ಪರಿಶ್ರಮದಿಂದ ಹಣವನ್ನು ಸಂಗ್ರಹ ಮಾಡಿದ್ದಳು. ಸ್ಥಳೀಯ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದಳು. ಕಾಲಕ್ರಮದಲ್ಲಿ ಸರ್ಕಾರದಿಂದ ವೃದ್ಧಾಪ್ಯ ಮತ್ತು ಅಂಗವಿಕಲರ ವೇತನ ಯೋಜನೆ ಜಾರಿಗೆ ಬಂತು. ಆ ಯೋಜನೆಯ ಅನ್ವಯ ಭಾಗೀರಥಿಗೆ ಕೂಡ ಅಂಗವಿಕಲರ ವೇತನ ದೊರೆಯುವಂತೆ ಮಾಡಲಾಯಿತು. ಈ ರೀತಿ ಪ್ರತಿ ತಿಂಗಳು ಬರುತ್ತಿದ್ದ ಅಂಗವಿಕಲರ ಮಾಸಾಶನವನ್ನು ಭಾಗೀರಥಿ ಬ್ಯಾಂಕಿನಲ್ಲಿ ಇಡುತ್ತಿದ್ದಳು. ಕ್ರಮೇಣ ಹಣ ದೊಡ್ಡ ಮೊತ್ತದಲ್ಲಿ ಸಂಗ್ರಹವಾದ ಮೇಲೆ ಅವಳು ನಿಗದಿತ ಠೇವಣಿಯಲ್ಲಿ ತೊಡಗಿಸಿದಳು. ಅವಳು ಹಣವನ್ನು ದುಂದು ಮಾಡುತ್ತಿರಲಿಲ್ಲ. ಹಣವೆಂದರೆ ಅವಳಿಗೆ ಪ್ರೀತಿ. ಅವಳ ಹಣದ ಮೇಲಿನ ಪ್ರೀತಿಯನ್ನು ಜೊತೆಗಾರರು ವ್ಯಂಗ್ಯ ಮಾಡುತ್ತಿದ್ದದ್ದೂ ಉಂಟು. ಅದಕ್ಕೆ ಅವಳು ಸೊಪ್ಪು ಹಾಕುತ್ತಿರಲಿಲ್ಲ. ಅವಳ ಇನ್ನೊಂದು ದೌರ್ಬಲ್ಯ ಬೇರೆಯವರೊಂದಿಗೆ ಹೆಚ್ಚಾಗಿ ಬೆರೆಯದೇ ಇರುತ್ತಿದ್ದದ್ದು. ಚಿಕ್ಕವರಿರಲಿ ದೊಡ್ಡವರಿರಲಿ ಎಲ್ಲರ ಬಗ್ಗೆಯೂ ಒಂದಿಲ್ಲೊಂದು ದೂರು ಹೇಳುವುದು ಅವಳ ಸ್ವಭಾವವಾಗಿತ್ತು. ಹೀಗಾಗಿ ಅನೇಕ ಸಲ ಬೇರೆಯವರ ಅಸಹಕಾರಕ್ಕೆ ಗುರಿಯಾಗುತ್ತಿದ್ದಳು. ಕ್ರಮೇಣ ಅವಳು ಪ್ರೌಢಳಾದಳು. ಎಲ್ಲ ಚುನಾವಣೆಗಳಲ್ಲಿ ಕುಂಟುತ್ತಾ ಹೋಗಿ ಮತ ಚಲಾಯಿಸುತ್ತಿದ್ದಳು. ಅವಳಲ್ಲಿದ್ದ ದೊಡ್ಡ ಗುಣವೆಂದರೆ ಪ್ರಾಮಾಣಿಕತೆ. ಸುಳ್ಳು ಹೇಳುವುದು, ಮೋಸ ಮಾಡುವುದು ಇತ್ಯಾದಿ ಅವಳಿಗೆ ಗೊತ್ತಿರಲಿಲ್ಲ. ಅವಳು ಮುಗ್ಧಳಾಗಿದ್ದಳು. ಬೇರೆಯವರೂ ಮುಗ್ಧರೆಂದು ಭಾವಿಸುತ್ತಿದ್ದಳು.

ಕರುಣಾಗೃಹದ ಅನೇಕ ಹುಡುಗರು ವಿದ್ಯಾಭ್ಯಾಸ ಮಾಡಿ ಮುಂದೆ ಹೋದರು, ಸ್ವತಂತ್ರವಾದ ಉದ್ಯೋಗಗಳನ್ನು ನಡೆಸಿದರು. ಒಳ್ಳೆಯ ನೌಕರಿ ಪಡೆದರು. ಆದರೆ ಭಾಗೀರಥಿ ಮಾತ್ರ ಕರುಣಾಗೃಹಕ್ಕೆ ಬಂದಾಗ ಯಾವ ದೈಹಿಕ, ಶೈಕ್ಷಣಿಕ, ಮಾನಸಿಕ ಸ್ಥಿತಿಯಲ್ಲಿ ಇದ್ದಳೊ ಅದೇ ಸ್ಥಿತಿಯಲ್ಲಿ ಕೊನೆತನಕ ಇದ್ದಳೆಂಬುದು ಅತೀವ ದುಃಖದ ವಿಷಯ. ಭಾಗೀರಥಿಯ ದೈಹಿಕ ನ್ಯೂನತೆಯನ್ನು ಸರಿಪಡಿಸಲು ಅನೇಕ ವೈದ್ಯರಿಗೆ ಮುಖ್ಯವಾಗಿ ಮೂಳೆ ತಜ್ಞರಿಗೆ ತೋರಿಸಲಾಗುತ್ತಿತ್ತು. ಅವಳ ವಿಕಲತೆ ಹಳೆಯದಾದ್ದರಿಂದ ಅದನ್ನು ಸರಿಪಡಿಸಲು ಕಷ್ಟವೆಂದು ಹೇಳುತ್ತಿದ್ದರು. ಆದ್ದರಿಂದ ಅವಳ ದೈಹಿಕ ತೊಂದರೆಯನ್ನು ದೂರ ಮಾಡಲು ಆಗಲೇಯಿಲ್ಲ. ಕೊನೆಯಲ್ಲಿ ಅವಳಿಗೆ ಓಡಾಡಲು ಕಷ್ಟವಾಗಲಾರಂಭಿಸಿತು. ಹೆಚ್ಚಾಗಿ ಕುಳಿತುಕೊಂಡೇ ಇರಬೇಕಾಗಿತ್ತು. ಕಾಲ ಉರುಳಿದಂತೆ ಕರುಣಾಗೃಹದ ಪರಿಸರ ಬದಲಾಗುತ್ತಾ ಬಂತು. ಸಂಕ್ಷಿಪ್ತ ಶಿಕ್ಷಣ ಶಾಲೆ ಸ್ಥಗಿತಗೊಂಡಿತು. ಮುದ್ರಣಾಲಯವನ್ನು ಮುಚ್ಚಲಾಯಿತು. ಪೋಲಿಯೋ ಲಸಿಕೆ ಕಾರ್ಯಕ್ರಮದಿಂದಾಗಿ ಮತ್ತು ಸರ್ಕಾರದ ಇತರ ಕಲ್ಯಾಣಕಾರಿ ಯೋಜನೆಗಳಿಂದಾಗಿ

ಅಂಗವಿಕಲರ ಸಂಖ್ಯೆ ಕಡಿಮೆಯಾಗುತ್ತ ಹೋಯಿತು. ಬುದ್ಧಿವಂತ ಮತ್ತು ಸಮರ್ಥ ಅಂಗವಿಕಲರು ಮುಂದಿನ ಶಿಕ್ಷಣಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಕರುಣಾಗೃಹದಿಂದ ಹೊರ ಹೋದರು. ಭಾಗೀರಥಿ ಒಬ್ಬಳೇ ಹಳೆಯ ವಿದ್ಯಾರ್ಥಿನಿಯಾಗಿ ಉಳಿದು ಕೊಂಡಳು. ನೂಲುಗಾರಿಕೆ ನಿಂತು ಹೋಗಿ ಅವಳು ಮಾಡಬಹುದಾದ ಯಾವ ಕೆಲಸವೂ ಇಲ್ಲವಾಯಿತು. ಅವಳು ಹೀಗೆ ಇರುತಿರಲಾಗಿ ಟ್ರಸ್ಟಿಗೆ ಅವಳು ಭಾರವಲ್ಲದಿದ್ದರೂ ಟ್ರಸ್ಟಿನ ಇತರ ಕಾರ್ಯಕ್ರಮ ನಡೆಸಲು ಮುಖ್ಯವಾಗಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸಲು ಅಡಚಣೆ ಆಗಲಾರಂಭಿಸಿತು. ಆದ್ದರಿಂದ ಅವಳಿಗೂ ಅನುಕೂಲವಾಗುವಂತೆ ಬೇರೆ ಒಳ್ಳೆಯ ಸ್ಥಳಕ್ಕೆ ವರ್ಗಾಯಿಸಲು ಪ್ರಯತ್ನ ಮಾಡಲಾಯಿತು. ಆಗ ಹೊನ್ನಾವರದ ಶ್ರೀ ಕೃಷ್ಣ ಧಾಮದ ವಿಷಯ ತಿಳಿದು ಅಲ್ಲಿಗೆ ಭಾಗೀರಥಿಯನ್ನು ವರ್ಗಾಯಿಸಲಾಯಿತು. ಶ್ರೀ ಕೃಷ್ಣಧಾಮದ ಆಶ್ರಮವು ವೃದ್ಧರಿಗಾಗಿ ಕೆಲಸ ಮಾಡಿಕೊಂಡು ಬರುತ್ತಿರುವ ಒಳ್ಳೆಯ ಸಂಸ್ಥೆಯಾಗಿದೆ. ಆ ಸಂಸ್ಥೆಯು ದೊಡ್ಡ ಮನಸ್ಸು ಮಾಡಿ ಭಾಗೀರಥಿಯನ್ನು ಸೇರಿಸಿಕೊಂಡಿತು. ಆ ಸಂಸ್ಥೆಯು ಭಾಗೀರಥಿಗೆ ಮಾಡಿದ ಸೇವೆ ಅಪಾರ. ಅದಕ್ಕಾಗಿ ಜನಪದ ಸೇವಾ ಟ್ರಸ್ಟ್ ಕೃಷ್ಣಧಾಮಕ್ಕೆ ಬಹಳ ಆಭಾರಿಯಾಗಿದೆ. ಆಶ್ರಮದಲ್ಲಿ ಅವಳು ಹೃದಯಾಘಾತದಿಂದ ೨೦೧೨ ಜುಲೈ ೨೨ ಭಾನುವಾರದಂದು ತೀರಿಕೊಂಡಳು. ಇದರೊಂದಿಗೆ ಕರುಣಾಗೃಹದ ಕೊನೆಯ ಕೊಂಡಿಯೊಂದು ಕಳಚಿಕೊಂಡು ಹೋದಂತಾಯಿತು. ಒಂದು ವೇಳೆ ಸುದೈವದಿಂದ ಭಾಗಿರಥಿಯಲ್ಲಿ ಚಿಂತನಾ ಶಕ್ತಿ ಬೆಳೆದಿದ್ದರೆ ಅವಳು ಇಡೀ ಕರುಣಾಗೃಹದ ವ್ಯವಸ್ಥಾಪಕಿಯಾಗಿ ಕೆಲಸ ಮಾಡಬಹುದಿತ್ತು. ಅಂತಹ ಅವಕಾಶ ಅವಳಿಗೆ ದೊರೆಯಲಿಲ್ಲವಲ್ಲ ಎಂಬ ಕೊರಗು ಸದಾ ಕಾಡುತ್ತಿರುತ್ತದೆ.

ಭಾಗೀರಥಿ ಸ್ಮರಣೆ ಸದಾಕಾಲ ಉಳಿಯಲೋ ಎಂಬಂತೆ ಅವಳು ಇದ್ದ ಕರುಣಾಗೃಹ ಈಗ ಹೆತ್ತ ತಾಯಂದಿರಿಂದ ಪರಿತ್ಯಕ್ತವಾದ ಮಕ್ಕಳ ಆಶ್ರಯಧಾಮವಾಗಿದೆ. ಹತ್ತು ಮಕ್ಕಳಿಗೆ ಯೋಗ್ಯ ದತ್ತು ತಂದೆ ತಾಯಿ ದೊರೆತು ಇಂದು ಒಳ್ಳೆಯ ಲಾಲನೆ ಪಾಲನೆಯಲ್ಲಿ ಅವು ಬೆಳೆಯುತ್ತಿವೆ.

* * *

ಸದ್ವಿಚಾರ ನಿತ್ಯ ಕಿವಿಗಳ ಮೇಲೆ ಬೀಳುತ್ತಿದ್ದರೆ ಮನಸ್ಸಿನಲ್ಲಿಯ ಕೊಳೆ ನಿಧಾನವಾಗಿ ಸ್ವಚ್ಛವಾಗುತ್ತಾ ಹೋಗುವುದು.

* * *

ನಮ್ಮ ಜೀವನ ನಮ್ಮ ಸ್ವಂತದ್ದಲ್ಲ. ಅದು ನಮಗೆ ಸಮಾಜದ ಸೇವೆಗಾಗಿ ದೊರೆತಿದೆ ಮತ್ತು ಸಮಾಜದ ಸೇವೆ ಮಾಡುತ್ತ-ಮಾಡುತ್ತ ಮುಕ್ತವಾಗಬೇಕಿದೆ.

- ವಿನೋಬಾ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಸತ್ಯಸಾಯಿ ವಿಹಾರ ಕಾಲೇಜು– ಅಳಿಕೆ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ

ಹಾಗೂ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ವಿ.ಆಕಾಶ್, ಡಾ|| ಶರಣ್ ಅಂಗಡಿ, ಶ್ರೀ ಸಿ.ಬಿ.ಪ್ರಕಾಶ್ – ಬೆಂಗಳೂರು;
ಶ್ರೀ ಅಬ್ದುಲ್ ಜಮೀರ್ – ನಾರಾಯಣಪುರ;
ಶ್ರೀ ಗುಂಡಪ್ಪ – ಹೊಸಕೋಟೆ;
ಶ್ರೀ ಜಿ.ವಿ.ಸಂಪತ್ಕುಮಾರನ್, ಶ್ರೀ ಎಸ್.ಎಸ್.ಗೋಪಿನಾಥ್ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at J... pada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.